ಪ್ರೊ. ಕೆ.ಆರ್. ಸುಶೀಲೇಗೌಡ ಅವರ ಜೀವನ - ಸಾಧನೆ

(ಮಾಸ್ಟರ್ ಆಫ್ ಫಿಲಾಸಫಿ (ಎಂ.ಫಿಲ್) ಪದವಿಯ ಆಂಶಿಕ ಅವಶ್ಯಕತೆಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಸಂಪ್ರಬಂಧ)

ಸಂಶೋಧಕರು
ಮಹಂತೇಶ ಎಂ.

ಮಾರ್ಗದರ್ಶಕರು
ಡಾ. ಹೆಬ್ಬಾಲೆ ಕೆ. ನಾಗೇಶ್
ಸಹ ಪ್ರಾಧ್ಯಾಪಕರು

ಸಮಾಜ ವಿಜ್ಞಾನಗಳ ನಿಕಾಯ
...ಪದ ಅಧ್ಯಯನ ವಿಭಾಗ ಕನ್ನಡ ವಿಶ್ವವಿದ್ಯಾಲಯ ಹಂಪಿ
ವಿದ್ಯಾರಣ್ಯ - ೫೮೩ ೨೭೬

೨೦೦೯-೧೦

ಪ್ರೊ. ಕೆ.ಆರ್. ಸುಶೀಲೇಗೌಡ ಅವರ ಜೀವನ - ಸಾಧನೆ

(ಮಾಸ್ಟರ್ ಆಫ್ ಫಿಲಾಸಫಿ (ಎಂ.ಫಿಲ್) ಪದವಿಯ ಆಂಶಿಕ ಅವಶ್ಯಕತೆಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಸಂಪ್ರಬಂಧ)

ಸಂಶೋಧಕರು

ಮಹಂತೇಶ ಎಂ.

ನೋಂದಣಿ ಸಂಖ್ಯೆ: KUFS/00449.

ಮಾರ್ಗದರ್ಶಕರು

ಡಾ. ಹೆಬ್ಬಾಲೆ ಕೆ. ನಾಗೇಶ್

ಸಹ ಪ್ರಾಧ್ಯಾಪಕರು

ಸಮಾಜ ವಿಜ್ಞಾನಗಳ ನಿಕಾಯ
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

೨೦೦೯-೧೦

868

ಮಾರ್ಗದರ್ಶಕರ ದೃಢೀಕರಣ ಪತ್ರ

"**ಪ್ರೊ॥ ಕೆ.ಆರ್. ಸುಶೀಲೇಗೌಡ ಅವರ ಜೀವನ-ಸಾಧನೆ**" ಎಂಬ ಸಂಪ್ರಬಂಧವು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಗಾಗಿ ಮಹಂತೇಶ ಎಂ. ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಪ್ರಬಂಧವು ಮೂಲವಾಗಿದ್ದು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

(ಡಾ. ಹೆಬ್ಬಾಲೆ ಕೆ. ನಾಗೇಶ್)
ಸಹ ಪ್ರಾಧ್ಯಾಪಕರು
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದಿನಾಂಕ :
ಸ್ಥಳ : ವಿದ್ಯಾರಣ್ಯ

ಸಂಶೋಧಕರ ಪ್ರಮಾಣ ಪತ್ರ

"**ಪ್ರೊ. ಕೆ.ಆರ್. ಸುಶೀಲೇಗೌಡ ಅವರ ಜೀವನ-ಸಾಧನೆ**" ಎಂಬ ಸಂಪ್ರಬಂಧವನ್ನು ಡಾ. ಹೆಬ್ಬಾಲೆ ಕೆ. ನಾಗೇಶ್ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್. ಪದವಿಗಾಗಿ ಜಾನಪದ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

Mahantesh M.

(ಮಹಂತೇಶ ಎಂ.)
ಸಂಶೋಧಕರು
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ದಿನಾಂಕ :
ಸ್ಥಳ : ವಿದ್ಯಾರಣ್ಯ

ಯಾರ್ಯಾರ ನೆನಯಲಿ...

ಕನ್ನಡ ವಿಶ್ವವಿದ್ಯಾಲಯದಲ್ಲಿ ಎಂ.ಫಿಲ್. ಅಧ್ಯಯನ ಕೈಗೊಳ್ಳುವ ಅವಕಾಶ ಮಾಡಿಕೊಟ್ಟ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ.ಎ.ಮುರಿಗೆಪ್ಪ ಅವರಿಗೆ, ಮಾನ್ಯ ಕುಲಸಚಿವರಾದ ಡಾ. ಮಂಜುನಾಥ ಬೇವಿನಕಟ್ಟಿ, ಸಮಾಜ ವಿಜ್ಞಾನಗಳ ನಿಕಾಯದ ಡೀನ್ ಟಿ.ಅರ್ ಚಂದ್ರಶೇಖರ್ ಅವರಿಗೂ, ಅಧ್ಯಯನಾಂಗದ ನಿರ್ದೇಶಕರಾದ ಡಾ. ವೀರೇಶ ಬಡಿಗೇರ ಅವರಿಗೂ, ಎಂ.ಫಿಲ್. ಸಂಶೋಧನೆ ಕೈಗೊಳ್ಳಲು ನಿಬಂದಧ ವಿಷಯ ಸೂಚಿಸಿ, ಅಧ್ಯಯನದಲ್ಲಿ ತಪ್ಪುಗಳನ್ನು ತಿದ್ದುತ್ತಾ, ತಿಳಿಹೇಳಿದ ಮಾರ್ಗದರ್ಶಕರಾದ ಡಾ. ಹೆಬ್ಬಾಲೆ ಕೆ. ನಾಗೇಶ್ ಅವರಿಗೂ, ಜಾನಪದ ಅಧ್ಯಯನ ವಿಭಾಗದ ಮುಖ್ಯಸ್ಥರಾದ ಡಾ. ಸ.ಚಿ. ರಮೇಶ್ ಅವರಿಗೂ ಅಧ್ಯಯನಕ್ಕೆ ಸಹಕರಿಸಿದ ವಿಭಾಗದ ಗುರುಗಳಾದ ಡಾ.ಮೊಗಳ್ಳಿ ಗಣೇಶ್ ಅವರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ವಿಭಾಗದ ಸಿಬ್ಬಂಧಿ ವರ್ಗದವರಾದ ಅಜಿತ ಹಡಪದ, ನಾಗರಾಜ್, ಖಾಸಿಮ್ ಹಾಗೂ ಹಳ್ಳಿಮಾರಯ್ಯ ಅವರಿಗೆ ನನ್ನ ಕೃತಜ್ಞತೆಗಳು.

ನನ್ನ ವಿದ್ಯಾಭ್ಯಾಸಕ್ಕೆ ಸದಾ ಪ್ರೋತ್ಸಾಹಿಸುತ್ತಿರುವ ನನ್ನ ಪ್ರೀತಿಯ ತಂದೆಯವರಾದ ಮಲ್ಲಪ್ಪ ಟಿ. ತಾಯಿಯವರಾದ ಶ್ರೀಮತಿ ಮಹದೇವಮ್ಮರವರಿಗೆ ನನ್ನ ಕೃತಜ್ಞತೆಗಳು. ಸದಾ ನನ್ನ ಏಳ್ಗೆಯನ್ನು ಬಯಸುವ ಪ್ರೀತಿಯ ಅಣ್ಣನವರಾದ ನಾಗರಾಜು ಎಂ., ಅತ್ತಿಗೆಯವರಾದ ಶ್ರೀಮತಿ ಬಸಮ್ಮ, ಪುಟಾಣಿ ಯಶಸ್ವಿನಿ ಮತ್ತು ಭಾವ-ಅಕ್ಕಂದಿರಾದ ನಾಗರಾಜು ಹೆಚ್., ಶ್ರೀಮತಿ ಮಾಲತಿ ಎಂ., ಜಗಲೂರಪ್ಪ ಹೆಚ್., ಶ್ರೀಮತಿ ಜಯಲಕ್ಷ್ಮಮ್ಮ, ರಾಜು ಡಿ., ಶ್ರೀಮತಿ ರಂಗಮ್ಮ, ದಾಸಪ್ಪ ಹೆಚ್., ಶ್ರೀಮತಿ ಕಲಾವತಿ, ಮೈಲಾರಪ್ಪ ಹೆಚ್, ಶ್ರೀಮತಿ ಪುಷ್ಪಲತಾ, ಹಾಗೂ ಸಹೋದರರಾದ ಮಂಜುನಾಗ್ ಎಂ., ಶಂಕರನಾಗ್ ಎಂ., ಹಾಗೂ ಸೊಸೆಯಂದಿರು, ಅಳಿಯಂದಿರಿಗೂ ಹೃತ್ಪೂರ್ವಕ ಕೃತಜ್ಞತೆಗಳು.

ಸಂಶೋಧನೆಯ ಸಂದರ್ಭದಲ್ಲಿ ಚರ್ಚೆಗಿಳಿದು ವಿಷಯದಲ್ಲಿ ಸಹಕರಿಸಿ ಸದಾ ಓದುಗನನ್ನಾಗಿ ಮಾಡಿದ ಗೆಳೆಯ ಗುರುಸ್ವಾಮಿ ಸಿ., ತುಕರಾಮ, ಹೆಚ್. ಕೆ.ಧರ್ಮವೀರ, ಸುರೇಂದ್ರನಾಥ್, ಕುಮಾರಸ್ವಾಮಿ ಬಿ.ಇ., ಬಸವರಾಜು, ಸಂದೀಪ ಡಿ.ಡಿ., ಮೀಟಾನಾಯ್ಕ, ಅಮರೇಶ, ರಮೇಶ, ರವೀಶ, ಯಲ್ಲಣ್ಣ, ನವಲಗುಂದ ಗುರುರಾಜ್, ದಿನೇಶ್, ಮಹಲಿಂಗಪ್ಪ, ಬಸವರಾಜು, ಸುರೇಶ್ ಕೆ.ಸಿ., ರೇಣುಕುಮಾರಿ ಆರ್.ಟಿ., ಭಾಗಲಕ್ಷ್ಮಿ ಟಿ., ಜ್ಯೋತಿ ಎಸ್.

ಇವರಿಗೆ ತುಂಬು ಹೃದಯದ ಧನ್ಯವಾದಗಳು.

ಗ್ರಂಥಾಲಯದ ಗ್ರಂಥಪಾಲಕರಿಗೂ ಹಾಗೂ ಸಿಬ್ಬಂದಿ ವರ್ಗಕ್ಕೂ ಅನಂತ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಮಾಹಿತಿ ನೀಡಿ ಸಹಕರಿಸಿದ ಪ್ರೊ. ಕೆ.ಆರ್. ಸುಶೀಲೇಗೌಡ ಹಾಗೂ ಅವರ ಕುಟುಂಬದ ಎಲ್ಲಾ ಸದಸ್ಯರೆಲ್ಲರಿಗೂ ತುಂಬು ಹೃದಯದ ಕೃತಜ್ಞತೆಗಳು.

ಜನಪದ ಅಧ್ಯಯನ ವಿಭಾಗದ ಎಲ್ಲಾ ಸ್ನೇಹಿತರಿಗೂ ನನ್ನ ಕೃತಜ್ಞತೆಗಳು. ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಹಕರಿಸಿದ ಎಲ್ಲಾ ಸ್ನೇಹಿತರಿಗೂ ನನ್ನ ಅನಂತ ಧನ್ಯವಾದಗಳು.

ಅಚ್ಚುಕಟ್ಟಾಗಿ ಅಕ್ಷರ ಸಂಯೋಜನೆ ಮಾಡಿಕೊಟ್ಟ ಶ್ರೀ ನಾಗಭೂಷಣ, ಬಿ. ಹೆಚ್. ರಘು, ಎಂ.ನಾಗರಾಜ ಪ್ರಿಂಟ್‌ಟೆಕ್, ಚಿತ್ರದುರ್ಗ ಇವರಿಗೂ ನನ್ನ ಹೃದಯಪೂರ್ವಕವಾದ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ಮಹಂತೇಶ ಎಂ. ....✍



ಪ್ರೊ. ಕೆ.ಆರ್. ಸುಶೀಲೇಗೌಡ ಪ್ರಾಂಶುಪಾಲರು



ಪ್ರೊ. ಕೆ.ಆರ್. ಸುಶೀಲೇಗೌಡ ಅವರ ಜೀವನ – ಸಾಧನೆ

ಅಧ್ಯಾಯ – ಒಂದು

ಅಧ್ಯಯನದ ಉದ್ದೇಶ ಮತ್ತು ಸ್ವರೂಪ

ಭಾರತೀಯ ಸಾಹಿತ್ಯ ಪರಂಪರೆಯಲ್ಲಿ ಜಾನಪದ ಸಾಹಿತ್ಯ ಪ್ರಧಾನವಾದುದು ಕನ್ನಡ ಸಾಹಿತ್ಯವೂ ಪ್ರಾಚೀನ ಕಾಲದಿಂದ ಇಂದಿನ ಆಧುನಿಕ ಯುಗದವರೆಗೂ ತನ್ನ ಛಾಪನ್ನು ಮೂಡಿಸುತ್ತಿದೆ. ಅಂದಿನಿಂದ ಇಂದಿನವರೆಗೂ ಕನ್ನಡತನವನ್ನು ಉಳಿಸುವಲ್ಲಿ ಕನ್ನಡಕ್ಕೆ ನೀರೆರೆದು ಬೆಳೆಸಿದ ಮಹನೀಯರ ಸಂಖ್ಯೆ ಗಣನೀಯವಾದ್ದು, ಜಾನಪದ ಸಾಹಿತ್ಯವು ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ವಿನೂತನ ಅಧ್ಯಾಯವನ್ನೇ ತೆರೆದಿದೆ. ಈ ಸಾಹಿತ್ಯವು ಓದು ಬರಹ ತಿಳಿಯದ ಅನಕ್ಷರಸ್ಥರಿಂದ ಅವರ ಸ್ಫೂರ್ತಿಯಿಂದ ತನ್ನದೇ ಆದ ಮಾರ್ಗದಲ್ಲಿ ಮುಂದುವರೆದಿದೆ. ಈ ಸಂದರ್ಭದಲ್ಲಿ ಜಾನಪದ ಸಾಹಿತ್ಯದ ರೆಂಬೆಕೊಂಬೆಗಳಿಗೆ ಹೊಸ ಚಿಗುರು ಅಂಕುರಿಸಲು ಆರಂಭಿಸಿದವು ಹೀಗಾಗಿ ಜಾನಪದ ಸಾಹಿತ್ಯ ಕನ್ನಡ ಸಾಹಿತ್ಯದ ವಸಂತ ಕಾಲದ ಪರ್ವ ಕಾಲವೆನಿಸಿದೆ.

ಆಧುನಿಕ ಕಾಲದಲ್ಲಿ ಜಾನಪದ ಸಾಹಿತ್ಯವು ತನ್ನದೇ ಆದ ಬೆಳವಣಿಗೆಯನ್ನು ದಾಖಲಿಸಿದೆ. ಈ ಸಾಹಿತ್ಯದಲ್ಲಿ ಕಾದಂಬರಿ, ನಾಟಕ, ಕಾವ್ಯ ಮುಂತಾದ ಪ್ರಕಾರಗಳು ಇವೆ. ಈ ಸಂದರ್ಭದಲ್ಲಿ ನಿಸರ್ಗ ವರ್ಣನೆ, ಪ್ರೀತಿ ಪ್ರೇಮ ಮುಂತಾದ ವಿಷಯಗಳ ಮೇಲೆ ಬೆಳಕು ಚೆಲ್ಲುತ್ತಾ ಜಾನಪದ ಸಾಹಿತ್ಯ ಉತ್ತುಂಗ ಶಿಖರಕ್ಕೇರಿತು. ಇಂತಹ ಸಾಹಿತ್ಯವನ್ನು ಶ್ರೀಮಂತಗೊಳಿಸುವಲ್ಲಿ ಹಲವಾರು ಜನ ಕವಿಗಳ ಲೇಖಕರು ಅನುಪಮ ಸೇವೆ ಸಲ್ಲಿಸಿ ಅವಿಸ್ಮರಣೀಯರಾಗಿರುತ್ತಾರೆ. ಅಂಥವರಲ್ಲಿ ಪ್ರೊ. ಕೆ.ಆರ್. ಸುಶೀಲೇಗೌಡ ಅವರು ಒಬ್ಬರು.

ಜನಪದವನ್ನು ಸರಿಯಾಗಿ ಅರ್ಥೈಸಬೇಕಾದರೆ ಕೇವಲ ಜಾನಪದದ ವಿದ್ವತ್ತು ಸಾಕಾಗುವುದಿಲ್ಲ. ವಿಜ್ಞಾನದ ಇತರ ಶಿಸ್ತುಗಳೂ ಕೂಡ ಅಗತ್ಯವಾಗುತ್ತವೆ. ಮನೋವಿಜ್ಞಾನ ಮಾನವವಿಜ್ಞಾನ, ಸಮಾಜ ವಿಜ್ಞಾನ, ಇತಿಹಾಸ, ಮೊದಲಾದ ಶಿಸ್ತುಗಳ ನೆರವಿನಿಂದ ಜನಪದ ಸಂಪ್ರದಾಯಗಳನ್ನು ವಿಶ್ಲೇಷಣೆ ಮಾಡಿದಾಗ ಅನೇಕ ಕುತೂಹಲಕರವಾದ ಸಾಮಾಜಿಕ ಸಾಂಸ್ಕೃತಿಕ ಅಂಶಗಳು ತಿಳಿದು ಬರುತ್ತವೆ.

ಜನಪದದ ಆಶಯವನ್ನು ವಿವಿಧ ಅಯಾಮಗಳಲ್ಲಿ ನೋಡಿದಾಗ ಅದರ ವಿಸ್ತಾರ ಮತ್ತು ವ್ಯಾಪ್ತಿಯ ಅರಿವಾಗಬಹುದು. ಒಂದು ಪರಂಪರೆಯಾಗಿ, ಒಂದು ಸಂಸ್ಕೃತಿಯಾಗಿ, ಒಂದು ಆಚರಣೆಯಾಗಿ ಎಲ್ಲಾ ವಿಷಯಗಳ ಆಕರವಾಗಿ ನೋಡುವ ಮನೋದೃಷ್ಟಿಯನ್ನು ಬೆಳೆಸಿಕೊಳ್ಳಬೇಕಾಗಿದೆ.

ಜಾನಪದ ಜಗತ್ತು ತುಂಬಾ ವೈವಿಧ್ಯಮಯವಾಗಿದೆ. ಅಂತೆಯೇ ವಿಶಾಲವೂ ಹೌದು ಜನಪದರ ಜ್ಞಾನವೇ ಜಾನಪದ, ಜನಪದರು ಜೀವನಾನುಭವ ಪಾಠಶಾಲೆಯಲ್ಲಿ ಕಲಿತು, ಬದುಕಿನ ವಿಧ್ಯಮಾನಗಳನ್ನು ತಾಳ್ಮೆಯಿಂದ ಅರಿತು ಅರ್ಥಮಾಡಿಕೊಂಡು ಅದನ್ನು ಕಾವ್ಯ, ಕತೆ ಹಾಡು, ಕ್ರೀಡೆ, ಒಗಟು, ಒಡಪು, ಗಾದೆ, ಮುಂತಾದವುಗಳಲ್ಲಿ ಜನಪದರು

ಕಟ್ಟಿಕೊಟ್ಟಿದ್ದಾರೆ.

ಜನಪದ ನಮ್ಮ ಮೂಲ ಬೇರು. ಇವತ್ತು ನಾಗರಿಕ ಸಮಾಜದವರೆಂದು ನಾವು ಎಷ್ಟು ಬೀಗುತ್ತಿದ್ದರೂ, ಹಳೆ ಬೇರಿಗೆ ಚಿಗುರಿದ ರೆಂಬೆ-ಕೊಂಬೆಗಳನ್ನುವುದನ್ನು ಮರೆಯುವಂತಿಲ್ಲ. ಸಂಸ್ಕೃತಿಯನ್ನುವುದು ನಿಂತ ನೀರಲ್ಲ. ಅದು ಸದಾ ಸ್ವಚ್ಛಂದವಾಗಿ ಹರಿಯುತ್ತಿರುವ ಝುರಿಯಂತೆ. ಎತ್ತರ, ತಗ್ಗು, ವಿಶಾಲ, ಭೂಮಿಗೆ ತಕ್ಕಂತೆ ಆಕಾರ ಪಡೆದು ಹೇಗೆ ಹರಿಯುತ್ತದೆಯೋ ಹಾಗೆಯೇ ಸಂಸ್ಕೃತಿ ಜನವರ್ಗ, ಪ್ರದೇಶ, ಕಾಲಕ್ಕೆ ತಕ್ಕಂತೆ ವಿಭಿನ್ನವಾದ ರೂಪ ಪಡೆದು ನಡೆಯುತ್ತಿರುತ್ತದೆ. ಅದಕ್ಕೆ ಕನ್ನಡ ಸಂಸ್ಕೃತಿಯನ್ನು, ಅದರ ಹಲವು ರೂಪಗಳನ್ನು ಅಧ್ಯಯನ ಮಾಡಲು ಸಹಕಾರಿಯಾಗುವುದು. ಜಾನಪದ ಅಧ್ಯಯನ "ಬಾಲಕೃಷ್ಣನ ಬಾಯಲ್ಲಿ ಬ್ರಹ್ಮಾಂಡವೇ ಅಡಗಿದಂತೆ" ಜಾನಪದದಲ್ಲಿ ಒಟ್ಟು ಸಂಸ್ಕೃತಿಯೇ ಮಿಳಿತಗೊಂಡಿದೆ. ಜಾನಪದವು ಜಗತ್ತಿನ ಮನುಕುಲದ ಸಂಸ್ಕೃತಿಯ ಹಾಗೂ ಎಲ್ಲಾ ಜ್ಞಾನ ವಿಜ್ಞಾನಗಳ ಜನನಿ. ಇಂದಿನ ಸಮಾಜದಲ್ಲಿ ಜಾಗತೀಕರಣವೆಂದು ಹೆಸರು ಪಡೆದಿರುವುದಕ್ಕೆ ಜಾನಪದವೇ ಪೂರಕ ಪ್ರೇರಕವಾಗಿದೆ. ಕರ್ನಾಟಕ ಇಂತಹ ಅತ್ಯಮೂಲ್ಯವಾದ ಜಾನಪದ ಜಗತ್ತಿನ ಆಗರವಾಗಿದೆ.

ಜಾನಪದ ಸಂಪತ್ತನ್ನು ಪ್ರೋತ್ಸಾಹಿಸುವಲ್ಲಿ, ಬೆಳೆಸುವಲ್ಲಿ, ಉಳಿಸುವಲ್ಲಿ ಮತ್ತು ಅದು ಮಣ್ಣಲ್ಲಿ ಮರೆಯಾಗಿ ಹೋಗದಂತೆ ರಕ್ಷಿಸುವಲ್ಲಿ ಕರ್ನಾಟಕದ ವಿಶ್ವವಿದ್ಯಾಲಯಗಳು, ಜಾನಪದ ಲೋಕ, ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಇತರ ಸಂಘ ಸಂಸ್ಥೆಗಳೇ ಅಲ್ಲದೇ ನೂರಾರು ಜನ ಹಿರಿಯ-ಕಿರಿಯ ಕವಿಗಳು, ಕಲಾವಿದರು, ವಿದ್ವಾಂಸರು, ತಮ್ಮನ್ನು ತಾವು ತಮ್ಮದೇ ಆದ ದಾರಿಯಲ್ಲಿ ವಿಭಿನ್ನವಾದ ಕ್ಷೇತ್ರಗಳಲ್ಲಿ ಅರ್ಪಣ ಮನೋಭಾವದಿಂದ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ. ಈ ನಿಟ್ಟಿನಲ್ಲಿ ತಮ್ಮನ್ನು ತಾವು ರೂಡಿಸಿಕೊಳ್ಳುವ ಕವಿ ಪುಂಗವರಲ್ಲಿ ಒಬ್ಬರಾದ ಶ್ರೀಮಾನ್ ಪ್ರೊ. ಕೆ.ಆರ್. ಸುಶೀಲೇಗೌಡ ಅವರ ಜೀವನದ ಬಗ್ಗೆ ಸಾಹಿತ್ಯ ಲೋಕಕ್ಕೆ ಅವರ ಜನಪದೀಯ ಕೊಡುಗೆಗಳನ್ನು ವಿವೇಚನೆ ವಿಶ್ಲೇಷಣೆಯನ್ನು ಈ ಪ್ರಬಂಧದಲ್ಲಿ ಮಾಡಲಾಗಿದೆ.

ಜನಪದರು ಉನ್ನತ ಶಿಕ್ಷಣ ಪಡೆದವರಲ್ಲ. ಇವರುಗಳು ಜೀವನದ ಪಾಠಶಾಲೆಯಲ್ಲಿ ಕಲಿತವರು. ಬದುಕಿನ ಅಖಾಡಕ್ಕಿಳಿದು ಎಲ್ಲ ಪಟ್ಟು, ವರಸೆ, ತಂತ್ರಜ್ಞಾನವನ್ನು ತಮ್ಮದಾಗಿಸಿಕೊಂಡವರು. ಆಳವಾಗಿ ಹರಿವ ನದಿಗೆ ಅಬ್ಬರವಿಲ್ಲ ಎಂಬ ಮಾತಿನಂತೆ ಜನಪದ ಪ್ರತಿಭಾವಂತರು ಎಂದಿಗೂ ಪ್ರಚಾರ ಪ್ರಸಿದ್ಧಿಗೆ ತಲೆಕೆಡಿಸಿಕೊಂಡವರಲ್ಲ. ಹಳ್ಳಿಯ ಬದುಕಿನೊಂದಿಗೆ ಸಣ್ಣತನ, ಹೊಟ್ಟೆಕಿಚ್ಚು, ಜಿಪುಣತನ, ಕ್ಷುಲ್ಲಕ ವಿಚಾರ, ದಾನಗುಣ, ಉದಾರವಾದಿ ನಿಲುವು ಇವುಗಳನ್ನೆಲ್ಲಾ ಅತ್ಯಂತ ಆಪ್ತವಾಗಿ ಅನುಭವಿಸಿದವರು. ತಮ್ಮ

ಅನುಭವಗಳಿಗೆ ಹಾಡು, ಕತೆ ಒಗಟುಗಾದೆ, ಲಾವಣಿ, ಶಿಶುಪ್ರಾಸ, ಯಕ್ಷಗಾನ, ದೊಡ್ಡಾಟ, ಸಣ್ಣಾಟ, ಗೊಂಬೆ ಆಟಗಳ ಮೂಲಕ ಅಭಿವ್ಯಕ್ತಪಡಿಸಿ ತಮ್ಮ ಸೃಜನಶೀಲತೆಯನ್ನು ತೋರಿದವರು.

ಕರ್ನಾಟಕ ಜಾನಪದ ಅಧ್ಯಯನಕ್ಕೆ ೧೫೦ ವರ್ಷ ತುಂಬುತ್ತಿದೆ. ಆದರೆ ಜಾನಪದಕ್ಕೆ ಸಂಬಂಧಿಸಿದ ಸರ್ವ ಸಾಮಾಗ್ರಿಗಳ ಸೃಷ್ಟಿಯ ಇತಿಹಾಸ ಸಾವಿರಾರು ವರ್ಷಗಳ ಹಿಂದಕ್ಕೆ ಕಣ್ತೆರೆದುಕೊಂಡಿದೆ. ಅಂತೆಯೇ ಪಂಪನಿಂದ ಇಂದಿನವರೆಗೂ ಸುದೀರ್ಘವಾಗಿ ಬೆಳೆದುಕೊಂಡು ಬಂದಿರುವ ಕನ್ನಡ ಸಾಹಿತ್ಯದ ಎಲ್ಲಾ ಘಟ್ಟಗಳೂ ಮತ್ತು ಆಂದೋಲನಗಳೂ ಹಾಗೂ ಪ್ರಮುಖ ಕಾವ್ಯಗಳೂ ಜನಪದ ಭಾಷೆ, ಸಾಹಿತ್ಯ, ಸಂಸ್ಕೃತಿಗಳಿಂದಲ್ಲೇ ತಪ್ಪು ಅಂತರಾವರಣವನ್ನು ನಿರ್ಮಿಸಿಕೊಂಡಿದೆ ಎಂಬುದನ್ನು ಯಾರೂ ಮರೆಯಲಿಕ್ಕಾಗದು. ಈ ದೃಷ್ಟಿಯಿಂದ ನಮ್ಮ ಜನಪದದ ಶ್ರೀಮಂತಿಕೆಯನ್ನು ವೈವಿದ್ಯತೆಯನ್ನು ಹಾಗೂ ಅದರ ಅರ್ಥಪೂರ್ಣತೆಯನ್ನು ಅರಿತು ೧೯ನೇ ಶತಮಾನದ ಕೊನೆಯಾರ್ಧದಲ್ಲಿ ಪಾಶ್ಚಾತ್ಯ ವಿದ್ವಾಂಸರು ಮೊದಲಿಗರಾಗಿ ಜನಪದ ಸಾಹಿತ್ಯದ ಸಂಗ್ರಹ ಮತ್ತು ಸಂಪಾದನೆ ಕಾರ್ಯವನ್ನು ಆರಂಭಿಸಿದರು. ಉದಾಹರಣೆಗೆ: ಮೋಗ್ಲಿಂಗ್ – ಕನ್ನಡಗಾದೆಗಳು, ಚಾರ್ಲ್ಸ್‌ಗೋವರ್ – ಜನಪದ ಹಾಡುಗಳ ಸಂಗ್ರಹಣೆ, ಜಾನ್‌ಫ್ಲೀಡ್ – ಲಾವಣಿಗಳ ಸಂಗ್ರಹ ಇನ್ನೂ ಬೇರೆ ಬೇರೆ ರೀತಿಯ ಪ್ರಕಾರಗಳನ್ನು ಸಂಗ್ರಹ ಮಾಡಿದ್ದಾರೆ.

"ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ" ಎಂಬ ಬಸವಣ್ಣನವರ ವಚನ ಜಾನಪದಕ್ಕೆ ಅನ್ವಯಿಸುತ್ತದೆ. ಜಾನಪದವನ್ನು ಸಜೀವ ಪಳೆಯುಳಿಕೆ ಎಂದು ಕರೆಯಲಾಗಿದೆ. ಜಾನಪದ ಸಾವನ್ನು ನಿರಾಕರಿಸಿ ಮಾರ್ಪಾಡು ಹೊಂದಿ ತನ್ನ ಜೀವಂತಿಕೆಯನ್ನುಕಾಪಾಡಿಕೊಂಡಿದೆ. ಅವರ ಜನವಾಣಿ ಬೇರು ಕವಿವಾಣಿ ಹೂವು, ಈ ಮಾತು ಜನವಾಣಿಯ ಬೇರು ಬಲವಾಗಿ ನೆಲದ ಆಳಕ್ಕೆ ಇಳಿದಿದೆ. ನೆಲದ ಸತ್ವವನ್ನು ಹೀರಿಕೊಂಡು ಮೇಲೆ ಟೊಂಗೆಯಲ್ಲಿ ಹಸಿರು ಎಲೆಗಳನ್ನು ಹೂವು, ಹೀಚು, ಕಾಯಿ, ಹಣ್ಣುಗಳನ್ನು ತಳೆದಿದೆ. ಈ ಜಾನಪದವು ಕಡಿದಷ್ಟು ಚಿಗುರುತ್ತದೆ.

ನಗರವಾಸಿಗಳು, ಪದವೀದರರು, ಬಂಗಲೆಗಳಲ್ಲಿ ಬದುಕುವವರು, ರಾಜಕಾರಣದ ಹಾವೇಣಿಯಾಟದಲ್ಲಿ ಮೇಲೇರಿ ನಿಂತವರು, ಇವರನ್ನೆಲ್ಲಾ ಬುದ್ಧಿವಂತರು ಎಂದು ಕರೆಯುವ ವರ್ಗವೊಂದಿದೆ. ಆದರೆ ಜನಪದರು ಇದಾವುದಕ್ಕೂ ತಲೆಕೆಡಿಸಿಕೊಂಡವರಲ್ಲ. "ಪಟ್ಟ ಪಾಡೆಲ್ಲವೂ ಹುಟ್ಟು ಹಾಡಾಗಿ, ಹೊಸದಾಗಿ ರಸವಾಗಿ ಹರಿಯುತ್ತಿದೆ". ಎಂದು ಕವಿ ಬೇಂದ್ರಯವರು ಅಂದಂತೆ ಪಟ್ಟ ಪಾಡನ್ನೇ ಹಾಡಾಗಿಸಿದರು. ಜನಪದರು ಜಾನಪದದ ಒಂದು ಸಾಮೂಹಿಕ ಪುನರ್ ಸೃಷ್ಟಿ. ಇಲ್ಲಿ ವ್ಯಷ್ಟಿ ಹಿಂದೆ ಸರಿದು ಸಮಷ್ಟಿಯ ಹಿತ

ಮುಂದೆ ನಿಲ್ಲುತ್ತದೆ. ಇನ್ನೊಬ್ಬರ ಅನುಕಂಪ, ಕಾಯದ ಇವರು ಆನು ಒಲಿದಂತೆ ಹಾಡುವೆ ಎಂಬ ಬಗೆಯವರು ನಾಪಟ್ಟ ಪಾಡೇನಾಗಿರಲಿ ಹಾಡಿನ ಸವಿಯನ್ನಷ್ಟೇ ನೀಡುವೆ ರಸಿಕ ನಿನಗೆ, ಕಲ್ಲು ಸಕ್ಕರೆಯಂಥ ನಿನ್ನೆದೆಯು ಕರಗಿದರೆ ಅದರ ಸವಿಯನ್ನಷ್ಟೇ ಕರುಣಿಸು ನನಗೆ ಎಂಬ ಕವಿ ಬೇಂದ್ರೆ ಅವರ ನಿಲುವು. ಜನಪದರ ನಿಲುವೂ ಹೌದು. 'ನೋಡಿ ಕಲಿ ಮಾಡಿ ತಿಳಿ' ಎಂದು ಆಶಯವನ್ನು ಬದುಕಿನಲ್ಲಿ ಅಳವಡಿಸಿಕೊಂಡ ಇವರಲ್ಲಿ ಕೃತಕತೆ ಕಡಿಮೆ, 'ಕಂಡದ್ದನ್ನಾಡಿದರೆ ಕೆಂಡದಂಥ ಕೋಪ' ಎಂಬ ಅರಿವಿದ್ದು ಜನಪದರು ಜೀವ ವಿರೋಧಿಯಾದ ಸಂಗತಿಗಳನ್ನು ತಮ್ಮ ಸಾಹಿತ್ಯದ ಪ್ರಕಾರಗಳ ಮೂಲಕ ಖಂಡಿಸಿದ್ದಾರೆ. ಪ್ರಚಾರ ಮಾಧ್ಯಮಗಳು, ಜ್ಞಾನಪ್ರಸಾರದ ವೇಗ ವರ್ಧಕಗಳು ಇಲ್ಲದ ಕಾಲದಲ್ಲಿ ಅವರು ತಮ್ಮ ನೈಜ ಸೃಜನಶೀಲತೆ, ಸೋಪಜ್ಞತೆ, ಜ್ಞಾನ ಪರಂಪರೆಯನ್ನು ಕಾಪಾಡಿಕೊಂಡು ಬಂದಿದ್ದಾರೆ. ಆ ಪರಂಪರೆ ಇಂದೂ ಮುಂದುವರಿದಿದೆ.

ಪಂಡಿತರು ವಿವಿಧ ಕಳಾ
ಮಂಡಿತರುಂ ಕೇಳತಕ್ಕ ಕೃತಿಯಂ ಕ್ಷಿತಿಯೊಳ್
ಕಂಡರ್ ಕೇಳ್ವದೆ ಗೊರವರ
ಡುಂಡುಚಿಮೆ ಬೀದಿವರೆ ಬೀರನ ಕತೆಯ

ಎಂದು ಮಧುರ ಕವಿ ಶಿಷ್ಟರ ನೆಲೆಯಲ್ಲಿ ನಿಂತು ಈ ಜನಪದರ ಸಾಹಿತ್ಯವನ್ನು ಹೀಯಾಳಿಸಿದ. ಆತ ಕಂಡ ಪಂಡಿತರು ವಿವಿಧ ಕಳಾ ಮಂಡಿತರು ಕೇವಲ ಕಣ್ಣುಪಟ್ಟಿ ಕಟ್ಟಿದ ಕುದುರೆಯಂತಿದ್ದವರು. ಅವರು ಶುಷ್ಕ ಪಂಡಿತರು. ತಮ್ಮದೇ ಆದ ಅಹಂಕಾರದ ಕೋಟೆಯಲ್ಲಿ ಬೀಗಿದವರು. ಆದರೆ ಜನಪದರು ಶುಷ್ಕ ಪಂಡಿತರಲ್ಲ. ಹೇಳಬೇಕಾದುದನ್ನು ಸರಳವಾಗಿ ನೇರವಾಗಿ ಹೇಳಿದರು. ಇಲ್ಲಿ ಪಾಂಡಿತ್ಯ ಪ್ರದರ್ಶನ ಜಾಣ್ಮೆಯ ಪ್ರಕಟಣೆ ಗೌಣವಾಗಿ, ತಿಳಿಯ ಹೇಳುವ ಕೇಳುವವರ ಅರಿವಿನ ಕಣ್ಣನ್ನು ತೆರೆಯುವ ಆಸೆ ಬಲವಾಗಿರುತ್ತದೆ.

ಪ್ರಸ್ತುತ ಪ್ರಬಂದವು ಪ್ರೊ. ಕೆ.ಆರ್. ಸುಶೀಲೇಗೌಡ ಅವರ ಮನೆತನ ಜನನ, ಬಾಲ್ಯ, ಶಿಕ್ಷಣ, ಕೌಟುಂಬಿಕ ಜೀವನ, ವೃತ್ತಿ ಜೀವನ, ಹವ್ಯಾಸ, ಜನಪರ ಕಾಳಜಿ, ವ್ಯಕ್ತಿತ್ವ ಗೌರವ ಪ್ರಶಸ್ತಿ, ಸಾಹಿತ್ಯ ಸೃಷ್ಟಿ ಮತ್ತು ಸಮಾಜ ಸೇವೆ (ಸಾಧನೆ) ಬಗೆಗಿನ ಮಾಹಿತಿಯನ್ನು ಆವರಿಸಿಕೊಂಡಿದೆ. ಶ್ರೀಯುತರು ತಮ್ಮ ತನು-ಮನಗಳ ಆಲೋಚನೆಗಳನ್ನು ಪೂರ್ಣ ಪ್ರಮಾಣದಲ್ಲಿ ಜಾನಪದ ಅಧ್ಯಯನದಲ್ಲಿ ಸಮಾಜ ಸೇವೆಯಲ್ಲಿ, ಶಿಕ್ಷಕ ವೃತ್ತಿಯಲ್ಲಿ ತೊಡಗಿಸಿ ಹಲ-ಕೆಲವು ಕವಿಗಳಲ್ಲಿ ಶಿಕ್ಷಕರಲ್ಲಿ ಒಬ್ಬರಾಗಿದ್ದಾರೆ. ನಮ್ಮ ಜಾನಪದದ ಮಹತ್ವವನ್ನು ನಾವು ಪಾಶ್ಚಾತ್ಯರಿಂದಾಗಿ ಅರಿತೆವು. ಅಲ್ಲಿಂದ ಇಲ್ಲಿಯವರೆಗೂ ಇಲ್ಲಿಂದ ಮುಂದೆಯೂ

ಜಾನಪದ ಸಾಹಿತ್ಯವನ್ನು ಸಂಪಾದಿಸುವ ಸಂಗ್ರಹಿಸುವ, ಪ್ರಕಟಿಸುವ ಅದರ ಆಳ ಅಗಲಗಳನ್ನು ಜನರಿಗೆ ದರ್ಶಿಸುವ ಅದರ ಗುಣಾವಗುಣಗಳನ್ನು ಚರ್ಚಿಸುವ, ವಿಮರ್ಶಿಸುವ, ಜಾನಪದವನ್ನು ಅಂತರ್‌ಶಿಸ್ತೀಯ ಅಧ್ಯಯನಕ್ಕೆ ಒಳಪಡಿಸುವ ಮತ್ತು ಜಾಗತೀಕರಣದಲ್ಲೂ ಅದರ ನಿಶ್ಚಲವಾದ, ನಿಶ್ಯಬ್ದವಾದ, ನಿರಂತರವಾದ ಇರುವಿಕೆಯನ್ನು ಹರಿಯುವಿಕೆಯನ್ನು ಗುರುತಿಸುವ ಕೆಲಸಗಳು ಆಮೆಯ ವೇಗದಲ್ಲಿ ಸಾಗಿದೆ. ಆದರೂ ಇನ್ನು ಮುಂದೆಯೂ ಈ ಕೆಲಸ ನಡೆಯುವ ಅಗತ್ಯತೆ ಇದೆ. ಅದು ತೀವ್ರಗತಿಯಲ್ಲಿ ನಡೆಯಬೇಕು.

ಪ್ರೊ. ಕೆ.ಆರ್. ಸುಶೀಲೇಗೌಡ ಅವರು ಕಬ್ಬತ್ತಿ ಅಂತಹ ಕುಗ್ರಾಮದಲ್ಲಿ ಜನಿಸಿದವರು. ಕಬ್ಬತ್ತಿ ಜಾನಪದ ಸೊಗಡಿನ ತವರೂರು. ಅನಕ್ಷರಸ್ಥರ ಗುಡಾರ. ಇಂತಹ ಗುಡಾರದಲ್ಲಿ ಜಾನಪದೀಯ ಅಂಶಗಳು ಅಪಾರ. ಆದ್ದರಿಂದಲೇ ಜಾನಪದವನ್ನು ತಮ್ಮ ಉಸಿರಾಗಿ ಬೆಳೆಸಿಕೊಂಡು ತಮ್ಮ ಬದುಕನ್ನು ಕಟ್ಟಿಕೊಂಡು ಬಂದರು. 'ಕಬ್ಬತ್ತಿ' ಎಂಬ ಹೆಸರೇ ಜಾನಪದದ ಬೇರಾಗಿದೆ. ಏಕೆಂದರೆ ಆ ಗ್ರಾಮದಲ್ಲಿರುವಂತಹ ಜನಪದರ ಭಾಷೆ, ಸಾಹಿತ್ಯ, ವೇಷಭೂಷಣ, ಊಟೋಪಚಾರ, ಕಲೆ, ಕಥನ ಕಾವ್ಯಗಳು ಬಹಳ ಮೌಲ್ಯಯುತವಾಗಿವೆ. ಇಲ್ಲಿರುವ ಒಗಟು, ಗಾದೆ, ಆಚರಣೆಗಳು, ವಿಶಿಷ್ಟವಾಗಿವೆ. ಪ್ರೊ.ಕೆ.ಆರ್. ಸುಶೀಲೇಗೌಡ ಅವರು ಜಾನಪದದ ಬಗ್ಗೆ ಅವಿನಾಬಾವ ಸಂಬಂದವನ್ನು ಇರಿಸಿಕೊಂಡಿದ್ದಾರೆ. ಆದ್ದರಿಂದ ಇವರ ಕುರಿತು ಅಧ್ಯಯನ ಮಾಡಲಾಗಿದೆ.

ಗೌಡರು ವೃತ್ತಿಯಲ್ಲಿ ಶಿಕ್ಷಕರಾಗಿ, ಪ್ರಾಂಶುಪಾಲರಾಗಿ, ಪ್ರವೃತ್ತಿಯಲ್ಲಿ ಕನ್ನಡ ಸಾಹಿತ್ಯ ಗಣಿ (ಜಾನಪದ ಸಾಹಿತ್ಯ)ಗೆ ಇವರು ಬೆಲೆಬಾಳುವ ಕೃತಿ, ಲೇಖನ, ಕಾವ್ಯ ಕ್ಷೇತ್ರಕ್ಕೆ ಇವರ ಕೊಡುಗೆ ಅಪೂರ್ವವಾದದ್ದು. ಈ ಸಾಹಿತ್ಯವು ಬಹುಬೇಗ ಜನರ ಮನ ತಲುಪವಲ್ಲಿ ಅವರು ಹೊರತಂದ ಕಬ್ಬತ್ತಿರಂಗ ಸಂಗ್ರಹ ಕಾವ್ಯಕೃತಿ ಸಾಕ್ಷಿಯಾಗಿದೆ.

ಇವರು ಸಾಹಿತ್ಯ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿದ್ದು ಶಿಕ್ಷಕರಾಗಿದ್ದಾಗ ಶಾಲಾವತಿಯಿಂದ ಪ್ರಕಟಿಸಿದ ಸಾಹಿತ್ಯ ನಂದನ, ಕಲಾಶ್ರೀ, ಪುಷ್ಪಪತ್ರ, ಶಿಲ್ಪಶ್ರೀ ಹೊತ್ತಿಗೆಗಳ ಮೂಲಕ, ವಿದ್ಯಾರ್ಥಿಗಳನ್ನು ಕಾವ್ಯ, ಕತೆ, ಬರೆಯಲು, ಪ್ರೇರೇಪಿಸುವ ಮೂಲಕ ಮತ್ತು ಬರೆಯುವ ಮೂಲಕ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ತಮ್ಮದೇ ಪ್ರತಿಭೆಯಿಂದ ಹೊರ ಹೊಮ್ಮಿದ್ದು ಕಂಡುಬರುತ್ತದೆ. ಸೂಕ್ಷ್ಮ ಸಂವೇದನೆಯ, ಸಹೃದಯರ ಮನಸೂರೆಗೊಳ್ಳುವ ಸಾಹಿತಿಯಾಗಿ, ಪ್ರತಿಭಾಶಾಲಿ ಪ್ರಜ್ಞಾಶೀಲ ಸಂಪಾದಕರಾಗಿ, ಪರಿಣಾಮಕಾರಿಯಾಗಿ, ಬರಹಗಾರರಾಗಿ, ಕನ್ನಡ (ಜಾನಪದ) ಸಾಹಿತ್ಯಕ್ಕೆ ಅಪೂರ್ವ ಸೇವೆ ಸಲ್ಲಿಸಿದ್ದಾರೆ. ಶ್ರೀಯುತರ ಪ್ರತಿಭೆ ಹಾಗೂ ಅಮೂಲ್ಯ ಸೇವೆಗಾಗಿ ಅರಸಿಬಂದ ಪ್ರಶಸ್ತಿ ಸನ್ಮಾನಗಳು ಸಹ ಅಪಾರಯುತವಾದದ್ದು.

ಹೀಗಾಗಿ ಇಂತಹ ವ್ಯಕ್ತಿಯ ಬದುಕು ಹಾಗೂ ಸಾಧನೆ ಕುರಿತಾಗಿ ಬೆಳಕು ಚೆಲ್ಲುವುದು ಪ್ರಸ್ತುತ ಕಿರು ಪ್ರಬಂಧದ (ಎಂ. ಫಿಲ್ ಅಧ್ಯಯನದ) ಉದ್ದೇಶವಾಗಿದೆ. ಒಬ್ಬ ಲೇಖಕ ಅಥವಾ ಬರಹಗಾರನ ಬಗ್ಗೆ ಸಂಶೋಧನೆ ಕೈಗೊಳ್ಳುವಾಗ ಆ ವ್ಯಕ್ತಿಯ ಬರಹದಷ್ಟು ಬದುಕೂ ಸಹ ಮಹತ್ವದ್ದಾಗಿರುತ್ತದೆ. ಅವರ ಸಾಧನೆಯ ಉತ್ತುಂಗ ಶಿಖರಕ್ಕೇರಿ ನಿಂತಾಗ ಆ ಶಿಖರಾರೋಹಣದ ಪ್ರತಿ ಹೆಜ್ಜೆ ಪ್ರತಿ ಮೆಟ್ಟಿಲೂ ಸಹ ಮುಖ್ಯವಾಗಿರುತ್ತದೆ. ಆದ್ದರಿಂದ ಆ ಪ್ರತಿ ಬೆಳವಣಿಗೆಯ ಅಧ್ಯಯನ ಮಹತ್ವ ಪೂರ್ಣವಾದದ್ದು.

ಗೌಡರು ಸಾಹಿತ್ಯ ದೃಷ್ಟಿಯಲ್ಲಿ ವಿಶಿಷ್ಟತೆ ಮೆರೆದಿದ್ದಾರೆ. ಅವರ ಕಬ್ಬತ್ತಿರಂಗ ವಿಶಿಷ್ಟತೆಯಿಂದ ಕೂಡಿದೆ. ಈ ಕೃತಿಯನ್ನು ಸಂಗ್ರಹಿಸಿ ಸಂಶೋಧನೆಗೊಳಪಡಿಸಿ ನಿಷ್ಪಕ್ಷಪಾತವಾದ ಪ್ರಾಮಾಣಿಕವಾದ ಬೆಳಕು ಚೆಲ್ಲುವ ಪ್ರಯತ್ನ ಪ್ರಸುತ ಪ್ರಬಂಧದಲ್ಲಿ ಮಾಡಲಾಗಿದೆ. ಈ ಕೃತಿಯ ಮಹತ್ವವನ್ನು ಗುರ್ತಿಸುವುದು ಅಧ್ಯಯನದ ಪ್ರಮುಖ ಉದ್ದೇಶಗಳಲ್ಲೊಂದು. ಪ್ರೊ. ಕೆ.ಆರ್. ಸುಶೀಲೇಗೌಡ ಅವರು ಜಾನಪದ ಜೀವನಕ್ಕೆ ಪ್ರವೇಶಿಸಿದ ಜೀವಸತ್ವದ ನೆಲೆಯನ್ನು ಗುರ್ತಿಸುವುದು ಈ ಅಂಶಗಳನ್ನು ಪೂರೈಸುವ ನಿಟ್ಟಿನಲ್ಲಿ ಇಡಿಯಾಗಿ ಪ್ರಬಂಧ ಸೌಧವನ್ನು ಕಟ್ಟಲಾಗಿದೆ.

ಅಧ್ಯಯನದ ಅನುಕೂಲಕ್ಕಾಗಿ ಪ್ರಬಂಧದಲ್ಲಿ ೫ ಪಠ್ಯಕ್ರಮಗಳಾಗಿ ವಿಂಗಡಿಸಲಾಗಿದೆ.

ಮೊದಲನೇ ಪಠ್ಯದಲ್ಲಿ ಅಧ್ಯಯನದ ಉದ್ದೇಶವನ್ನು ಪ್ರತಿಪಾದಿಸಲಾಗಿದ್ದು, ನಮ್ಮ ಜಾನಪದ ಅಧ್ಯಯನದ ಪ್ರಾರಂಭದ ದಿನಗಳು, ಅದರ ಪರಂಪರೆಯ ದಾರಿಯಲ್ಲಿ ಇರುವ ಹಲವಾರು ಉದ್ದೇಶಗಳು ಯಾವುವು? ಎನ್ನುವುದರ ಬಗ್ಗೆ ಬೆಳಕು ಚೆಲ್ಲಲಾಗಿದೆ. ಆ ನಿಟ್ಟಿನಲ್ಲಿ ನಮ್ಮ ಕರ್ನಾಟಕ ಜಾನಪದ ಇನ್ನು ತೀವ್ರವಾಗಿ ಅಭ್ಯಸಿಸುವ ಅಗತ್ಯತೆಯ ದಾರಿಯಲ್ಲಿ ಸಾಗಿದ ಪ್ರೊ. ಕೆ.ಆರ್. ಸುಶೀಲೇಗೌಡರ ಜೀವನ ಮತ್ತು ಸಾಧನೆಯು ಅಧ್ಯಯನಕ್ಕೆ ನಾನು ಮುಂದಾದ ಬಗ್ಗೆ ವಿವರಣೆಯಿದೆ.

ಈ ಪ್ರಬಂಧದ ಎರಡನೆ ಪಠ್ಯದಲ್ಲಿ ಪ್ರೊ. ಕೆ.ಆರ್. ಸುಶೀಲೇಗೌಡರು ಸಾಹಿತ್ಯ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳುವ ಪೂರ್ವದ ಜೀವನದ ಜೊತೆಗೆ ಸಾಹಿತ್ಯ ಕ್ಷೇತ್ರದಲ್ಲಿ ಕಾಲಿಟ್ಟ ನಂತರದ ಬದುಕನ್ನು ಬಿತ್ತರಿಸ ಹೊರಟು ಅವರ ಮನೆತನ, ಜನನ, ಬಾಲ್ಯ, ಶಿಕ್ಷಣ, ಕೌಟುಂಬಿಕ ಜೀವನ, ವೃತ್ತಿ ಜೀವನ, ಹವ್ಯಾಸ, ಜನಪರ ಕಾಳಜಿ, ವ್ಯಕ್ತಿತ್ವವನ್ನು ಸಮಾಜದಲ್ಲಿ ಗುರುತಿಸಿಕೊಳ್ಳಲು ಅವರು ನಡೆಸಿದ ಹೋರಾಟ. ಅವರ ನಿರಂತರ ಮತ್ತು ಶ್ರದ್ಧಾಪೂರ್ವಕವಾದ ಪ್ರಯತ್ನಕ್ಕೆ ದಕ್ಕಿದ ಪ್ರತಿಫಲಗಳನ್ನು ತಿಳಿಸಲಾಗಿದೆ. ಅಂತೆಯೇ ಸಾಹಿತ್ಯ ಸೃಷ್ಟಿ, ಸಮಾಜ ಸೇವೆಯ ವಿವರ ನೀಡಲಾಗಿದೆ.

ಇನ್ನು ಮೂರನೇ ಪಠ್ಯದಲ್ಲಿ ಪ್ರೊ. ಕೆ.ಆರ್. ಸುಶೀಲೇಗೌಡರ ಕೃತಿಯಾದ

"ಕಬ್ಬತ್ತಿರಂಗ" (ಜಾನಪದ ಗೀತೆಗಳ ಸಂಗ್ರಹ) ಗೀತೆಗಳ ವಿಶ್ಲೇಷಣೆ ಮಾಡಲಾಗಿದೆ. ಅವರ ಲೇಖನಗಳ ಅವಲೋಕನ ಮಾಡಲಾಗಿದೆ. ಅಲ್ಲದೆ ಗೌಡರು ಜಾನಪದ ಕಾರ್ಯಕ್ರಮದಲ್ಲಿ ತಾವು ನೇತೃತ್ವ ವಹಿಸಿಕೊಂಡ ಬಗೆಯನ್ನು ತಿಳಿಸಲಾಗಿದೆ.

ನಾಲ್ಕನೇ ಪಠ್ಯದಲ್ಲಿ ಗೌಡರ ಸಮಾಜ ಸೇವೆ. ಭಾರತ ಸೇವಾದಳದಲ್ಲಿನ ಅವರ ಕಾರ್ಯ ವೈಖರಿ ಮತ್ತು ತಮ್ಮದೇ ಆದ ನೇತೃತ್ವದಲ್ಲಿ ಬೆಳಕುಕಂಡ ನೇತಾಜಿ ರೂರಲ್ ಡೆವಲಪ್‌ಮೆಂಟ್ ಟ್ರಸ್ಟನ ಬಗ್ಗೆ ತಿಳಿಸಲಾಗಿದೆ.

ಹೇಗೆ ಒಂದು ಪದ್ಯದಲ್ಲಿ ಬರುವ ಪಲ್ಲವಿ ಪದ್ಯ ಹೇಳುವ ಮುಂಚಿನ ಪೀಠಿಕೆಯಾಗುತ್ತದೆಯೋ ಹಾಗೆ ಇಲ್ಲಿ ಅಧ್ಯಯನ ಉದ್ದೇಶ ಮತ್ತು ಸ್ವರೂಪ ಅಡಿಯಲ್ಲಿ ಹೇಳಿ ಮುಂದೆ ಸಾಗುತ್ತಾ ಅನುಪಲ್ಲವಿಯಲ್ಲಿ ಭಾವನೆಯ ಹರಿವು ಇರುವುದೋ ಹಾಗೆ ಮಧ್ಯಂತರದಲ್ಲಿ ಹಾಗೂ ಕೇಂದ್ರ ಬಿಂದುವಾದ ವಿಷಯದ ಬಗ್ಗೆ ಪರಿಪೂರ್ಣ ವಾಗಿಯಲ್ಲದಿದ್ದರೂ ಅಳಿಲು ಸೇವೆಯಷ್ಟಾದರೂ ಸೇವೆ ಪ್ರಜ್ಞಾಪೂರ್ವಕವಾಗಿ ಅವರ ಬದುಕು ಸಾಧನೆಯ ಬಗ್ಗೆ ವಿವರಣೆಯನ್ನು ನೀಡಿ ಅವುಗಳ ಬಗ್ಗೆ ಚರ್ಚೆಯನ್ನು ಮಂಡಿಸಿದ್ದೇನೆ. ಇನ್ನು ಉಳಿದಿರುವುದೇ ಮುಡಿ. ಇದನ್ನು ಅವರ ಸಾಹಿತ್ಯಿಕ ಸಾಮಾಜಿಕ ಕಾರ್ಯಗಳಲ್ಲಿನ ಪಾತ್ರ ಅವರ ಕಾರ್ಯ ಚಟುವಟಿಕೆ ಸೌಹಾರ್ದ ಭಾಂದವ್ಯ ಇವುಗಳಿಗೆ ಸಾಕ್ಷಿಯಾಗಿ ನಿಲ್ಲುವ ಛಾಯ ಚಿತ್ರಗಳನ್ನು, ಈ ಪ್ರಬಂಧ ಪರಿಪೂರ್ಣತೆಯಲ್ಲಿ ಪೂರಕ ಪ್ರೇರಕವಾಗಿರುವ, ಗ್ರಂಥಗಳನ್ನು ಹೇಳುವುದರ ಜೊತೆಗೆ ಉಪಸಂಹಾರವನ್ನು ನೀಡಲಾಗಿದೆ.

ಅಧ್ಯಾಯ - ಎರಡು
ಪ್ರೊ. ಕೆ.ಆರ್. ಸುಶೀಲೇಗೌಡರ ಜೀವನ ಮತ್ತು ಸಾಧನೆ

ಭಾರತೀಯ ಸಾಂಸ್ಕೃತಿಕ ಪರಂಪರೆಯಲ್ಲಿ ಜಾನಪದ ಸಾಹಿತ್ಯದ ಲೋಕಕ್ಕೆ ಜಗನ್ಮಾನ್ಯತೆ ದೊರಕಿಸಿಕೊಟ್ಟ ಕವಿಗಳು ಹಲವರು. ಅಂಥವರಲ್ಲಿ ಕನ್ನಡ ನಾಡು ನುಡಿ ಸಂಸ್ಕೃತಿಗಳಿಗೆ ಹಾಗೂ ಜಾನಪದ ಸಾಹಿತ್ಯದ ಏಳ್ಗೆಗಾಗಿ ಅವಿರತವಾಗಿ ಶ್ರಮಿಸಿ ಖ್ಯಾತಿಗೆ ಮಿತ್ರರಾದವರಲ್ಲಿ ಪ್ರೊ. ಕೆ.ಆರ್. ಸುಶೀಲೇಗೌಡ ಅವರು ಒಬ್ಬರು. ಅವರು ಕೇವಲ ಸಾಹಿತ್ಯ ಸೃಷ್ಟಿಯಲ್ಲಿ ತೊಡಗದೆ ಒಳ್ಳೆಯ ಅಧ್ಯಾಪಕರಾಗಿ ಜವಾಬ್ದಾರಿಯುತ ಪ್ರಜೆಯಾಗಿ, ಸಾಹಿತ್ಯೇತರ ಚಟುವಟಿಕೆಗಳಲ್ಲಿ ತೊಡಗಿ ಸಮಾಜದ ಏಳ್ಗೆಗಾಗಿ ದುಡಿದ ಕಟ್ಟಾಳು. ಅವರ ಆದರ್ಶ ಚರಿತ್ರೆ ಓದುತ್ತಾ ಹೋದಂತೆ ಬದುಕಿನ ಒಂದೊಂದು ಅಧ್ಯಾಯಗಳು ತೆರೆಯುತ್ತಾ ಸಾಗುತ್ತವೆ.

ಒಬ್ಬ ಬರಹಗಾರನ ಕುರಿತಾಗಿ ಅಧ್ಯಯನ ಮಾಡುವ ಸಂಧರ್ಭದಲ್ಲಿ ಆ ಸಾಹಿತ್ಯಕಾರನ ಬದುಕಿನ ಬಗ್ಗೆ ಅರಿತುಕೊಳ್ಳುವುದು ಮಹತ್ವದ ಸಂಗತಿಯಾಗಿದೆ. ಅದರಲ್ಲೂ ಪ್ರೊ. ಕೆ.ಆರ್. ಸುಶೀಲೇಗೌಡ ಅವರಂತ ಪ್ರಬುದ್ಧ ವ್ಯಕ್ತಿಯ ಕುರಿತಾಗಿ ಅಭ್ಯಾಸ ಮಾಡುವಾಗ ಅವರ ಜೀವನದ ಪದರು ಪದರುಗಳು ಕುರಿತು ವಿವರಿಸುವುದು ಅನಿವಾರ್ಯವಾಗಿದೆ. ಅವರ ಮನೆತನ, ಬೆಳೆದ ಪರಿಸರ, ಬಾಲ್ಯ, ಶಿಕ್ಷಣ, ಉದ್ಯೋಗ, ಸಾಹಿತ್ಯಿಕ ಪರಿಸರ, ಕೌಟುಂಬಿಕ ಜೀವನ, ಸಂದಗೌರವಗಳು ಮುಂತಾದ ವಿಷಯಗಳನ್ನು ಅರಿತುಕೊಳ್ಳುವುದು ಆ ವಿಷಯಗಳನ್ನು ಗ್ರಹಿಸುತ್ತಾ ಬರವಣಿಗೆಯ ಮೇಲೆ ಬೆಳಕು ಬೀರುವುದು ಸಮಂಜಸವಾಗುತ್ತದೆ. ಸಮಾಜದ ಬಗೆಗೆ ಕಾಳಜಿ ಇರುವ ಮನಸ್ಸುಗಳು ಬೇಕಾದಷ್ಟು ಇವೆ. ಅಂತಹವರಲ್ಲಿ ಪ್ರೊ. ಕೆ.ಆರ್. ಸುಶೀಲೇಗೌಡ ಅವರೂ ಒಬ್ಬರು.

ಮನೆತನ:

ಪ್ರೊ. ಕೆ.ಆರ್. ಸುಶೇಲೇಗೌಡರವರ ಹುಟ್ಟೂರು ಹಾಸನ ಜಿಲ್ಲೆಯ, ಹಾಸನ ತಾಲ್ಲೂಕಿನ ಕಬ್ಬತ್ತಿ. ಜಾನಪದ ಕಲೆಯ ಜೀವಂತಿಕೆಯನ್ನು ಈ ಗ್ರಾಮದಲ್ಲಿ ನಾವು ಕಾಣುತ್ತೇವೆ. ಕಬ್ಬತ್ತಿಯ ಪ್ರಕೃತಿಯ ಮಡಿಲಲ್ಲಿ ಕಂಗೊಳಿಸುತ್ತಿದೆ. ಇದಕ್ಕೆ ಪ್ರತಿಯಾಗಿ ರಾಗಿ ಗುಡ್ಡವು ಇನ್ನಷ್ಟು ಮೆರಗನ್ನುಂಟು ಮಾಡಿದೆ. ಇವರದು ಬಡ ರೈತ ಕುಟುಂಬ. ಪೂರ್ವಜರಲ್ಲಿ ಕೆಲವರು ಜನಪದ ಕಲೆಗಳಲ್ಲಿ ಆಸಕ್ತರಾದವರಾಗಿದ್ದರು. ಬಡತನದಲ್ಲಿಯೇ ಬೆಳಕನ್ನು ಕಂಡವರು. ಪರಿಪೂರ್ಣ ಜೀವನವನ್ನು ನಡೆಸುತ್ತಿದ್ದರು.

ಜನನ:

ಹಾಸನ ಜಿಲ್ಲೆ ಕರ್ನಾಟಕ ಇತಿಹಾಸದಲ್ಲಿ ವಿಶಿಷ್ಟವಾದ ಸ್ಥಾನಮಾನ ಪಡೆದಿದ್ದು, ಕಲೆ, ಶಿಲ್ಪಕಲೆ ಹಾಗೂ ಸಾಹಿತ್ಯ ಕ್ಷೇತ್ರಗಳಿಗೆ ಹೆಸರಾಗಿದೆ. ವಿಶಿಷ್ಟ ಕ್ಷೇತ್ರಗಳಲ್ಲಿ ಗಣನೀಯ ಸಾಧನೆಗೈದ, ಗಣ್ಯ ವ್ಯಕ್ತಿಗಳಿಗೆ ಜನ್ಮ ನೀಡಿದ ತಾಣ ಅಂತಹ ಹಾಸನ ಜಿಲ್ಲೆಯಲ್ಲಿ ಕಬ್ಬತ್ತಿ

ಎಂಬ ಗ್ರಾಮ. ಗೊರೂರಿನ ಕೇಂದ್ರ ಸ್ಥಳ ರೈತರ ಬದುಕನ್ನು ಬಂಗಾರ ಮಾಡಿರುವ ಹೇಮಾವತಿ ನದಿ, ಬಡವರ ಊಟಿಯೆಂದು ಹೆಸರಾದ ಹಾಸನ. ಈ ಸಾಂಸ್ಕೃತಿಕ ಸಾನಿಧ್ಯದಲ್ಲಿ ಗಣ್ಯ ವ್ಯಕ್ತಿಗಳಲ್ಲಿ ಒಬ್ಬರು ಶ್ರೀಯುತರಾದ ಪ್ರೊ. ಕೆ.ಆರ್. ಸುಶೀಲೇಗೌಡರು, ರಂಗೇಗೌಡ ಮತ್ತು ಶ್ರೀಮತಿ ಪುಟ್ಟಮ್ಮನವರ ಮಗನಾಗಿ ೩೦-೦೯-೧೯೩೭ರಲ್ಲಿ ಜನಿಸಿದರು.

ನರಸೇಗೌಡರಿಗೆ ಮೂರು ಜನಮಕ್ಕಳು ರಂಗೇಗೌಡ, ನಿಂಗೇಗೌಡ, ಕೆಂಪೇಗೌಡ, ನರಸೇಗೌಡರು ವೃತ್ತಿಯಲ್ಲಿ ವ್ಯವಸಾಯಗಾರರು. ಸುಮಾರು ೩೦ ಗುಂಟೇ ತೋಟ, ೩೦ ಗುಂಟೇ ನೀರಾವರಿಯನ್ನು ಹೊಂದಿದ್ದರು. ರಂಗೇಗೌಡರು ೮ನೇ ತರಗತಿಯವರೆಗೆ ಓದಿದ್ದು ಪೋಲಿಸ್ ಇಲಾಖೆಗೆ ಸೇರಿದರು. ನಿಂಗೇಗೌಡರು ಮತ್ತು ಕೆಂಪೇಗೌಡರು ತಕ್ಕಮಟ್ಟಿನ ಓದು, ಬರಹವನ್ನು ಕಲಿತಿದ್ದರು. ನಿಂಗೇಗೌಡರ ಹೆಂಡತಿ ಬಜಾರಿ, ಕೇಂಪೇಗೌಡರು ಅವಿವಾಹಿತರಾಗಿದ್ದರು. ರಂಗೇಗೌಡರು ಅರಕಲಗೂಡು ತಾಲ್ಲೂಕಿನ ಯಡಾಣೆ ಗ್ರಾಮದ ಒಡ್ಡನಕೆರೆಯ ಪುಟ್ಟಮ್ಮನವರನ್ನು ವಿವಾಹವಾಗಿದ್ದು ಈ ದಂಪತಿಗಳಿಗೆ ಏಕಮಾತ್ರ ಪುತ್ರರತ್ನವಾಗಿ ಸುಶೀಲೇಗೌಡ ೩೦ ಸೆಪ್ಟಂಬರ್ ೧೯೩೭ರಲ್ಲಿ ಜನಿಸಿದರು. ತಾಯಿ ಪುಟ್ಟಮ್ಮನವರು ಸುಶೀಲೇಗೌಡರ ಜನನದ ಕೆಲವೇ ತಿಂಗಳುಗಳಲ್ಲಿ ಅಸುನೀಗಿದರು. ಮುಂದೆ ತಂದೆ ಮತ್ತು ಅಜ್ಜಿಯ ಆರೈಕೆ ದೊರೆಯಿತು. ಕಾಲಕ್ರಮೇಣ ರಂಗೇಗೌಡರು ತಮ್ಮ ತಂದೆಯವರಾದ, ನರಸೇಗೌಡರಿಗೆ ಪಿತೃಪಕ್ಷದಲ್ಲಿ ಭೈರೇದೇವರು ಮತ್ತು ಮಾಸ್ತಿಯಮ್ಮ ದೇವರಿಗೆ ಎಡೆಹಾಕಿ ಮನೆಗೆ ಬಂದು ಕೆಲ ನಿಮಿಷಗಳಲ್ಲಿ ಅತಿಯಾದ ಹೊಟ್ಟೆ ನೋವಿನಿಂದ ನರಳಿದರು. ಗೊರೂರು ಆಸ್ಪತ್ರೆಗೆ ಇವರನ್ನು ದಾಖಲಿಸಲಾಯಿತು. ಆದರೇ ವಿಧಿವಶಾತ್ ದಾಖಲಾದ ಎರಡನೇ ದಿವಸವೇ ಅವರು ಮರಣಹೊಂದಿದರು. ಹೀಗೆ ಸುಶೀಲೇಗೌಡರು ಚಿಕ್ಕ ಮನಸ್ಸಿನಲ್ಲಿಯೇ ತಂದೆ ಮತ್ತು ತಾಯಿ ಇಬ್ಬರನ್ನು ಕಳೆದುಕೊಂಡರು. ಅಜ್ಜಿಯ ಆಶ್ರಯವನ್ನು ಪಡೆದರು.

ಬಾಲ್ಯ:

ಇವರ ಬಾಲ್ಯ ಜೀವನ ಕಡುಕಷ್ಟದಾಯಕವಾಗಿತ್ತು, ಒಂದು ರೀತಿಯಲ್ಲಿ ಅತಂತ್ರ ಸ್ಥಿತಿಯಲ್ಲಿತ್ತು. ಹುಟ್ಟಿದ ಕೆಲ ತಿಂಗಳುಗಳಲ್ಲಿಯೇ ತಾಯಿಯನ್ನು ಕಳೆದುಕೊಂಡ ಸುಶೀಲೇಗೌಡರು ಒಡ್ಡನಬಾರೆಯಲ್ಲಿ ಬಡತನದ ಬೇಗೆಯಲ್ಲಿದ್ದ ತಂದೆ ಅಜ್ಜಿಯ (ತಾಯಿಯ ತಾಯಿ) ಆಶ್ರಯ ಪಡೆದರು. ಕಬ್ಬತ್ತಿ ಗ್ರಾಮದಲ್ಲಿ ಅಜ್ಜಿ/ಅಜ್ಜ (ತಂದೆಯ ತಾಯಿ ತಂದೆ) ಪೋಷಣೆಯಲ್ಲಿ ಬೆಳೆಯಲಾರಂಭಿಸಿದರು. ಆ ವೇಳೆಗೆ ವಿಧಿಯು ತನ್ನ ಅಟ್ಟಹಾಸವನ್ನು ಪ್ರದರ್ಶಿಸುವಂತೆ ಅಜ್ಜ ನರಸೇಗೌಡ ಮತ್ತು ತಂದೆ ರಂಗೇಗೌಡರನ್ನು ಇವರಿಂದ ಅಗಲಿಸಿತು. ಈ ಅಗಲಿಕೆಯಿಂದ ಇವರು ಅನಾಥ ಪರಿಸ್ಥಿತಿಯನ್ನು ಅನುಭವಿಸಬೇಕಾಯಿತು. ಆ ವೇಳೆಗೆ

ಚಿಕ್ಕಪ್ಪಂದಿರಾದ ನಿಂಗೇಗೌಡ ಮತ್ತು ಕೆಂಪೇಗೌಡರು ಇವರಿಗೆ ಪೋಷಣೆ ನೀಡಿದರು. ಮುಂದೆ ನಿಂಗೇಗೌಡರು ಮದುವೆಯಾದರು. ಆದರೆ ಕೆಂಪೇಗೌಡರು ಸುಶೀಲೇಗೌಡರನ್ನು ಅನಾಥನಾಗಿ ಬಿಡದೆ ಅವರನ್ನು ಪೋಷಿಸುಸುವ ಸಲುವಾಗಿ ಅವಿವಾಹಿತರಾಗಿಯೇ ಕೊನೆವರೆಗೂ ಬಾಳಿದರು. ಕಾಲ ಕಳೆದಂತೆ ಮನೆಯ ಪರಿಸ್ಥಿತಿಗಳು ಬದಲಾಗಿ ನಿಂಗೇಗೌಡ ಹಾಗೂ ಕೆಂಪೇಗೌಡರು ಬೇರೆ ಬೇರೆಯಾದರು. ಕೆಂಪೇಗೌಡರ ಆಶ್ರಯದಲ್ಲಿ ಬೆಳೆಯಲಾರಂಭಿಸಿದ ಇವರಿಗೆ ಆಟದಲ್ಲಿ ಆಸಕ್ತಿ ಇದ್ದುದರಿಂದ ಶಾಲೆಗೆ ಆಗಾಗ ಗೈರು ಹಾಜರಾಗುತ್ತಿದ್ದರು. ಇದನ್ನು ತಿಳಿದು ಚಿಕ್ಕಪ್ಪ ಕೆಂಪೇಗೌಡರು ಹಸುಗಳನ್ನು ಮೇಯಿಸಲು ದೂರದ ಹುಲ್ಲುಗಾವಲಿಗೆ ಹೋಗಿದ್ದರೂ ಕೂಡ ಅಲ್ಲಿಂದ ಶಾಲೆಗೆ ಬಂದು ವಿಚಾರಿಸಿಕೊಂಡು ಗೌಡರನ್ನು ಹುಡುಕಿ ಕರೆತಂದು ಮಾಸ್ಟರ್ ಅವರಿಂದ ಛಡಿ ಏಟು ಕೊಡಿಸುತ್ತಿದ್ದರು.

ಒಡ್ಡನಬಾರೆಯ ಅಜ್ಜಿಯ ಮನೆಯಲ್ಲಿದ್ದಾಗ ಪ್ರತಿದಿನ ಬೆಳಗ್ಗೆ ಬೇಗ ಏಳುವುದು ಸಗಣಿ ಬಾಚುವುದು, ದನಕರುಗಳಿಗೆ ಹುಲ್ಲು ತಂದ ಮಾಡಿದ ನಂತರವೇ ೧೦ ಗಂಟೆಗೆ ಶಾಲೆಗೆ ಹೋಗುತ್ತಿದ್ದರು. ಅಷ್ಟೇ ಅಲ್ಲದೆ ಶಾಲಾ ಬಿಡುವಿನ ವೇಳೆಯಲ್ಲಿ ಕುರಿಕಾಯುವುದು, ಕೊಟ್ಟಿಗೆ ದನ ಕರು ಎಮ್ಮೆಗಳ ಸಗಣಿ ಎತ್ತಿ ಗಂಜಲ ಬಳಿಯುತ್ತಿದ್ದರು. ರಾತ್ರಿಯ ವೇಳೆಯಲ್ಲಿ ಚಿಮಣಿ ಬೆಳಕಲ್ಲಿ ಓದುತ್ತಿದ್ದರು. ಆಟದಷ್ಟೇ ನಾಟಕದಲ್ಲಿಯೂ ಇವರಿಗೆ ಆಸಕ್ತಿಯಿದ್ದು, ಊರು ಮುಂಭಾಗದಲ್ಲಿ ನಡೆಯುತ್ತಿದ್ದ ಪೌರಾಣಿಕ ನಾಟಕಗಳನ್ನು ನೋಡಲು ಹೋಗುತ್ತಿದ್ದರು.

ಕಬ್ಬತ್ತಿಯಲ್ಲಿ ನೀರಿನ ಅಭಾವವಿದ್ದುದರಿಂದ ಸುಮಾರು ಒಂದು ಮೈಲಿ ದೂರದಿಂದ ಅಡ್ಡೆಯಲ್ಲಿ ಚಿಕ್ಕಪ್ಪನೊಂದಿಗೆ ನೀರು ತರಲು ಹೋಗುತ್ತಿದ್ದರು. ಆಕಾಲಕ್ಕೆ ರೋಗರುಜಿನಗಳು ಹೆಚ್ಚಾಗಿದ್ದವು. ಅಂತೆಯೇ ಪ್ಲೇಗು/ಮಾರಿಯಮ್ಮನಿಂದ ರಕ್ಷಣೆ ಪಡೆಯುವ ಸಲುವಾಗಿ ಹೊಲದಲ್ಲಿ ಗುಡಿಸಲು ಕಟ್ಟಿ ವಾಸಮಾಡಲಾಗುತ್ತಿತ್ತು. ಅಷ್ಟೇ ಅಲ್ಲದೇ ಇದನ್ನು ಓಡಿಸುವ ಸಲುವಾಗಿ ಚಿಕ್ಕಪ್ಪ ಮತ್ತು ಊರಿನ ಕೆಲದೊಡ್ಡವರ ಜೊತೆ ಸೇರಿ ಭಜನೆ, ದೇವರ ಪ್ರಾರ್ಥನೆ ಮಾಡುತ್ತಾ ಬೀದಿ ಬೀದಿಯಲ್ಲಿ ತಿರುಗುತ್ತಿದ್ದರು. ಈ ಹಾಡು ನಾಟಕಗಳ ಪ್ರೇರಣೆಯೇ ಮುಂದೆ ಇವರಿಗೆ ಜನಪದ ಸಾಹಿತ್ಯದಲ್ಲಿ ಆಸಕ್ತಿಯನ್ನು ಮುಂದೆ ಉಂಟುಮಾಡಿತು. ಪ್ರತಿದಿನ ಸಂಜೆಯ ವೇಳೆಗೆ ಸೀಮೆ ಎಣ್ಣೆಯ ದೀಪದ ಸಹಾಯದಿಂದ ಚಿಕ್ಕಪ್ಪನವರು ತಪ್ಪು ಓದದಂತೆ ತಿದ್ದಿ ಸರಿಯಾಗಿ ಓದುವಂತೆ ಹೇಳಿಕೊಡುತ್ತಿದ್ದರು. ಬಾಲ್ಯದಲ್ಲಿರುವಾಗ ಸ್ವಾತಂತ್ರ್ಯ ಚಳುವಳಿಯ ಗಾಳಿ ಬೀಸಿದಾಗ ಅದರಲ್ಲಿ ಭಾಗವಹಿಸಿದರು. ಒಂದು ಸಲ ಸರಾಯಿ ಅಂಗಡಿಗೆ ಕಲ್ಲು ಬೀಸುವುದರ ಮೂಲಕ "ತುಂಬು ಚಟ್ಟಿ ಚಟ್ಟ ಕಟ್ಟಿ" ಎಂಬ ಕೂಗಿನೊಂದಿಗೆ ರಸ್ತೆ ತಡೆ ಮಾಡಿದ್ದರಿಂದ ಪೋಲಿಸರವರಿಂದ ಏಟು ತಿಂದು ಕಾರಾಗೃಹದ ಅತಿಥಿಗಳಾಗಿದ್ದರು. ತಂದೆಯವರ ಗ್ರಾಜುಟಿಯನ್ನು ಪಡೆಯಲು ಮೈನರ್ ಆದ

ಸುಶೀಲೇಗೌಡರನ್ನು ಜೊತೆಗೆ ಕರೆದುಕೊಂಡು ಕಬ್ಬತ್ತಿಯಿಂದ ಕೆಂಪೇಗೌಡರು ಕಾಲುನಡಿಗೆಯಲ್ಲಿ ನ್ಯಾಯಾಲಯಕ್ಕೆ ಹಾಜಾರಾಗುತ್ತಿದ್ದರು. ಕೆಲ ವೇಳೆಯಲ್ಲಿ ಕತ್ತಲಾದರೇ ಊರಿಗೆ ವಾಪಸ್ಸು ಹೋಗಲು ಸಾಧ್ಯವಾಗದಿದ್ದರೇ ಇಂಪೀರಿಯಲ್ ಟಾಕೀಸ್‌ನ ಹೊರಾಂಡದಲ್ಲಿ ಸೊಳ್ಳೆ ಕಡಿತವನ್ನು ಸಹಿಸಿಕೊಂಡು ಅಂಗಡಿ ಮುಂಗಟ್ಟುಗಳ ಕಟ್ಟೆಯ ಆಶ್ರಯದಲ್ಲಿ ಆ ರಾತ್ರಿಗಳನ್ನು ಕಳೆಯುತ್ತಿದ್ದರು. ಮುಂದೆ ಕಾಲ ಕಳೆದಂತೆ ಅನಾರೋಗ್ಯದಿಂದಾಗಿ ಕೆಂಪೇಗೌಡರು ಗೊರೂರು ಆಸ್ಪತ್ರೆಗೆ ಸೇರಿದರು. ಆಗ ನಿಂಗೇಗೌಡರನ್ನು ಕರೆದು ಸುಶೀಲೇಗೌಡನನ್ನು ಚೆನ್ನಾಗಿ ಓದಿಸು, ಒಂದು ಒಳ್ಳೆಯ ಮನೆಯನ್ನು ಕಟ್ಟಿಕೋ. ತಾವೇ ನೆಟ್ಟು ಬೆಳೆಸಿದ ಅರಳೀಮರ/ಬೇವಿನ ಮರಕ್ಕೆ ಮದುವೆಮಾಡು ಹಾಗೆಯೇ ಕರುವಿನ ಮದುವೆ ಮಾಡು ಎಂದು ಹೇಳಿ ಮರಣ ಹೊಂದಿದರು. (ಕರುವಿನ ಮದುವೆ ಎಂದರೆ ೫-೬ ವರ್ಷ ೧ ಹೆಣ್ಣು ಮತ್ತು ಒಂದು ಗಂಡು ಮಗುವಿಗೆ ಮದುವೆ ಮಾಡುವುದು ಇದು ಯಾರಾದರು ಅವಿವಾಹಿತರಾಗಿ ಮರಣಹೊಂದಿದರೆ ಅವರಿಗೆ ಒಳ್ಳೆಯದಾಗಲಿ ಎಂದು ಹೀಗೆ ಮಾಡುತ್ತಾರೆ)

ಅವರು ಶವವನ್ನು ಊರಿಗೆ ತಂದು ಊರಿನ ಹೊರಗಡೆಯೇ ಇಟ್ಟು ಅವರ ಏರಿ ಕೆಳಗಿನ ಸಣ್ಣ ತೋಟದಲ್ಲಿ ಶವ ಸಂಸ್ಕಾನ ಮಾಡಿದರು. ಈ ಮಧ್ಯದಲ್ಲಿ ಸುಶೀಲೇಗೌಡರ ಚಿಕ್ಕಮ್ಮ ಮನೆಯ ವಸ್ತುಗಳನ್ನು ಬಾಚಿಕೊಳ್ಳಲು ಮುಂದಾದುದರಿಂದ ಅವರ ಮಧ್ಯೆ ಚಿಕ್ಕ ಹೋರಾಟವೇ ನಡೆಯಿತು. ಕೆಂಪೇಗೌಡರ ನಿಧನದ ನಂತರ ತಬ್ಬಲಿಯಾದ ಇವರನ್ನ ನಿಂಗೇಗೌಡರು ತಮ್ಮ ಜೊತೆಯಲ್ಲಿಯೇ ಇರಿಸಿಕೊಂಡರು. ಆದರೆ ಇವರನ್ನು ಪಾಠಶಾಲೆಗೆ ಕಳುಯಿಸಿ ವಿದ್ಯಾಭ್ಯಾಸ ಮಾಡಿಸುವ ಆಸಕ್ತಿಯನ್ನು ವಹಿಸಲಿಲ್ಲ.

ಹೀಗೆ ಸುಶೀಲೇಗೌಡರು ಅಜ್ಜ-ಅಜ್ಜಿ, ತಂದೆ-ತಾಯಿ, ಚಿಕ್ಕಪ್ಪ ಎಲ್ಲರನ್ನು ಕಳೆದುಕೊಂಡು ಅನಾಥರಾದರು.

ಶಿಕ್ಷಣ:

ಸುಶೀಲೇಗೌಡರ ಶಿಕ್ಷಣದ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ವಹಿಸಿದವರೆಂದರೇ ಅವರ ಚಿಕ್ಕಪ್ಪನವರಾದ ಕೆಂಪೇಗೌಡರು. ಬಡತನದಲ್ಲಿದ್ದರೂ ಕೂಡ ತಮ್ಮ ಅಣ್ಣನ ಮಗನನ್ನು ಓದಿಸಬೇಕೆಂಬ ಪಣವನ್ನು ಕೆಂಪೇಗೌಡರು ತೊಟ್ಟಿದ್ದರು. ಅಣ್ಣ ರಂಗೇಗೌಡರು ಮರಣದ ನಂತರ ಕೆಂಪೇಗೌಡರೆ ಇವರ ಹೊಣೆಗಾರಿಕೆಯನ್ನು ವಹಿಸಿಕೊಂಡರು, ಅದಕ್ಕಾಗಿ ಮದುವೆಯಾಗದೆ ಅವಿವಾಹಿತರಾಗಿಯೇ ಉಳಿದುಕೊಂಡರು, ೧ ಮತ್ತು ೨ನೇ ತರಗತಿಯನ್ನು ಕಬ್ಬತ್ತಿ ಮತ್ತು ಮೊಸಳೆಯಲ್ಲಿ ವ್ಯಾಸಂಗ ಮಾಡಿದರು. ಕಬ್ಬತ್ತಿಯಿಂದ ಮೊಸಳೆಗೆ ೫ಮೈಲಿ ನಡೆದು ಹೋಗುತ್ತಿದ್ದರು. ಆಗ ಅವರ ಚಿಕ್ಕಪ್ಪ ದನಕಾಯಲು ಹೋಗಿದ್ದರೂ ಕೂಡ ಮಗನ ಮೇಲಿನ ಪ್ರೀತಿಯಿಂದ ಶಾಲೆಗೆ ಬಂದು ಇವರ ಬಗ್ಗೆ ವಿಚಾರಿಸಿಕೊಂಡು

ಹೋಗುತ್ತಿದ್ದರು. ಸುಶೀಲೇಗೌಡರು ಶಾಲೆಗೆ ಚಕ್ಕರ್ ಹೊಡೆದು ಆಟ ಆಡಲು ಹೊಳೆಗೆ ಈಜಲು ಹೋಗುತ್ತಿದ್ದರು. ಇದನ್ನು ತಪ್ಪಿಸಲು ಹುಲ್ಲುಗಾವಲಿನಿಂದ ಕೆಂಪೇಗೌಡರು ಬಂದು ಸುಶೀಲೇಗೌಡರನ್ನು ಹುಡುಕಿ ಕರೆ ತಂದು ಮಾಸ್ಟರ್ ಅವರಿಂದ ಛಡಿ ಏಟು ಕೊಡಿಸುತ್ತಿದ್ದರು. ಸಂಜೆಗೆ ದೀಪದ ಬೆಳಕಿನಲ್ಲಿ ತಪ್ಪು ಓದದಂತೆ ಕೆಂಪೇಗೌಡರು ಸುಶೀಲೇಗೌಡರಿಗೆ ತಿದ್ದಿ ಓದಲು ಗದರಿಸುತ್ತಿದ್ದರು. ಬೆಳಗ್ಗೆ ಎದ್ದ ಕೂಡಲೇ ಸುಮಾರು ೧ ಮೈಲಿ ದೂರದಿಂದ ಅಡ್ಡೆಯಲ್ಲಿ ನೀರ ತರಲು ಚಿಕ್ಕಪ್ಪನೊಂದಿಗೆ ಹೋಗುತ್ತಿದ್ದರು. ನಂತರ ೧೦ ಗಂಟೆಗೆ ಶಾಲೆಗೆ ಹೋಗುತ್ತಿದ್ದರು. ಇವರು ೨ನೇ ತರಗತಿಯನ್ನು ಪೂರೈಸುತ್ತಿದ್ದಂತೆ ಕೆಂಪೇಗೌಡರು ವಿಧಿವಶ ಆದರು.

೩ ಮತ್ತು ೪ನೇ ತರಗತಿಯನ್ನು ಅಂಕಪುರದಲ್ಲಿ ಮುಂದುವರೆಸಿದರು. ಚಿಕ್ಕಪ್ಪ ನಿಂಗೇಗೌಡರ ಮಾವನ ಮನೆಯಲ್ಲಿದ್ದು ಸಗಣಿ ಬಾಚುವುದು, ಕಸಗುಡಿಸುವುದು, ನೀರು ತರುವುದು ಕೆಲಸಗಳನ್ನು ಪ್ರತಿದಿನ ಬೆಳಗ್ಗೆ ಮಾಡಿ ಮುಗಿಸಿ ೧೦ ಗಂಟೆಗೆ ಶಾಲೆಗೆ ಹೋಗುತ್ತಿದ್ದರು. ಹೀಗೆ ಪ್ರಾಥಮಿಕ ಶಿಕ್ಷಣವನ್ನು ಅವರು ಕಬ್ಬತ್ತಿ ಮತ್ತು ಅಂಕಪುರದಲ್ಲಿ ಮುಗಿಸಿದರು. ಮಾಧ್ಯಮಿಕ ಶಿಕ್ಷಣವನ್ನು ೧, ೨, ೩ ಮತ್ತು ೪ನೇ ತರಗತಿಯನ್ನು ಕಟ್ಟಾಯದಲ್ಲಿ ಮುಂದುವರೆಸಿದರು. ಕಬ್ಬತ್ತಿಯಿಂದ ೫ ಮೈಲಿ ನಡೆದು ಮೊಸಳೆಗೆ ೬ನೇ ತರಗತಿಗೆ ಹೋಗುತ್ತಿದ್ದರು. ಕಬ್ಬತ್ತಿಯಿಂದ ಕಟ್ಟಾಯಕ್ಕೆ ೩ ಮೈಲಿ ನಡೆದೇ ಹೋಗುತ್ತಿದ್ದರು. ೪ನೇ ತರಗತಿ ಪಬ್ಲಿಕ್ ಪರೀಕ್ಷೆಯಲ್ಲಿ ೪ಜನ ವಿದ್ಯಾರ್ಥಿಗಳಿದ್ದರು. ಆಗಲೂ ಕೂಡ ಮನೆಯಲ್ಲಿನ ಎಲ್ಲ ಕೆಲಸವನ್ನು ಮುಗಿಸಿ ಕಟ್ಟಾಯಕ್ಕೆ ಶಾಲೆಗೆ ೧೦ ಗಂಟೆಗೆ ಹೋಗುತ್ತಿದ್ದರು. ೪ನೇತ ತರಗತಿಯಲ್ಲಿ ೩ ಜನರು ಅನುತ್ತೀರ್ಣರಾದರು. ಇವರೊಬ್ಬರು ಮಾತ್ರ ಉತ್ತೀರ್ಣರಾದರು. ಆಗ ಊರಿನ ಎಲ್ಲ ವರ್ಗದ ಜನರಿಂದ ಮುಂದೇ ಓದಲು ಪ್ರೋತ್ಸಾಹ ದೊರೆಯಿತು. ಊರಿನ ಎಲ್ಲರೂ ಹರ್ಷಪಟ್ಟಿದ್ದರು. ಮುಂದೆ ಹೈಸ್ಕೂಲ್‌ಗೆ ಎಡಾಣೆಗೆ ಸೇರಿದರು. ಆಗ ಕೂಡ ಸುಮಾರು ಮೈಲಿ ಶಾಲೆಗೆ ನಡೆದೇ ಹೋಗುತ್ತಿದ್ದರು. ಆಗ ಒಡ್ಡನಬಾರೆಯಲ್ಲಿ ದನಕುರಿ ಮೇಯಿಸುತ್ತಿದ್ದರು. ದೀಪದ ಬೆಳಕಲ್ಲಿ ಓದುತ್ತಿದ್ದರು. ಹೀಗೆ ಮಾಧ್ಯಮಿಕ ಶಿಕ್ಷಣದಲ್ಲಿದ್ದಾಗ ಅತ್ತೆಯರು ಆಶ್ರಯ ಕೊಟ್ಟರೆ ಹೊರತು ಅಕ್ಕರೆಯನ್ನು ತೋರಿಸಲಿಲ್ಲ. ಮಕ್ಕಳಿಗೆ ಹೆಚ್ಚಾಗಿ ಅಕ್ಕರೆಯೇ ಬೇಕು. ಆದರೆ ಅದು ಇವರಿಗೆ ಸಿಗದೇ ಹೋಯಿತು. ೧೦ನೇ ತರಗತಿಯನ್ನು ಓದುವಾಗ ತಾವೇ ಸ್ವತಃ ಅಡಿಗೆ ಮಾಡಿ ಊಟ ಮಾಡುತ್ತಿದ್ದರು. ಕಳ್ಳೆಪಿಳ್ಳೆಯ್ಯಂಗಾರು ಅವರ ಮನೆಯಲ್ಲಿ ಜಾತಿ ಮತದ ಭೇದವಿಲ್ಲದೇ ಓದಲು ಕೋಣೆಯು ಇವರಿಗೆ ಸಿಕ್ಕಿತು. ಆಗ ಇವರೊಂದಿಗೆ ಸೀತಾರಾಮ ಎಂಬ ಸ್ನೇಹಿತರಿದ್ದರು. ಅಯ್ಯಂಗಾರರ ಮನೆಯಲ್ಲಿ ಒಳ್ಳೆಯ ಆತಿಥ್ಯ ಇವರಿಗೆ ದೊರೆಯಿತು. ೧೦ನೇ ತರಗತಿಯಲ್ಲಿ

ಅನುತ್ತೀರ್ಣರಾದರೇ ಇ.ಪಿ.ಎಸ್. ಎಂಬ ಗ್ರೇಡ್ ಮಾತ್ರ ದೊರೆಯಿತು. (ಇ.ಪಿ.ಎಸ್ ಎಲಿಜಿಬಲ್ ಫಾರ್ ಪಬ್ಲಿಕ್ ಸರ್ವೀಸ್) ಇಂಗ್ಲೀಷ್ ಪತ್ರಿಕೆಯಲ್ಲಿ ಅನುತ್ತೀರ್ಣರಾಗಿದ್ದರು. ಟೈಪರೇಟಿಂಗ್, ಶಾರ್ಟ್‌ಹ್ಯಾಂಡ್, ಅಭ್ಯಾಸವನ್ನು ಮಾಡಿದರು. ಇದರ ಜೊತೆಗೆ ಸಿದ್ದಗಂಗ ಮಠದ ಆಶ್ರಯದಲ್ಲಿ ಪಂಡಿತ ಶ್ರೀ ಎಚ್.ಕೆ. ಸಿದ್ದಗಂಗಯ್ಯ ಅವರ ಮಾರ್ಗದರ್ಶನದಲ್ಲಿ ಸಂಸ್ಕೃತ ಪ್ರಾಥಮಿಕ ಹಾಗೂ ಕಾವ್ಯ ಪರೀಕ್ಷೆಗಳನ್ನು ಅಭ್ಯಸಿಸಿ ತೇರ್ಗಡೆಹೊಂದಿದರು. ಅಮರ ಕೋಶವನ್ನು ಕಷ್ಟಪಟ್ಟು ಅಧ್ಯಯನ ಮಾಡಿದರು. ಹಿರಿಯ ಅಧ್ಯಾಪಕ ಮಿತ್ರರ ಸಹಾಯದಿಂದ ಕನ್ನಡ ಪಂಡಿತ ಪರೀಕ್ಷೆಯ ಪ್ರವೇಶಕ್ಕೆ ಕುಳಿತರು. ಪ್ರಾರಂಭದ ಪ್ರಥಮ ಪ್ರಯತ್ನದಲ್ಲಿ ಸಫಲತೆಯನ್ನು ಪಡೆಯಲಿಲ್ಲ. ಮತ್ತೆ ೨ನೇ ಪ್ರಯತ್ನದಲ್ಲಿ ಉತ್ತೀರ್ಣರಾದರು. ಹಿಂದಿ ಪ್ರಚಾರ ಸಭೆಯಲ್ಲಿ ಹಿಂದೆ ಪರೀಕ್ಷೆಯನ್ನು ಅಧ್ಯಯನ ಮಾಡಿದರು. ೨ನೇ ಬಾರಿ ಕನ್ನಡ ಪ್ರವೇಶ ಪರೀಕ್ಷೆಯಲ್ಲಿ ಆಯ್ಕೆಯಾಗಿ ಮೈಸೂರಿನ ಕನ್ನಡ ಸರ್ಕಾರಿ ತರಬೇತಿ ಶಾಲೆಯಲ್ಲಿ ೪ ವರ್ಷಕಾಲ ಕನ್ನಡ ಪಂಡಿತ ಪರೀಕ್ಷೆ ಅಧ್ಯಯನ ಮಾಡಿದರು. ೧೯೬೨ರಲ್ಲಿ ಮದುರೆಯಲ್ಲಿ ಕನ್ನಡ ಪಂಡಿತ ಕೊನೆ ವರ್ಷವನ್ನು ಮುಗಿಸಿದರು. ನಂತರದಲ್ಲಿ ಇಂಟರ್ ಮೀಡಿಯಟ್ ಪರೀಕ್ಷೆ ಪ್ರವೇಶ ಪ್ರಯತ್ನ ಮಾಡಿ ಅನುತ್ತೀರ್ಣರಾದರು. ಹಿಂದಿ ದಕ್ಷಿಣ ಭಾರತದ ರಾಷ್ಟ್ರಭಾಷಾ ಪ್ರವೀಣ ಪರೀಕ್ಷೆಯ ಪ್ರವೇಶ ಪಡೆದು ಉತ್ತೀರ್ಣರಾದರು. ಸಾಹಿತ್ಯರತ್ನ ಪರೀಕ್ಷೆಯಲ್ಲಿ ಉತ್ತೀರ್ಣರಾದರು (ಎಂ.ಎ., ಗೆ ಸಮಾನ) ಆ ವೇಳೆಗಾಗಲೇ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಬಿ.ಎ., ಪರೀಕ್ಷೆಯಲ್ಲಿಯೂ ಕೂಡ ಉತ್ತೀರ್ಣರಾದರು. ಬಿ.ಇಡ್. ಅಭ್ಯಾಸ ಮಾಡಲು ದಾವಣಗೆರೆಯಲ್ಲಿ ಸರ್ಕಾರಿ ಬಿ.ಎಡ್‌ಗೆ ಸೇರಿದರು (೧೯೬೯) ಬಿ.ಎಡ್. ಶಿಕ್ಷಣವನ್ನು ಪಡೆದರು.

ಹೆಚ್. ಹನುಮಂತಪ್ಪ ಅವರು ಮುಖ್ಯಸ್ಥರಾಗಿದ್ದಾಗ, ಸೇವಾದಳದ ಕೇಂದ್ರನಾಯಕರಾಗಿ ೪೦ದಿನ ವ್ಯಾಯಾಮ ಶಿಕ್ಷಕಕ ತರಬೇತಿಯನ್ನು ಪಡೆಯಲಾಯಿತು. (ಸಿ.ಪಿ.ಎಡ್‌ಗೆ ಸಮಾನ).

ವಿವಾಹ ಮತ್ತು ಕೌಟುಂಬಿಕ ಜೀವನ:

ಶ್ರೀ ರಂಗೇಗೌಡರು ಮತ್ತು ಶ್ರೀಮತಿ ಪುಟ್ಟಮ್ಮ ದಂಪತಿಗಳ ಏಕ ಮಾತ್ರ ರತ್ನಪುತ್ರರಾದ ಸುಶೀಲೇಗೌಡರು ಅಜ್ಜ–ಅಜ್ಜಿ, ತಂದೆ ತಾಯಿ, ಚಿಕ್ಕಪ್ಪಂದಿರುಗಳನ್ನು ಕಳೆದುಕೊಂಡರು, ಕೂಡು ಜೀವನದಲ್ಲಿ ನಿರುತ್ಸಾಹಗೊಳ್ಳದೆ ಶಿಕ್ಷಣದಲ್ಲಿ ಮುಂದುವರೆದರು. ಈ ಮಧ್ಯೆ ಅಂದರೆ ೧೯೬೨ರಲ್ಲಿ ಕನ್ನಡ ಪಂಡಿತ ಪರೀಕ್ಷೆಯ ಅಂತಿಮ ತರಗತಿಯಲ್ಲಿ ಓದುತ್ತಿರುವಾಗಲೇ ಒಡ್ಡನಬಾರೆಯ ಶ್ರೀನಂಜೇಗೌಡ ಮತ್ತು ಶ್ರೀಮತಿ ಲಕ್ಕಮ್ಮನವರ ೮ಜನ ಮಕ್ಕಳಲ್ಲಿ ಕೊನೆಯವರಾದ ಕಮಲಮ್ಮನವರನ್ನು ಸಂಪ್ರದಾಯದ ಪ್ರಕಾರ ವಿವಾಹವಾದರು.

ಈ ವಿವಾಹಕ್ಕೆ ತಾವೇ ಎಲ್ಲ ರೀತಿಯ ತಯಾರಿಗಳನ್ನು ಮಾಡಿಕೊಂಡರು. ಸಂಪ್ರದಾಯದಂತೆ ಹಿರಿಯ ಮತ್ತು ಒಬ್ಬನೇ ಮಗನಾದರಿಂದ ಊರ ರಕ್ಷಣಾ ದೇವತೆಯಾದ ಭೂತಪ್ಪನ ಸೇವೆಗೆ ಕುರಿಮರಿಯನ್ನು ಬಲಿಕೊಟ್ಟು ಊರಿನವರಿಗೆಲ್ಲರಿಗೂ ಊಟವನ್ನು ಹಾಕಿಸಿದರು. ಮದುವೆಯಾದ ಖುಷಿ ಒಂದು ಕಡೆಯಾದರೆ ಮತ್ತೊಂದು ಕಡೆ ಮದುವೆಯ ಮಂಟಪದಲ್ಲಿಯೇ ಮಾವನ ಮನೆಯವರೊಂದಿಗೆ ವಿನಾಕಾರಣ ವೈಷಮ್ಯ, ವೈಮನಸ್ಸು ಉಂಟಾಗಿ ಮಾವನ ಮನೆಯ ಸುಖವೂ ದೊರೆಯಲಿಲ್ಲ. ಕಬ್ಬತ್ತಿಗ್ರಾಮದ ಸಂಪ್ರದಾಯವೆಂದರೇ ಹಿರಿಯಮಗನ ಮದುವೆ ಮಾಡುವಾಗ ಊರ ರಕ್ಷಕನಾದ ಭೂತಪ್ಪನಿಗೆ ಕುರಿಯನ್ನು ಬಲಿಕೊಡಬೇಕು. ಹಿರಿಯ ಮಗಳಾದರೆ ಕೋಳಿಯನ್ನು ಬಲಿಕೊಡಬೇಕು. ಆ ಊಟವನ್ನು ಸಂಬಂಧಿಕರು ಇಲ್ಲವೇ ಮದುವೆಗೆ ಬಂದವರು ಅಥವಾ ಊರಿನ ಸಮಸ್ತರೂ ಕೂಡಿ ಊಟಮಾಡುತ್ತಾರೆ.

ವಿವಾಹದ ಸಂಧರ್ಭದಲ್ಲಿ ಜೀವನಕ್ಕಾಗಿ ಶಿಕ್ಷಕ ವೃತ್ತಿಯನ್ನು ಕೈಗೊಂಡಿದ್ದರು. ಸರ್ಕಾರದಿಂದ ಸಂಬಳ ಬರುತ್ತಿತ್ತು. ಇದರ ಜೊತೆಗೆ ಮಧ್ಯಪ್ರದೇಶದಲ್ಲಿ ಇಂಟರ್ ಮೀಡಿಯಟ್ ಪರೀಕ್ಷೆಯನ್ನು ಕಟ್ಟಿದ್ದರು. ಇವರು ಶಿಕ್ಷಕ ವೃತ್ತಿಯೊಂದಿಗೆ ಇಂಟರ್ ಮೀಡಿಯಟ್ ಪರೀಕ್ಷೆ, ಸಾಹಿತ್ಯರತ್ನ ಪರೀಕ್ಷೆ (ಎಂ.ಎ.ಗೆ ಸಮಾನ) ತೆಗೆದುಕೊಂಡು ಉತ್ತೀರ್ಣರಾದರು. ನಂತರದಲ್ಲಿ ಬಿ.ಎಡ್.ಗೆ ಸೇರಿದರು. (೬೮–೬೯) ಈ ಮಧ್ಯ ಕನ್ನಡ ಪಂಡಿತರಾಗಿದ್ದರು. ೧೯೬೩ರಲ್ಲಿ ಪುತ್ರಿ ಕೆ.ಎಸ್. ಲೀಲಾವತಿಯವರು ಹೆಂಡತಿಯ ತವರುಮನೆಯಾದ ಉಡವೇರಿಯಲ್ಲಿ ಜನಿಸಿದರು. ಚಿತ್ರದುರ್ಗದಲ್ಲಿ ಸರ್ಕಾರಿ ಹೈಯರ್ ಸೆಕೆಂಡರಿ ಸ್ಕೂಲ್‌ನಲ್ಲಿ ಕಾರ್ಯ ನಿರ್ವಹಿಸುತ್ತಿರುವಾಗ ಕರ್ನಾಟಕ ವಿಶ್ವವಿದ್ಯಾಲಯದಿಂದ ಬಿ.ಎ. ಪದವಿಯಲ್ಲಿ ಉತ್ತೀರ್ಣರಾದರು. ತುಮಕೂರಿನಲ್ಲಿ ಕನ್ನಡಪಂಡಿತರಾಗಿ ಸೇವೆ ಸಲ್ಲಿಸುತ್ತಿರುವಾಗ ೧೯೬೫ರಲ್ಲಿ ಕೆ.ಎಸ್. ನಟೇಶ್‌ರವರ ಜನನವಾಯಿತು. (ಈಗ ಇವರು ಆರ್ಮಿ ಭೂಸೇನಾ ವಿಭಾಗದಲ್ಲಿ ಕರ್ನಲ್ ಆಗಿ ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ) ಆ ನಂತರ ಚಿತ್ರದುರ್ಗದಲ್ಲಿ ಸೇವೆ ಸಲ್ಲಿಸುತ್ತಿದ್ದಾಗ ೧೯೬೭ರಲ್ಲಿ ಕೆ.ಎಸ್. ಹರೀಶ್‌ರವರ ಜನನವಾಯಿತು(ಈಗ ಇವರು ನೇತಾಜಿ ಕೈಗಾರಿಕಾ ತರಬೇತಿ ಕೇಂದ್ರದ ಪ್ರಾಂಶುಪಾಲರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ)

ಹವ್ಯಾಸ:

ಪ್ರೊ. ಕೆ.ಆರ್. ಸುಶೀಲೇಗೌಡರು ಚತುರ್ಭಾಷಾ ಪ್ರವೀಣರು. (ಕನ್ನಡ ಇಂಗ್ಲೀಷ್, ಹಿಂದಿ, ಉರ್ದು) ಓದು ಇವರ ಹವ್ಯಾಸವಾಗಿದೆ. ಸತತ ಪರಿಶ್ರಮಿಗಳು ಸಮಾಜ ಸೇವಾಕರ್ತರು. ದಲಿತ ಹಿಂದುಳಿದವರ ಬಗ್ಗೆ ಕಳಕಳಿ ಇತ್ತು. ಹಾಸನದ ಒಟ್ಟು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದು, ಯಾರೂ ಪ್ರೀತಿಯಿಂದ ಕರೆದರೂ ಅಲ್ಲಿಗೆ ಹೋಗುವುದು

ಇವರ ಮುಖ್ಯ ಹವ್ಯಾಸವಾಗಿದೆ.

ಮನರಂಜನೆಗಾಗಿ ಅವರು ವೈವಿಧ್ಯಮಯ ಪುಸ್ತಕಗಳನ್ನು ಓದುವುದು ಪ್ರೊ. ಕೆ.ಆರ್. ಸುಶೀಲೇಗೌಡ ಅವರ ಜೀವನದಲ್ಲಿ ಪ್ರತಿ ಹೆಜ್ಜೆಯೂ ಮರೆಯದ (ಸುಖ-ದುಃಖ) ಕ್ಷಣಗಳಾಗಿವೆ. ಅವುಗಳಲ್ಲಿ ಹೈಸ್ಕೂಲಿನಲ್ಲಿ ಓದುತ್ತಿರುವಾಗ ಸ್ನೇಹಿತರೊಡಗೂಡಿ ಪ್ರಕಟವಾದ ಗೋಡೆ ಬರಹದಿಂದ ಆದ ಸಂತೋಷ ಹೇಳತೀರದು.

ವೃತ್ತಿ ಬದುಕು:

ಸುಶೀಲೇಗೌಡರು ತಮ್ಮ ವೃತ್ತಿ ಜೀವನ ತೃಪ್ತಿಕರವಾಗಿತ್ತು, ಎಂದು ಅಭಿಮಾನದಿಂದ ಹೇಳಿಕೊಳ್ಳುತ್ತಾರೆ. ಒಳ್ಳೆ ಅಧ್ಯಾಪಕರು ಎಂದು ಹೆಸರು ಗಳಿಸಿಕೊಂಡಿದ್ದಾರೆ. ಇವರಿಗೆ ಭೋಧನೆ ಬಹಳ ಖುಷಿ ಕೊಡುತ್ತಿತ್ತು. ಇವರು ವಿದ್ಯಾರ್ಥಿಗಳನ್ನು ತುಂಬಾ ಹತ್ತಿರದಿಂದ ಕಂಡು ಅವರ ಪ್ರೀತಿಗೆ ಪಾತ್ರರಾಗಿದ್ದಾರೆ.

ಸಿ.ಪಿ.ಎಡ್‌ಗೆ ಸಮಾನವಾದ ಸೇವಾದಳ ಶಿಕ್ಷಕರ ತರಬೇತಿಯನ್ನು ಪಡೆದಿದ್ದರಿಂದ ಪ್ರಥಮವಾಗಿ ಹಳೆಬೀಡಿನಿಂದ ಹಗರೇ ರಸ್ತೆ ನಿರ್ಮಾಣಕ್ಕೆ ಸೇವಾದಳ ಸ್ವಯಂ ಸೇವಕರ ಮುಖಾಂತರ ಸೇವಾಕಾರ್ಯವನ್ನು ಆರಂಭಿಸಿದರು. ೫೦೦ ವಿದ್ಯಾರ್ಥಿಗಳ ಸಂಘಟನೆ ಮಾಡಿ ಹಾಸನ ಜಾತ್ರೆಯಲ್ಲಿ ಸೇವಾದಳ ಶಿಬಿರ ಏರ್ಪಡಿಸಿದ ರಾತ್ರಿ ಗಸ್ತು ಕಾಯುವ ಕೆಲಸಮಾಡಿದರು. ಇದು ಮುಗಿದ ನಂತರ ಅಂದಿನ ಜಿಲ್ಲಾ ಸೇವಾದಳದ ಅಧ್ಯಕ್ಷರಾಗಿದ್ದ ಶ್ರೀ ಹಾರನಹಳ್ಳಿ ರಾಮಸ್ವಾಮಿ ಅವರ ಸಹಾಯದಿಂದ ನುಗ್ಗೇಹಳ್ಳಿ (ಚನ್ನರಾಯ ಪಟ್ಟಣ ತಾಲ್ಲೂಕು)ಯ ಜಿಲ್ಲಾ ಬೋರ್ಡ್ ಪ್ರೌಢಶಾಲೆಯಲ್ಲಿ ತಾತ್ಕಾಲಿಕ ವ್ಯಾಯಾಮ ಶಿಕ್ಷಕರಾಗಿ ೧೯೫೩ರಲ್ಲಿ ನೇಮಕವಾದರು. ಶ್ರೀನಿವಾಸ ಅಯ್ಯಂಗಾರ್ ಮುಖ್ಯೋಪಾಧ್ಯಾಯರು ಅವರ ಸಹಾಯದಿಂದ ಎಂ.ಪಿ.ಎಸ್.ಸಿ.ಗೆ (ಮ್ಯಾನ್ಯುರ್ ಪಬ್ಲಿಕ್ ಸರ್ವಿಸ್ ಕಮೀಷನ್) ಅರ್ಜಿ ಸಲ್ಲಿಸಿದರು. ನಂತರ ೧ ತಿಂಗಳೊಳಗೆ ತುಮಕೂರಿನ ಸರ್ಕಾರಿ ಪ್ರೌಢಶಾಲೆಯಲ್ಲಿ ವ್ಯಾಯಾಮ ಶಿಕ್ಷಕರಾಗಿ ನಿಯುಕ್ತಿ ಹೊಂದಿದರು. ಇದರಿಂದಾಗಿ ಇವರಿಗೆ ಭಾರತ ಸೇವಾದಳದಿಂದ ಅಭೂತಪೂರ್ವ ಸ್ವಾಗತವನ್ನು ನೀಡಲಾಯಿತು. ಹಿಂದಿಯನ್ನು ಕಲಿತಿದ್ದರಿಂದಾಗಿ ಹಿಂದಿ ಪ್ರಚಾರ ಸಭಾದಲ್ಲಿ ವಿದ್ಯಾರ್ಥಿಗಳಿಗೆ ಹಿಂದಿಪಾಠ ಆರಂಭಿಸಿದರು. ಅಲ್ಲಿ ವಿದ್ಯಾರ್ಥಿಗಳ ಕಾರ್ಯದರ್ಶಿಯಾಗಿದ್ದುಕೊಂಡು ಕನ್ನಡ ಮತ್ತು ಹಿಂದಿ ಲೇಖನಗಳನ್ನುಳ್ಳ "ಪತ್ರಪುಷ್ಪ" ಪತ್ರಿಕೆಯನ್ನು ಪ್ರಕಟಿಸಿದರು. ಮುದ್ದಣ್ಣರಂತೆ (ಹೊಸಗನ್ನಡ ಸಾಹಿತ್ಯದ ಮುಂಗೋಳಿ ಮುದ್ದಣ್ಣ) ತುಮಕೂರಿನ ಪ್ರೌಢಶಾಲೆಯಲ್ಲಿ ವ್ಯಾಯಾಮ ಶಿಕ್ಷಕರರಾಗಿ ವೃತ್ತಿಜೀವನವನ್ನು ಆರಂಭಿಸಿದರು. ಇಲ್ಲಿದ್ದಾಗಲೇ ಸುಶೀಲೇಗೌಡರಿಗೆ ಜಿಮ್ನಾಶಿಯಂ ತರಬೇತಿಗೆ ಆಯ್ಕೆಮಾಡಿ ಮಾಸಿಕ ರೂ. ೫೦ರಂತೆ ಸಂಬಳ ಕೊಟ್ಟು ಕಾರ್ಯನಿರ್ವಹಿಸುವಂತೆ ಮಾಡಲಾಯಿತು.

ತದನಂತರ ತುಮಕೂರಿನ ಹೈಸ್ಕೂಲ್‌ಗೆ ಕನ್ನಡ ಪಂಡಿತ ಶಿಕ್ಷಕರಾಗಿ ಆಯ್ಕೆಯಾದರು (೧೯೬೩ರಲ್ಲಿ) ಈ ಮಧ್ಯೆ ೧೯೬೨ರಲ್ಲಿ ಕಮಲಮ್ಮನವರೊಂದಿಗೆ ವಿವಾಹವಾದರು. ತುಮಕೂರಿನಿಂದ ಚಿತ್ರದುರ್ಗಕ್ಕೆ ಹೈಸ್ಕೂಲ್‌ಗೆ ಕನ್ನಡ ಪಂಡಿತರಾಗಿ ೧೯೬೫ರಲ್ಲಿ ವರ್ಗಾವಣೆಯಾದರು. ವೃತ್ತಿ ಮತ್ತು ಶಿಕ್ಷಣವನ್ನು ಇವರು ಜೊತೆ ಜೊತೆಯಲ್ಲಿಯೇ ಸಾಗಿಸಿಕೊಂಡು ಬಂದರು. ಚಿತ್ರದುರ್ಗದಲ್ಲಿದ್ದಾಗ ಹಿಂದಿ ಸಾಹಿತ್ಯ ರತ್ನ ಪರೀಕ್ಷೆ ಉತ್ತೀರ್ಣ ಮತ್ತು ಕರ್ನಾಟಕ ವಿಶ್ವವಿದ್ಯಾಲಯದಿಂದ ಬಿ.ಎ. ಪದವಿಯನ್ನು ಪಡೆದರು. ದಾವಣಗೆರೆಯ ಸರ್ಕಾರಿ ಉನ್ನತ ಪ್ರೌಢಶಾಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವಾಗ "ಸುಪ್ರಭಾತ" ವೆಂಬ ವಾರ್ಷಿಕ ಸಂಚಿಕೆಯ ೨ ಪ್ರಕಟಣೆಗಳು ಹೊರಹೊಮ್ಮಿದವು (೧೯೬೯ರಲ್ಲಿ). ೧೯೬೮-೬೯ರಲ್ಲಿ ಪಾಟಿಯಾಲದಲ್ಲಿ ಜಿಮ್ನಾಶಿಯಂ ಶಿಕ್ಷಕರಾಗಿ ೩ ತಿಂಗಳಕಾಲ ಹೋಗಿ ಬಂದರು. ಪಾಟಿಯಾಲಕ್ಕೆ ವಿದ್ಯಾರ್ಥಿಗಳಿಗೆ ತರಬೇತಿ ನೀಡಿದರು. ಹಿಂದಿ ಪ್ರಚಾರ ಕಾರ್ಯವನ್ನು ತುಮಕೂರಿನಲ್ಲಿ ಕೈಗೊಂಡು ಪ್ರಶಸ್ತಿಯನ್ನು ಪಡೆದರು. ಚಿತ್ರದುರ್ಗದಲ್ಲಿ ಪ್ರೌಢಶಾಲೆಯಲ್ಲಿ ಕ್ರೀಡಾಕಾರ್ಯದರ್ಶಿಯಾಗಿ ಸೇವೆಸಲ್ಲಿಸಿದರು. ಮಕ್ಕಳನ್ನು ಕ್ರೀಡೆಯಲ್ಲಿ ತೊಡಗಿಸುವ ಕ್ರೀಡೆಯಲ್ಲಿ ತೊಡಗಿಸುವ ಮೂಲಕ ವಿಭಾಗ ಮತ್ತು ರಾಜ್ಯ ಮಟ್ಟದಲ್ಲಿ ಪ್ರಶಸ್ತಿ ಪಡೆಯುವಂತೆ ಶ್ರಮಿಸಿದರು (೧೯೬೮-೬೯ರಲ್ಲಿ) ಕನ್ನಡ ಪಂಡಿತರಾಗಿದ್ದಾಗ ಅಲ್ಲಿಂದ ಸಹಾಯಕ ಅಧ್ಯಾಪಕರಾಗಿ ಹಾಸನ ಸರ್ಕಾರಿ ಪ್ರೌಢ ಶಾಲೆಗೆ ವರ್ಗಾವಣೆ ಹೊಂದಿದರು. ಬಿ.ಇಡಿ ಓದುವಾಗ ಲೋಕಸೇವಾ ಸಹಯೋಗದಿಂದ ಹಿಂದಿ ಉಪನ್ಯಾಸಕರಾಗಿ ಮಂಗಳೂರಿನ ಸರ್ಕಾರಿ ಕಾಲೇಜಿಗೆ ಆಯ್ಕೆಯಾದರು. ೨೩ ವರ್ಷಗಳು ಸತತವಾಗಿ ಉಚಿತವಾಗಿ ಹಿಂದಿ ಪ್ರಚಾರದಲ್ಲಿ ಸೇವೆ ಮಾಡಿದರು. ಭಾರತೀಯ ವಿದ್ಯಾಭವನದ ಪರೀಕ್ಷೆಗಳ ವ್ಯವಸ್ಥಾಪಕನಾಗಿ ಮಂಗಳೂರಿನಲ್ಲಿ ಕಾರ್ಯನಿರ್ವಹಿಸಿದರು ಮತ್ತು ಮೈಸೂರು ಮಹಾರಾಜ ಸಂಸ್ಥಾನ ಪಾಠಶಾಲೆಯಲ್ಲಿ ಸಂಸ್ಕೃತಿ ವಿದ್ವಾಂಸರಾಗಿ ಸೇವೆಮಾಡಿದ್ದಾರೆ.

ಹಾಸನ ಜನ ಜೀವನ ಸಂಸ್ಕೃತಿಗೆ ಒಗ್ಗಿಕೊಂಡರು. ಇವರಿಗೆ ಕರೀಂಖಾನ್ ಅವರ ಪ್ರೋತ್ಸಾಹವಿತ್ತು. ಅಲ್ಲದೆ ಓದುವ ವರ್ಗದ ಜನರು ಕೂಡ ಬೆಂಬಲವನ್ನು ಕೊಟ್ಟರು. ಇವರ ಸಮಾಜ ಸೇವೆ ನಿರಂತರವಾದುದು. ಸಾದಾ-ಸೀದಾ ವ್ಯಕ್ತಿತ್ವ ಇವರದು. ತುಂಬಾ ಸರಳ ಜೀವಿ. ಅವರಲ್ಲಿ ಗರ್ವ ದರ್ಪ ಎನ್ನುವುದೇ ಇಲ್ಲ. ಅಸಂಬದ್ಧ ಬದುಕಿಗೆ ಎಂದೂ ಮರುಳಾದವರಲ್ಲ. ಹೋರಾಟ ಮನೋಭಾವನೆಯುಳ್ಳವರು. ಬಾಲ್ಯದಲ್ಲಿ ಸಾರಾಯಿ ಅಂಗಡಿಗೆ ಕಲ್ಲು ತೂರಿ, ಘೋಷಣೆ ಕೂಗಿ ಪೋಲೀಸ್‌ರ ಅತಿಥಿಗಳಾಗಿದ್ದರು. ಸಹಕಾರ ಮನೋಭಾವನೆಯುಳ್ಳ ಪ್ರೊ. ಕೆ.ಆರ್. ಸುಶೀಲೇಗೌಡ ಅವರು ಪರೋಪಕಾರಿ ಜೀವಿಗಳು. ವಿದ್ಯಾರ್ಥಿಗಳ ಒಡನಾಟವಿರಿಸಿಕೊಂಡು ಅವರಿಗೆ ಉತ್ತಮ ಮಾರ್ಗದರ್ಶನ ನೀಡುತ್ತಿದ್ದರು

ಅವರ ಸಮಸ್ಯೆಗಳಿಗೆ ತಕ್ಕ ಪರಿಹಾರವನ್ನು ಸೂಚಿಸುತ್ತಿದ್ದರು. ಬಹುಭಾಷಾ ಪಂಡಿತರಾಗಿದ್ದು, ಇವರದು ಬಹುಮುಖದ ವ್ಯಕ್ತಿತ್ವ

ಇವರು ಒಬ್ಬ ಆದರ್ಶ ಶಿಕ್ಷಕರು. ಶಿಕ್ಷಕ ವೃತ್ತಿಗೆ ಗೌರವ ತಂದು ಕೊಟ್ಟವರು ಆಸ್ತೆಯಿಂದ ಮನಸಾರೆ ದುಡಿದು. ಬೇಲೂರು, ಹಾಸನ ಕಾಲೇಜುಗಳಲ್ಲಿ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿದರು. ಇವರು ಯಾವತ್ತು ಸಂಘ ಜೀವಿಗಳು, ಜಾನಪದ ಸಾಹಿತ್ಯ ಸೇವೆಗೆ ಶ್ರಮಿಸಿದವರು.

ಯಾವತ್ತು ನಗೆಯ ಸಿರಿಯನ್ನೇ ತುಂಬಿಕೊಂಡು ಸರಳ ಬದುಕಿನ ಸ್ನೇಹ ಜೀವಿಯಾದ ಸುಶೀಲೇಗೌಡರು ಸಾಂಘಿಕ ಜೀವನದಲ್ಲಿ ಹಿಂದೇ ಬಿದ್ದವರಲ್ಲ. ವೃತ್ತಿಯಿಂದ ಶಿಕ್ಷಕರಾದರೂ, ವಿವಿಧ ಸಾಮಾಜಿಕ ಶೈಕ್ಷಣಿಕ ಸಾಂಸ್ಕೃತಿಕ ಸಂಘ ಸಂಸ್ಥೆಗಳೊಂದಿಗೆ ನಿಕಟ ಸಂಬಂಧವನ್ನು ಪಡೆದಿದ್ದಾರೆ. ಪ್ರಯತ್ನ ಶೀಲ ವ್ಯಕ್ತಿಗಳಾಗಿದ್ದಾರೆ. ಭೋಧನೆಯನ್ನು ಮಾಡುವ ಸಂದರ್ಭದಲ್ಲಿಯೂ ಶಿಸ್ತು ಸಂಯಮವನ್ನು ಕಾಪಾಡಿಕೊಂಡು ಹೋಗುತ್ತಿದ್ದರು. ಬೋಧನೆಗೂ ಮುಂಚೆ ವಿದ್ಯಾರ್ಥಿಗಳಲ್ಲಿ ಶ್ರದ್ಧೆ ಉತ್ಸಾಹವನ್ನು ಮೂಡಿಸಿ ನಂತರ ವಿಷಯವನ್ನು ತಿಳಿಯುವಂತೆ ಬೋಧಿಸುತ್ತಿದ್ದರು. ವಿದ್ಯಾರ್ಥಿಗಳನ್ನು ಬೋಧನೆಯ ಮಾರ್ಗದಿಂದ ತಮ್ಮತ್ತ ವರಿಸಿಕೊಳ್ಳಲು ಸಫಲರಾದರು. ೧೯೯೫ರಲ್ಲಿ ಪ್ರಾಂಶುಪಾಲರ ವೃತ್ತಿಯಿಂದ ನಿವೃತ್ತಿ ಹೊಂದಿದರೂ, ಅವರು ಇನ್ನು ಕಲಿಸಬೇಕು. ವಿದ್ಯಾರ್ಥಿಗಳೊಡನೆ ಕಾಲಹರಣ ಮಾಡಬೇಕೆಂಬ ಅಭಿಲಾಷೆ ಇದ್ದರೂ ಇಷ್ಟು ಬೇಗ ನಿವೃತ್ತಿ ಹೊಂದಬೇಕಲ್ಲ ಎಂದು ಒಂದು ಮನಸ್ಸು ನೊಂದವರು. ಇನ್ನೊಂದು ಮನಸ್ಸು ಸೇವೆಯಿಂದ ನಿವೃತ್ತಿಯಾಗಿದ್ದರೂ ಅವರ ಸಹೃದಯ ಜನಪದ ಸಾಹಿತ್ಯ ಸಾಧನೆಗೆ ಸಮಾಜ ಸೇವೆಗೆ ನಿವೃತ್ತಿಯೆಂಬುದು ಇಲ್ಲವಲ್ಲ ಎಂದು ಸಮಾಧಾನ ಪಡುತ್ತಾರೆ. ಹೀಗಾಗಿ ಈಗಲೂ ಕ್ರಿಯಾಶೀಲರಾಗಿದ್ದಾರೆ.

ಕಡು ಭಕ್ತಿನಾಗಲಿ ಜಡಧಾರಿಯಾಗಲಿ
ನಡೆವ ವೃತ್ತಿಯಲಿ ನಡೆಯದೊಡೆ ಆ ಭಕ್ತಿ
ಹೊಡೆವ ಶಂಕದ ಸರ್ವಜ್ಞ

ಸಮಾಜ ಸಂಜೀವಿನಿಯಾದ ಸರ್ವಜ್ಞನ ವಚನದಂತೆ ಸುಶೀಲೇಗೌಡರು ತಮ್ಮ ಶಿಕ್ಷಕ ವೃತ್ತಿಯನ್ನು ಬಹುನಿಷ್ಠ ಮತ್ತು ಅತೀ ಆಸಕ್ತಿಯಿಂದ ನಿರ್ವಹಿಸಿದ ಒಬ್ಬ ಆದರ್ಶ ಶಿಕ್ಷಕರು. ಬೋಧನೆಯನ್ನು ಪ್ರಮಾಣಿಕ ರಂಗವನ್ನಗಿಸಿಕೊಂಡು ಅದರಲ್ಲಿಯೇ ಸಂತೃಪ್ತಿಯನ್ನು ಕಂಡವರು.

ಸುಶೀಲೇಗೌಡ ಅವರ ಬೋಧನೆ ಬಹು ವಿಶಿಷ್ಟವಾದುದು. ಅವರ ಬೋಧನೆ

ಯಾಂತ್ರಿಕವಾದುದಲ್ಲ. ಯಾವತ್ತು ಸಶಕ್ತವಾಗಿರುತ್ತಿತ್ತು. ಅವರು ಹೇಳುವ ಗತ್ತುಗಮ್ಮತ್ತುಗಳನ್ನು ಅದರ ಬೋಧನೆಯಿಂದಲೇ ಅಳೆಯಬೇಕು. ಅವರ ವಾಕ್‌ಚಾತುರ್ಯಕ್ಕೆ ವಿದ್ಯಾರ್ಥಿಗಳು ಮಣಿಯಲೇಬೇಕಾಗುತ್ತಿತ್ತು.

ವಿದ್ಯೆಯೆಂದರೆ ಮೆದುಳಿನಲ್ಲಿ ಕೇವಲ ಮಾಹಿತಿ ತುರುಕುವುದಲ್ಲ, ಅಲ್ಲಿ ಜೀರ್ಣವಾಗದೇ ಆಯುಷ್ಯ ಪೂರ್ತಿ ಗೊಂದಲವೆಬ್ಬಿಸುವ ಒಣಜ್ಞಾನವಲ್ಲ. ವಿದ್ಯೆಯಿಂದಾಗಿ ಉಚ್ಚ ವಿಚಾರಗಳು ರಕ್ತಗತವಾಗಿರಬೇಕು. ಜೀವನದಲ್ಲಿ ಚೈತನ್ಯ ಮೂಡುವಂತಾಗಬೇಕು ಎಂಬ ವಿವೇಕಾನಂದರ ಹೇಳಿಕೆಯನ್ನು ಅಕ್ಷರಶಃ ಪಾಲಿಸಿದ ಒಬ್ಬ ಆದರ್ಶ ಶಿಕ್ಷಕರೆಂದರೆ ಅತಿಶಯೋಕ್ತಿಯಾಗಲಾರದು. ಬೋಧಕ ವೃತ್ತಿ ಜನಸೇವೆ ಮಾಡುವಂತದ್ದು ಎಂಬಂತೆ ಸುಶೀಲೇಗೌಡ ಅವರಿಗೆ ಅಧಿಕಾರದ ದಾಹ ಇರದೆ ಸತತ ಅಭ್ಯಾಸಿಗಳಾಗಿ ಮಂಗಳವನ್ನೇ ಹಾಡುವ ವ್ಯಕ್ತಿಗಳಾಗಿ ಉತ್ತಮ ಪ್ರಜೆಯಾಗಿ ಜ್ಞಾನದ ಪರಮಾನ್ನವನ್ನು ಮಾನವೀಯ ಮೌಲ್ಯಗಳೊಂದಿಗೆ ಉಣಬಡಿಸುವುದರ ಮೂಲಕ ಸಮಾಜ ಸೇವಕರಾಗಿ ಕಾಯಕಯೋಗಿ ಸಮಾಜಕ್ಕೆ ಪರೋಪಕಾರಿ ಜೀವಿಗಳಾಗಿ ಬೋಧಕ ವೃತ್ತಿಗೈದ ಧೀಮಂತರಾಗಿದ್ದಾರೆ. ಹೀಗೆ ಆಕರ್ಷಕ ಬೋಧನಾ ಶೈಲಿಯು ನಿಜಕ್ಕೂ ಪ್ರಶಂಸನೀಯ ಇಂಥ ಬೋಧಕರು ಸಿಕ್ಕಿರುವುದು ಬೋಧಕ ವೃತ್ತಿಗೆ ಒಂದು ಸವಾಲು, ವಿರಳ ಆದರ್ಶ ಶಿಕ್ಷಕರಲ್ಲಿ ಪ್ರೊ. ಕೆ.ಆರ್. ಸುಶೀಲೇಗೌಡ ಅವರು ಒಬ್ಬರು.

ಜನಪರ ಕಾಳಜಿ

ಪ್ರೊ. ಕೆ.ಆರ್. ಸುಶೀಲೇಗೌಡ ಅವರು ಜನಪರ ಬದುಕನ್ನು ಕಂಡುಂಡವರು. ಅಲ್ಲದೆ ನೋವು-ನಲಿವು ಅಭಿಪ್ಸೆ ಒಲವುಗಳು ಅವರ ಸಾಹಿತ್ಯದಲ್ಲಿ ಹೊರಹೊಮ್ಮಿದೆ. ಸಾಹಿತಿಯ ಬದುಕು ತೆರೆದಿಟ್ಟ ಪುಸ್ತಕ. ಅದರಲ್ಲಿ ಸಹಜವಾಗಿ ಅವರ ಅನುಭವಗಳು ಅಳವಡಿಸಿರುತ್ತದೆ. ಇವರಿಗೆ ಬಡ ಜನರ ಬಗ್ಗೆ ವಿಶೇಷ ಕಾಳಜಿ ಆಸಕ್ತಿ.ಅವರ ಅಂತಃಕರಣಕ್ಕೆ ಸ್ಪಂದಿಸುವ, ಮಿಡಿಯುವ ನೋವುಗಳನ್ನು ಕಣ್ಣಾರೆ ಕಂಡು ಅನುಭವಿಸಿ ಅವರಿಗಾಗಿ ವ್ಯಥೆಪಟ್ಟು ಸಮಸ್ಯೆಗಳಿಗೆ ಪರಿಹಾರ ದೊರಕಿಸಿಕೊಡುವಲ್ಲಿ ಶ್ರಮಿಸಿದ್ದಾರೆ. ಸ್ಪಂದನಾ ಜೀವಿಗಳಾದ ಇವರು ಬಡವರ ಬವಣೆಯ ಕುರಿತಾಗಿ ಮನಮಿಡಿಯುವರು. ದಲಿತರ ಮೇಲೆ ಅನುಕಂಪ ಉಳ್ಳವರು.

ಕಾಯಕವೇ ಕೈಲಾಸವೆಂಬ ವಚನಕಾರರ ಸೂಕ್ತಿಯನ್ನು ಅನುಸರಿಸಿ ನಡೆದ ಕಾಯಕ ಜೀವಿಗಳು ಸದಾ ಪಾದರಸದಂತೆ ಕಾರ್ಯ ತತ್ಪರರಾಗುವ ಕರ್ತವ್ಯ ನಿಷ್ಠೆ ಪ್ರಾಶಂಸನೀಯ, ಸದಾ ಯಾವುದಾದರೊಂದು ಕೆಲಸದಲ್ಲಿ ತೊಡಗುವ ಯಾವುದಕ್ಕೂ ಬೇಸರಿಸದೆ ಕೆಲಸ ಮಾಡುವಂತ ಚೇತನ ಜೀವಿಗಳು.

ವ್ಯಕ್ತಿತ್ವ

ಇವರ ವ್ಯಕ್ತಿತ್ಯ ಬಹುಮುಖವಾದುದು. ಬದುಕು ಪ್ರಾಮಾಣಿಕವಾದುದು. ಇವರ ಬದುಕು ತೆರೆದಿಟ್ಟ ಪುಸ್ತಕದಂತೆ. ಈ ದಿಶೆಯಲ್ಲಿ ಪ್ರೊ. ಕೆ.ಆರ್. ಸುಶೀಲೇಗೌಡರ ವ್ಯಕ್ತಿತ್ವ ಅರ್ಥೈಸಿಕೊಳ್ಳುವುದು ಅವಶ್ಯವೆನಿಸುತ್ತದೆ. ಸುಸಂಸ್ಕೃತ ಮನೆತನದಲ್ಲಿ ಜನಿಸಿದ ಇವರಲ್ಲಿ ಬೆಳವಣಿಗೆಗೆ ಮನೆಯ ಆರೋಗ್ಯಕರ ಪರಿಸರವೂ ಸಹ ಅಷ್ಟೇ ವ್ಯಕ್ತಿತ್ವದ ಬೆಳವಣಿಗೆಯಲ್ಲಿ ಮಹತ್ವ ಸಂಗತಿಯಾಗಿದೆ.

ಸರಳ ವಿನಯಪೂರ್ವಕ ಮನೋಭಾವದ ಇವರು ತಮ್ಮ ವಿಶಾಲ ಹೃದಯದಿಂದ ಸರ್ವರ ಮನಸೂರೆಗೈಯುತ್ತಾರೆ. ಅವರ ನಿಷ್ಪಕ್ಷಪಾತ ಪ್ರಾಮಾಣಿಕ ಸ್ವಭಾವದ ಸುಶೀಲೇಗೌಡರು ಅದ್ಭುತ ಜ್ಞಾನದ ಗಣಿ. ತುಂಬಾ ಉದಾರ ಗುಣದವರು. ನಡೆನುಡಿಯಲ್ಲಿ ನೇರವಾದ ಸಾದಾ ಜೀವನ, ನಿರಾಡಂಬರ ಮನೋಭಾವದ ಸುಶೀಲೇಗೌಡ ಅವರ ವ್ಯಕ್ತಿತ್ಯ ಅನುಕರಣೀಯವಾದದು. ಆದರಣೀಯವಾದದು. ನಿಸ್ವಾರ್ಥ ಮನೋಭಾವದ ಸುಶೀಲೇಗೌಡ ಅವರು ಮಹಾ ಮಾನವತಾವಾದಿಯಾಗಿ ತೋರುತ್ತಾರೆ.

ಸರಳ ಮಾತಿನ ಬಿಚ್ಚು ಮನಸ್ಸಿನ ನಗೆಗಾರರಾಗಿರುವ ಇವರು ತಮ್ಮ ವಾಕ್ಚಾತುರ್ಯದಿಂದ ಜನರನ್ನು ತಮ್ಮತ್ತ ಯಾವಾಗಲೋ ಎಳೆದುಕೊಂಡಿರುತ್ತಾರೆ. ಅನಿಸಿದ್ದನ್ನು ನಿರ್ಭಯದಿಂದ ಹೇಳುವಂತವರು. ಅವರ ಸರಳ ನಡೆ ನುಡಿ ಎಂಥವರನ್ನು ಬಹುಬೇಗ ತಮ್ಮವರನ್ನಾಗಿ ಮಾಡಿಕೊಳ್ಳುತ್ತದೆ. ಮನಸ್ಸನ್ನು ಮನದಲ್ಲಿರುವ ದುಗುಡವನ್ನು ದೂರಮಾಡಿ ಸಲಹೆ ನೀಡುವ ಉತ್ಸಾಹ ತುಂಬುವ ಮೋಡಿಕಾರರು. ಅವರು ಯಾವುದನ್ನು ಸರಳವಾಗಿ ಬೇಡವಾದದನ್ನು ನಿರ್ಭಯದಿಂದ ಹೇಳುವಂತವರು. ಅವರ ಸರಳ ನಡೆ ನುಡಿ ಎಂಥವರನ್ನು ಬಹುಬೇಗ ತಮ್ಮವರನ್ನಾಗಿ ಮಾಡಿಕೊಳ್ಳುತ್ತದೆ.

ಪ್ರೊ. ಕೆ.ಆರ್. ಸುಶೀಲೇಗೌಡ ಅವರು ಸ್ನೇಹ ಜೀವಿಗಳು. ಅಲ್ಲದೆ ಎಲ್ಲರನ್ನು ತನ್ನವರೆಂದು ತಿಳಿದುಕೊಳ್ಳುವ ಉದಾರ ಹೃದಯಿಗಳು. ಪ್ರೊ. ಕೆ.ಆರ್. ಸುಶೀಲೇಗೌಡ ಅವರಿಗೆ ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ನೂರಾರು ಕಡೆಯಿಂದ ಕರೆಗಳು ಬಂದಿವೆ, ಬರುತ್ತಿವೆ. ಇವರಿಗೆ ಗರ್ವ ಎಂಬುದು ಇಲ್ಲ. ತಮಗೆಷ್ಟೇ ಕೆಲಸವಿರಲಿ ಜನಾನುರಾಗಿಗಳಾಗಿ ಅತ್ತಧಾವಿಸುವ ಸರಳ ಜೀವಿಗಳು. ಅವರು ಮಾತನಾಡುತ್ತಿದ್ದರೆ ಜನರಿಗೆ ಸಮಯ ಹೋದುದರ ಪರಿವೆಯೇ ಇರುವುದಿಲ್ಲ. ಅಂಥ ಮೋಡಿ ಅವರ ಮಾತಿನಲ್ಲಿದೆ. ಸಂದರ್ಭಕ್ಕೆ ತಕ್ಕಂತೆ ಜನರ ಅಭಿರುಚಿಯಂತೆ ತಮ್ಮ ಪ್ರತಿಭೆಯನ್ನು ಮೆರೆಸುವಂಥವರು. ಅವರು ಒಬ್ಬ ಒಳ್ಳೆಯ ವಾಗ್ಮಿಗಳಂತೆ ಜನರ ಮನದಲ್ಲಿ ಜನರ ಮನಸ್ಸನ್ನು ಸೆಳೆದ ಒಬ್ಬ ಪ್ರತಿಭಾ ಸಂಪನ್ನರು.

ಗೌರವ ಪ್ರಶಸ್ತಿಗಳು: ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ:

ಪ್ರೊ. ಕೆ.ಆರ್. ಸುಶೀಲೇಗೌಡ ಅವರ ಶಿಸ್ತು, ಶ್ರಮ, ಸಮಾಜ ಸೇವೆ, ಈ ಎಲ್ಲಾ ಅಂಶಗಳಿಂದ ಪ್ರಶಸ್ತಿಗಳು ಅವರತ್ತ ಹುಡುಕಿಕೊಂಡು ಬಂದವು. ಇವರು ಸರಳ ಜೀವಿಯಾಗಿ ಬದುಕುತ್ತಿರುವ ಸಹನಾಮೂರ್ತಿ. ಈ ಸಹನೆ, ಸರಳ ಬದುಕು ತಾಳ್ಮೆಗಳೇ ಇವರ ಆಸ್ತಿ, ಅಂದರೆ ತಪ್ಪಾಗಲಾರದು. ಇವುಗಲ್ಲದೇ ಗ್ರಾಮದ ಯುವಕ ಯುವತಿಯರನ್ನು ಗ್ರಾಮ ಮಟ್ಟದಲ್ಲಿ ಸಂಘಟಿಸಿ ಜನಪರ ಜಾನಪದ ಕಾರ್ಯ ಕ್ರಮಗಳನ್ನು ಏರ್ಪಡಿಸಿ ಯಶಸ್ವಿಯಾಗಿದ್ದಾರೆ. ಸಮನ್ವಯಾಧಿಕಾರಿಯಾಗಿ, ಶಿಕ್ಷಕರಾಗಿ ಪ್ರಾಂಶುಪಾಲರಾಗಿ, ಜಿಮ್ನಾಷಿಂ ತರಬೇತುದಾರರಾಗಿ ಕೆಲಸವನ್ನು ನಿರ್ವಹಿಸಿದ್ದಾರೆ. ಆಡುಮುಟ್ಟದ ಸೊಪ್ಪಿಲ್ಲ ಅಂತೆ ಪ್ರತಿಯೊಂದು ಕೆಲಸಕಾರ್ಯವನ್ನು ನಿರ್ವಹಿಸುತ್ತಾ ಬಂದಿದ್ದಾರೆ. ಜನಪದ ತಜ್ಞರಾಗಿ,ಸಮಾಜ ಸೇವಕರಾಗಿ ನಿರಂತರ ಸೇವೆ ಮಾಡುತ್ತಿದ್ದಾರೆ. ಇಂತಹ ವ್ಯಕ್ತಿಯನ್ನು ಹಲವಾರು ಪ್ರಶಸ್ತಿಗಳು ಅಲಂಕರಿಸಿವೆ ಮತ್ತು ಅರಸಿ ಬರುತ್ತಿವೆ. ಕೆಲವು ಪುರಸ್ಕಾರಗಳು ಇವರಿಗಾಗಿಯೇ ಕಾದುಕುಳಿತಿವೆ.

೧೯೬೯ರಲ್ಲಿ ತುಮಕೂರಿನಲ್ಲಿ ಜರುಗಿದ ರಾಜ್ಯಮಟ್ಟದ ಹಿಂದಿ ಕಾರ್ಯಕರ್ತರ ಸಮ್ಮೇಳನದಲ್ಲಿ ಸನ್ಮಾನಿತರಾಗಿದ್ದಾರೆ. ೧೯೭೮ರಲ್ಲಿ ಧಾರವಾಡದಲ್ಲಿ ಜರುಗಿದ ಅಖಿಲ ಭಾರತ ಸೇವಾದಳ ಯುವಜನೋತ್ಸವದಲ್ಲಿ ಉತ್ತಮ ಕಾರ್ಯಕರ್ತರೆಂದು ಸನ್ಮಾನ (ಶಾಲು ಮತ್ತು ಪದಕದೊಂದಿಗೆ) ೧೯೮೪ರಲ್ಲಿ ಸಂಸ್ಕೃತ ಪ್ರಚಾರ ಹಾಗೂ ಪಾಂಡಿತ್ಯಕ್ಕಾಗಿ ರಾಜ್ಯ ಸರ್ಕಾರದಿಂದ ಸನ್ಮಾನ. ೨೦೦೪ರಲ್ಲಿ ಸಮಾಜ ಸೇವೆ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ್ದಕ್ಕಾಗಿ ಸ್ಮರಿಸಿ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಹಾಗೂ ಸನ್ಮಾನ ಕರ್ನಾಟಕ ಸರ್ಕಾರ, ಜಿಲ್ಲಾಡಳಿತ ಹಾಸನ ೨೦೦೪ರಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಹಾಸನ ಜಿಲ್ಲೆ ೮ನೇ ಸಾಹಿತ್ಯ ಸಮ್ಮೇಳನ ೨೦೦೪. ಅರಕಲಗೊಡು, ಹಾಸನಜಿಲ್ಲೆ, ಸನ್ಮಾನ ಫಲಕ, ೨೦೦೪ರಲ್ಲಿ ಭಾರತೀಯ ಪರಿಷತ್ತು ಪ್ರಯಾಗ್ ಉತ್ತರ ಪ್ರದೇಶ್, ಹಿಂದಿ ಮಾರ್ತಾಂಡ ಮತ್ತು ಸಾರಸ್ವತಿ ಸುಶುಮ ಪಂಡಿತ ಎಂಬ ಬಿರುದು ಹಾಗೂ ಸನ್ಮಾನ, ನಾಗಲ್ಯಾಂಡಿನ ಮೆಡ್ಜಿ ಫೇಮಾದಲ್ಲಿ ನಡೆದ ರಾಷ್ಟ್ರೀಯ ಭಾವೈಕ್ಯತಾ ಶಿಬಿರ ಮತ್ತು ರಾಜಸ್ಥಾನದ ಬಾಪ್‌ಮೀರದಲ್ಲಿ ಭಾಗವಹಿಸಿ ಬಹುಮಾನ ಪಡೆದಿದ್ದಾರೆ.

ತುಮಕೂರು, ಚಿತ್ರದುರ್ಗ, ಹಾಸನ ಮತ್ತು ಮಂಗಳೂರು ಜಿಲ್ಲೆಗಳಲ್ಲಿ ಗ್ರಾಮೀಣಾಭಿವೃದ್ಧಿಗಾಗಿ, ನಡೆದ ಶ್ರಮದಾನ ಹಾಗೂ ಸೇವಾ ಶಿಬಿರಗಳಲ್ಲಿ ಅತ್ಯುತ್ತಮವಾದ ಸೇವೆಯನ್ನು ಸಲ್ಲಿಸಿರುವ ಬಗ್ಗೆ ಪ್ರಮಾಣ ಪತ್ರ, ೨೦೦೬ರಲ್ಲಿ ಸುವರ್ಣ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತ್ರಿಯನ್ನು ಪಡೆದಿದ್ದಾರೆ. ೧೯೮೪ರಲ್ಲಿ ಒರಿಸ್ಸಾ ರಾಜ್ಯದಿಂದ ಭಾರತದಲ್ಲಿ ನೆಹರು ಯುವಕ ಕೇಂದ್ರಗಳಲ್ಲಿ ಉತ್ತಿಮ ಸಮನ್ವಯಾಧಿಕಾರಿಯೆಂದು ಸನ್ಮಾನ.

ಅಧ್ಯಾಯ: ಮೂರು
ಜಾನಪದ ಮತ್ತು ಪ್ರೊ. ಕೆ.ಆರ್. ಸುಶೀಲೇಗೌಡ

ಜನಪದ ಸಾಹಿತ್ಯ ಮುಖ್ಯವಾಗಿ ನಾಲ್ಕು ಚಿರಂತನ ಬೇರುಗಳ ಮೇಲೆ ನಿಂತಿದೆ. ಗೀತೆ, ಕಥೆ, ಗಾದೆ ಮತ್ತು ಒಗಟು – ಇವೇ ಆ ಬೇರುಗಳು ಅವುಗಳೆಂದರೆ ಒಂದು ಭಾವ ಪ್ರಧಾನ, ಇನ್ನೊಂದು ಕಲ್ಪನಾ ಪ್ರಧಾನ, ಮತ್ತೊಂದು ತತ್ವ ಪ್ರಧಾನ ಮಗದೊಂದು ಚಿಂತನ ಮತ್ತು ಚಾತುರ್ಯ ಪ್ರಧಾನ. ಇವುಗಳಲ್ಲಿ ಅತ್ಯಂತ ವ್ಯಾಪಕವಾದ ಸಂಗ್ರಹಣಾ ಕಾರ್ಯ ನಡೆದಿರುವುದು ಗೀತ ಪ್ರಕಾರದಲ್ಲಿ ಮಾತ್ರ. ನಮ್ಮ ಮೂಲ ಸಂಸ್ಕೃತಿಯ ಮೇಲೆ ಬೆಳಕು ಚೆಲ್ಲುವ ಜಾನಪದ ನಮ್ಮ ಅತ್ಯಮೂಲ್ಯ ಪಿತ್ರಾರ್ಜಿತ ಆಸ್ತಿ. ಬಹಳ ಕಾಲದವರೆಗೆ ಇದು ಅನಾಗರಿಕರ ಅಜ್ಞರ ಅಗಣ್ಯ ಸೃಷ್ಟಿ ಎಂಬ ಭಾವನೆ ಪಂಡಿತ ವರ್ಗದಲ್ಲಿ ರೂಢಮೂಲವಾಗಿತ್ತು. ಪಾಶ್ಚತ್ಯ ವಿದ್ವಾಂಸರ ಸಂಶೋಧನೆ ಮತ್ತು ಪರಿಶ್ರಮದ ಫಲವಾಗಿ ಈಗ ಜಾನಪದಕ್ಕೆ ಮಹತ್ವ ಬಂದಿದೆ. ಮಾನವರ ಸಾಂಸ್ಕೃತಿಕ ಚರಿತ್ರೆಯ ಸಮೃದ್ಧ ಆಕರ ಇದು, ಎಂಬುದು ಈಗ ಅರಿವಾಗತೊಡಗಿದೆ.

ಜಾನಪದದ ಶ್ರೀಮಂತಿಕೆ ಮತ್ತು ಮಹತ್ವಗಳನ್ನು ಅರಿತುಕೊಳ್ಳುವುದರಲ್ಲಿ ಭಾರತ ವಿದ್ವನ್ಮಣಿಗಳು ತಡಮಾಡಿದರೂ, ಅರಿತುಕೊಂಡ ಅನಂತರ ಅತಿವೇಗದಲ್ಲಿ ಅದರ ಬಗ್ಗೆ ಅಧ್ಯಯನ ನಡೆಸಲಾರಂಭಿಸಿದ್ದಾರೆ. ಭಾರತದ ಉದ್ದಗಲದಲ್ಲೂ ಈಗ ಕ್ಷೇತ್ರಕಾರ್ಯ ಎಡೆಬಿಡದೆ ಸಾಗುತ್ತಿದೆ. ಈ ವಿಷಯದಲ್ಲಿ ಕರ್ನಾಟಕ ಹೆಚ್ಚು ಸುದೈವಿ. ನಮ್ಮ ಮೂರು ವಿಶ್ವ ವಿದ್ಯಾಲಯ (ಮೈಸೂರು ವಿ.ವಿ, ಕುವೆಂಪು ವಿ.ವಿ, ಕನ್ನಡ ವಿ.ವಿ)ಗಳಲ್ಲಿ ಪಂಡಿತ ಮಂಡಲವನ್ನು ದಿಗ್ಭ್ರಮೆಗೊಳಿಸುವಂತ ರೀತಿಯಲ್ಲಿ ಇದಕ್ಕೆ ಮನ್ನಣೆಯ ಮಣೆ ದೊರೆತಿದೆ. ನೂರಾರು ಜನ ಹಿರಿಯರು, ಕಿರಿಯರು, ಈ ಕಾರ್ಯಕ್ಕೆ ತಮ್ಮನ್ನು ಸಮರ್ಪಿಸಿಕೊಂಡು ಟೊಂಕಕಟ್ಟಿ ದುಡಿಯುತ್ತಿದ್ದಾರೆ. ಹಿರಿಯರಾದ ಮಾಸ್ತಿ, ಗೋಕಾಕ್ ಎಲ್. ಗುಂಡಪ್ಪ, ಮತಿಘಟ್ಟಕೃಷ್ಣಮೂರ್ತಿ, ಮುಂತಾದವರು ನಡೆದ ದಾರಿಯಲ್ಲಿ ಡಾ. ಜಿ.ಶಂ. ಪರಮಶಿವಯ್ಯ, ಕ.ರಾ.ಕೃ. ರಾಣಾ ಸುಧಾಕರ, ಎಲ್.ಆರ್. ಹೆಗಡೆ, ಎಂ.ಎಸ್. ಸುಂಕಾಪುರ, ಎಚ್.ಎಲ್. ನಾಗೇಗೌಡ, ಶಿ.ಕೆ. ರಾಜಶೇಖರ ಮೊದಲಾದವರು ಕಣ್ಣು ಕೋರೈಸುವ ಸಾಧನೆ ಮಾಡಿದ್ದಾರೆ. ಪ್ರೊ. ದೇಜಗೌ ಮತ್ತು ಡಾ. ಹಾ.ಮಾ. ನಾಯಕರು ಈ ಜಾನಪದ ಅಧ್ಯಯನಕ್ಕೆ ವೈಜ್ಞಾನಿಕವಾದ ತಳಹದಿಯನ್ನು ಒದಗಿಸಿಕೊಟ್ಟಿದ್ದಾರೆ. ಇದರಿಂದಾಗಿ ದಿನದಿನಕ್ಕೆ ಈ ಜಾನಪದದ ಸಂಗ್ರಾಹಕ ಸಂಶೋಧಕರ ಪಡೆ ಹೆಚ್ಚುತ್ತಿದೆ.

ಕನ್ನಡ ನಾಡಿನ ಅಣಿಮುತ್ತಾದ ಜನಪದ ಸಾಹಿತ್ಯವು ಜನಜೀವನದಲ್ಲಿ ಹಾಸುಹೊಕ್ಕಾಗಿ ಸೇರಿ ಅವರ ಜೀವನದ ಸಂಗಾತಿಯಾಗಿ ಎಲ್ಲಾ ಕ್ಷೇತ್ರದಲ್ಲಿಯೂ ಹರಡಿರುವುದನ್ನು ಕಾಣಬಹುದು. ತಮ್ಮ ಹೃದಯದ ಭಕ್ತಿಯನ್ನು ತೋಡಿಕೊಂಡ ಜನಪದ ಭಕ್ತಿ ಸಾಹಿತ್ಯ ವಿಶಿಷ್ಟವಾಗಿ ಬೆಳೆದಿದೆ. ತಮ್ಮ ಕುಲದೇವತೆಯೂ, ಸ್ಥಳದೇವತೆಯು ಆದ ರಂಗನಾಥಸ್ವಾಮಿ, ದ್ಯಾವಮ್ಮ, ಭೈರವ ಹಾಗೂ

ಹನುಮಂತರಾಯನನ್ನು ಕುರಿತು ನಾನಾ ಬಗೆಯಲ್ಲಿ ಹಾಡಿದ ಗೀತೆಗಳು ಅಸಂಖ್ಯಾತವಾಗಿದ್ದರೂ ವಿಶಿಷ್ಟ ಗುಣಗಳಿಂದ ಕೂಡಿದ ಕೆಲವು ಜನಪದ ಗೀತೆಗಳನ್ನು ಈ ಸಂಗ್ರಹದಲ್ಲಿ ಕೊಡಲಾಗಿದೆ. ದೈವಭಕ್ತಿ, ಪತಿಪ್ರೇಮ, ತೌರಿನ ಅಭಿಮಾನ, ಅಣ್ಣ ತಂಗಿಯರ ವಾತ್ಸಲ್ಯ, ಪ್ರಕೃತಿಯ ಸೊಬಗು, ಬೀಜ ಬಿತ್ತುವುದು, ಗುಡ್ಲು ಹಾಕುವುದು, ಮುಂತಾಗಿ ವಿಷಯ ವೈವಿಧ್ಯವಿದೆ.

ಜನಪದ ಸಾಹಿತ್ಯದತ್ತ ಇತ್ತೀಚೆಗೆ ಹೆಚ್ಚು ಹೆಚ್ಚು ನಮನ ಹರಿಯುತ್ತಿರುವುದು ನಮ್ಮ ನಾಡಿನ ನಮ್ಮ ಸಾಧನೆ ಪ್ರಗತಿಯ ಚಿಹ್ನೆ.

ಕಬ್ಬತ್ತಿ ಹಾಸನ ತಾಲ್ಲೂಕಿನಲ್ಲಿ ಅರಕಲಗೂಡು ಮಾರ್ಗವಾಗಿ ಹೋಗುವಾಗ ಕಟ್ಟಾಯದಿಂದ ಪುರ್ವಾಭಿಮುಖವಾಗಿ ಐದುಮೈಲು ಹೋದರೆ ಬಲಬದಿಯಲ್ಲಿ ಕೈಲಾಸ ಪರ್ವತದೋಪಾದಿಯಲ್ಲಿ ನಿಂತ ಗಿರಿಯನ್ನು ನೋಡಬಹುದು. ಇದೇ ಕಬ್ಬತ್ತಿಯ ಬೆಟ್ಟ ಈ ಬೆಟ್ಟದ ಸಮೀಪಕ್ಕೆ ಬರುತ್ತಿದ್ದಂತೆಯೇ ಅದರ ಧೀರ ನಿಲುವಿಗೆ ವಿಸ್ತಾರಕ್ಕೆ ಔನ್ನತ್ಯಕ್ಕೆ ಮನಸ್ಸು ಮೂಕವಾಗುತ್ತದೆ. ಈ ಬೆಟ್ಟವನ್ನು ನೋಡಿದರೆ ಕೂರ್ಮಾವತಾರದ ನೆನಪು ಮನಸ್ಸಿಗೆ ಬರುತ್ತದೆ. ಸ್ಥಳದ ಪಾವಿತ್ರ್ಯವನ್ನು ಸಾರುತ್ತದೆ. ಈ ಗಿರಿಯ ತಪ್ಪಲನ್ನು ಹತ್ತಿ ಸುತ್ತಲೂ ಕಣ್ಣಾಡಿಸಿದರೆ ಇಲ್ಲಿಯ ನಿಸರ್ಗ ವೈಭವವು, ರಮಣೀಯವೂ, ಆಹ್ಲಾದಕಾರವಾಗಿ ಕಾಣುತ್ತದೆ. ಪ್ರಕೃತಿಯ ರಮಣಿತೆಯನ್ನು ನೋಡ ಬಯಸುವ ಪ್ರತಿಯೊಬ್ಬ ಪ್ರಕೃತಿ ಪ್ರೇಮಿಯೂ ಇಲ್ಲಿ ಆನಂದವನ್ನು ಪಡೆಯಬಹುದಾಗಿದೆ.

ಕಬ್ಬತ್ತಿರಂಗ: ಜಾನಪದ ಗೀತೆಗಳ ಸಂಗ್ರಹ

ಜನಪದ ಸಾಹಿತ್ಯವು ಯಾವುದೇ ಸೀಮೆಗಾಗಲಿ, ಸರಹದ್ದಿಗಾಗಲಿ, ಸೀಮಿತವಾಗುವುದಿಲ್ಲ. ಜೀವನದ ಎಲ್ಲ ಪ್ರಕಾರಗಳನ್ನು ಪ್ರತಿಬಿಂಬಿಸುವ ಈ ಸಾಹಿತ್ಯವು ನಶಿಸಿ ಹೋಗುತ್ತಿರುವಾಗ ಕೆಲವು ವಿದ್ಯಾವಂತ ಆಸಕ್ತರು ಮತ್ತೆ ಅದನ್ನು ಜೀವಂತವಾಗಿಸಲು ಪ್ರಯತ್ನಿಸಿದ್ದಾರೆ ಶ್ರೀಯುತರು.

"ಕಬ್ಬತ್ತಿರಂಗ"ದಲ್ಲಿ ಜನಪದ ಸಾಹಿತ್ಯದ ಗೀತರೂಪಕಗಳು ಲೇಖಕರ ಗಮನವನ್ನು ಹೆಚ್ಚಾಗಿ ಆಕರ್ಷಿಸಿದೆ. ಅದರಲ್ಲೂ ಭಕ್ತಿ ಪ್ರಧಾನವಾದ ಗೀತೆಗಳನ್ನೂ ಇಲ್ಲಿ ಹೆಚ್ಚಾಗಿ ಆಯ್ದುಕೊಂಡಿರುವುದನ್ನು ಕಾಣಬಹುದು. ಮಲೆನಾಡಿನ ಸಣ್ಣ ಹಳ್ಳಿಯಾದ ಕಬ್ಬತ್ತಿಯಲ್ಲಿ ನಡೆಯಬಹುದಾದ ಜಾತ್ರೆಯ ಸನ್ನಿವೇಶದ ವಿವರಣೆ ಈ ಸಂಕಲನದ ಪ್ರಥಮ ಗೀತೆಯಾದ "ಕಬ್ಬತ್ತಿರಂಗ ಸ್ವಾಮಿ"ಯಲ್ಲಿದೆ. ಆ ಸಂದರ್ಭದಲ್ಲಿ ಸಲ್ಲಿಸುವ ಪೂಜಾ ವಿಧಿಗಳು ಜನಮನದಲ್ಲಿ ಮೂಡುವ ಭಕ್ತಿ ಭಾವದ ಪ್ರತೀಕಗಳು. ಈ ಗೀತೆಯಲ್ಲಿ ಮೈತುಂಬಿ ನಿಂತಿವೆ.

ಸ್ವಾಮಿ ಮದುವೆಗೆ ಭೂಮಿ ಚಪ್ಪರ ಹೂಡಿ
ದಾಳಿಂಬೆ ಹಣ್ಣು ಹಸೆ ಹೂಡಿ ರಂಗಯ್ಯ
ಸ್ವಾಮಿ ನಿನ್ನ ಮದುವೆ ಶನಿವಾರ॥

ಅರತಿ ಹೊರಟಾನೆ ಕೀರುತಿ ಎಳ್ಳೋರಿಗೆ

ಕೇರಿಯ ಮೇಲೆ ಮರೆಯೋಗೆ ರಂಗಯ್ಯಗೆ

ಆರತಿ ಐನೂರು ಹೊರಟಾವೆ

ಹೀಗೆ ಸರಳವಾದ ಶೈಲಿಯಲ್ಲಿ ಭಕ್ತಿ ಭಾವನೆಯನ್ನು ಹೊರಸೂಸುತ್ತದೆ.

ಇದೇ ಭಕ್ತಿ ಭಾವನೆಯನ್ನು"ಗ್ರಾಮದೇವತೆ" "ಶಿವರಾಯನ ಹಾಡು"ಗಳಲ್ಲಿ ಕಾಣಬಹುದು.

ಗೊಂಬೆಯ ಸೀರೆ ಅಂಚ ತಂದೀವಿ ದ್ಯಾವಮ್ಮ

ಕಾಗೂಡು ಕಂದು ಮುಸುಕೀತು ದ್ಯಾವಮ್ಮ

ಒಪ್ಪತ್ತಿಕೊಳ್ಳೇ ಚೆಂದದಲಿ॥

ಎನ್ನುತ್ತಾ ಗ್ರಾಮ ದೇವತೆಯಾದ ದ್ಯಾವಮ್ಮನನ್ನು ಸುಪ್ರೀತಗೊಳಿಸಿ ಒಲಿಸಿಕೊಳ್ಳುವ ವಿವರಣೆ ಗ್ರಾಮದೇವತೆಯಲ್ಲಿದೆ.

ಇಬ್ಬರು ಹೆಂಡಿರ ಕಾಟವನ್ನು ವಿವರಿಸುವ "ಶಿವರಾಯನ ಹಾಡಿ"ನಲ್ಲಿ ಗಂಗೇಗೌರಿಯರ ಸಂಸಾರದಲ್ಲಿ "ಗೌರಿ" ಮುನಿಸಿಕೊಂಡರೂ ಕಡೆಗೆ ತನ್ನ ಸೂತಕ ಕಳೆಯಲು ಗಂಗೆಗೇ ಹೇಳಿಕಳುಹಿಸುತ್ತಾಳೆ. ಇಲ್ಲಿನ ವಿಷಯಕ್ಕೆ ಸಂಬಂಧಿಸಿದ ಮತ್ತಷ್ಟು ಕವನಗಳು ಇಲ್ಲಿ ಕಾಣಬಹುದಾಗಿದೆ. ಗೌರಿ ಸಂಧಾನಕ್ಕಾಗಿ ಈರಣ್ಣನನ್ನು ಗಂಗೆಯ ಬಳಿಗೆ ಕಳುಹಿಸಿದಾಗ ಗಂಗೆ ಅವನೊಡನೆ ವಾದ ಮಾಡಿ ಹಿಂದಕ್ಕೆ ಕಳುಹಿಸುತ್ತಾಳೆ, ಆ ಗೌರಿಯೇ ಸ್ವತಃ ಬಂದು ಕೇಳಿದಾಗ ಮಾತ್ರ ಗಂಗೆ ಕರುಣಿಸುತ್ತಾಳೆ. ಹೀಗೆ ಪೌರಾಣಿಕ ಛಾಯೆಯ ನವಿರಾದ ವರ್ಣನೆ ಜಾನಪದ ಸಾಹಿತ್ಯದ ಅಪೂರ್ವ ಕೊಡುಗೆಯಾಗಿದೆ.

ಇನ್ನು ನಮ್ಮ ಹಳ್ಳಿಗಾಡುಗಳ ಪ್ರತಿಬಿಂಬಿಸುವ "ಗುಡ್ಲು ಹಾಕುವ ಹಾಡು" "ಬಿತ್ತನೆ ಹಾಡು" "ಅಣ್ಣ – ತಂಗಿ" "ಸಿಂಗಾರದ ಆಸೆ" ಮುಂತಾದವು ಇಲ್ಲಿನ ಉತ್ತಮ ಗೀತೆಗಳು.

ನಮ್ಮ ಬಹುತೇಕ ಹಳ್ಳಿಗಳ ಮೇಲೆ ಆಧುನಿಕ ನಾಗರೀಕತೆಯ ಆಕ್ರಮಣವನ್ನು ಆಗದಿರುವುದರಿಂದ ಇಲ್ಲಿನ ಜನ ಜೀವನದಲ್ಲಿ ಜನಪದ ಸಾಹಿತ್ಯವು ಹಾಸುಹೊಕ್ಕಾಗಿ ಇನ್ನೂ ತನ್ನ ಪ್ರಭಾವವನ್ನು ಉಳಿಸಿಕೊಂಡಿರುವುದನ್ನು ನೋಡಬಹುದು. ಇಂಥ ಉತ್ಕೃಷ್ಟ ಸಾಹಿತ್ಯವನ್ನು ಸಂಪಾದಿಸಿ ಹೆಕ್ಕಿ ತಂದ ಲೇಖಕರ ಪ್ರಯತ್ನ ಪ್ರಶ್ನಾರ್ಹವಾದುದು.

ಹಳ್ಳಿಯ ರೈತ ಕುಟುಂಬದ ಪುತ್ರರಾದ ಶ್ರೀಮಾನ್ ಕೆ.ಆರ್. ಸುಶೀಲೇಗೌಡರು 'ಕಬ್ಬತ್ತಿರಂಗ' ಜಾನಪದ ಸಂಗ್ರಹದಲ್ಲಿ ಸುಮಾರು ಮುನ್ನೂರ ಐವತ್ತು ತ್ರಿಪದಿಗಳನ್ನು ಪ್ರಕಟನೆಗೊಳಿಸಿದ್ದಾರೆ. ಇದು ಇವರು ಸಂಗ್ರಹಿಸಿರುವ ಜಾನಪದ ಗೀತೆಗಳ ಸ್ವಲ್ಪ ಭಾಗ ಮಾತ್ರ. ಜಾನಪದ ತ್ರಿಪದಿ, ಆಕಾರದಲ್ಲಿ ಚಿಕ್ಕದಾಗಿದ್ದರೂ ಅರ್ಥ ವ್ಯಾಪ್ತಿಯಲ್ಲಿ ನಮ್ಮ ಜನತೆಯ ಬಾಳನ್ನೆಲ್ಲ ತ್ರಿವಿಕ್ರಮನಂತೆ ಆವರಿಸಿದೆ. ಶ್ರೀ ಸುಶೀಲೇಗೌಡರು ಅಪ್ಪಟ ಜನಪದರೇ ಆಗಿರುವುದರಿಂದ ಈ ಸಂಗ್ರಹದ ಎಲ್ಲ ಗೀತೆಗಳಲ್ಲಿಯೂ ಅಚ್ಚ ಹೊಸ ಭೂಮಿಯ ಸುವಾಸನೆ, ಜಾನಪದದ ನುಡಿಯ ಕಸವು ಬನಿ, ಹೃದಯವಂತಿಕೆ ಗೋಚರವಾಗುತ್ತದೆ. ಇಲ್ಲಿಯ ತ್ರಿಪದಿಗಳಲ್ಲಿ ಅನೇಕ ಈವರೆಗೆ ಪ್ರಕಟವಾದ

ಸಂಗ್ರಹದಲ್ಲಿ ಬಂದಿಲ್ಲ.

ಜಾನಪದ ನುಡಿಯಲ್ಲಿ ಒಂದು ವಿಶೇಷವಾದ ಸೊಬಗು ಇದೆ. ಗ್ರಾಂಥಿಕ ಭಾಷೆಗೆ ಆ ಸೊಬಗು ಎಂದಿಗೂ ಬಾರದು. ಈ ಸಂಗ್ರಹದ ಯಾವ ತ್ರಿಪದಿಯನ್ನು ಓದಿದರೂ ಅದರಲ್ಲೊಂದು ಹೊಸ ಸೊಗಸು, ರೈತ, ಭೂಮಿ, ಕಾಯಕ, ಒಕ್ಕಲುತನ ಇವುಗಳ ಮನಮೋಹಕ ಚಿತ್ರ ನಮ್ಮ ಮನಸ್ಸಿನಲ್ಲಿ ಅಚ್ಚೊತ್ತಿ ನಿಲ್ಲುತ್ತದೆ.

ಶ್ರೀಯುತರು ತುಂಬ ಪರಿಶ್ರಮದಿಂದ ಇವುಗಳನ್ನು ಸಂಗ್ರಹಿಸಿ ಕನ್ನಡಿಗರ ಮುಂದಿಟ್ಟಿದ್ದಾರೆ. ಈ ದಿಕ್ಕಿನಲ್ಲಿ ಗೌಡರು ಬಹಳ ಕಾರ್ಯ ನಡೆಸಬಲ್ಲ ಶಕ್ತಿಯುಳ್ಳವರು.

ಕಬ್ಬತ್ತಿರಂಗಸ್ವಾಮಿ

ರಂಗರಂಗಗಿಂತ ಯಾರಂಗ ಚೆಲುವ
ಸಕ್ಕರೆ ಪಟ್ಟಣದ ರಂಗಗಿಂತ
ಕಬ್ಬತ್ತಿ ರಂಗ ಕರ ಚಲುವ॥

ಕೆಂದಕುದುರೆ ಮೇಲೆ ಬಂದನೆ ರಂಗಯ್ಯ
ಬೆನ್ನುಕೆಂಜೆಡೆ ಒಲುವುತ್ತ। ಕಬ್ಬತ್ತಿ
ಕೆಂಬಟ್ಟಲ್ಲಿಳಿದ ಕುದುರೆಯು॥

ಕರಿಯ ಕುದುರೆಗೆ ಉರಿಯ ಚೂರಿ ಪಾನ
ಕೆರೆಯೇರಿ ಮೇಲೆ ಬರುವ। ರಂಗಯ್ಯನ
ಜಡೆ ಹೋಗಿ ಮಡುವ ತುಡುಕ್ಯಾವೆ॥

ಕಲ್ಲಿನ ಗುಡಿಕಾನೊ ಕಂಚಿನಕದಕಾನೊ
ಅಲ್ಲವನೆ ನಮ್ಮ ಮನೆ ಸ್ವಾಮಿ। ನಾವು
ಇಲ್ಲಿಂದ ಕೈಯ್ಯ ಮುಗಿದೇವು॥

ಮಲೆನಾಡಿನ ಪುಟ್ಟಹಳ್ಳಿಯಾದ ಕಬ್ಬತ್ತಿಯಲ್ಲಿ ರಂಗಸ್ವಾಮಿಯ ಜಾತ್ರೆಯು ನಡೆಯುತ್ತದೆ. ಆ ಜಾತ್ರೆಯ ಉತ್ಸವ ಮೂರ್ತಿಯೇ ಈ ರಂಗಸ್ವಾಮಿ ದೇವರ ವರ್ಣನೆ ಗೀತೆಯಲ್ಲಿ ಅನಾವರಣಗೊಂಡಿರುತ್ತದೆ. ಈ ರಂಗನಿಗಿಂತ ಬೇರೆ ಯಾರು ಅಂದ ಚೆಂದವಿಲ್ಲ. ಸಕ್ಕರೆ ಪಟ್ಟಣದ ರಂಗನಿಗಿಂತಲೂ ಸುರ ಸುಂದರ ಈ ನಮ್ಮ ಕಬ್ಬತ್ತಿ ರಂಗ. ಇದೇ ನಿಜವಾದ ಚೆಲುವು ಈತ ಕೆಂದುಬಣ್ಣದ ಕುದುರೆಯನ್ನು ತನ್ನ ವಾಹನವನ್ನಾಗಿ ಮಾಡಿಕೊಂಡು ಸಂಚರಿಸುವವನು ಕುದುರೆಯ ಬೆನ್ನಿನ ಮೇಲೆ ಕೆಂಪು ಕೂದಲು (ಕೆಂಜೆಡೆ) ಇದೆ. ಅದು ಕೆಂಪು ಬೆಟ್ಟಗಳಲ್ಲಿ ಸಂಚರಿಸುತ್ತ ಬರುತ್ತದೆ. ಅಂತೆಯೇ ಕಪ್ಪು ಕುದುರೆಯ ಕೂಡಿ ಕೂಡ ಈ ಸ್ವಾಮಿ ಬರುತ್ತಾನೆ. ಅದು ಕೆರೆಯ ಏರಿ ಮೇಲೆ ಬರುವಂತಹ ಕುದುರೆ ಅದರ ಕೂದಲು ಕೆಳಗೆ ನೆಲಮುಟ್ಟುವಂತೆ ಇದೆ. ಸ್ವಾಮಿಯ ಮಂದಿರ ಕಲ್ಲಿನಿಂದ ನಿರ್ಮಿತವಾಗಿದೆ. ಇದರ ಬಾಗಿಲು ಕಂಚಿನಿಂದ ತಯಾರು ಮಾಡಿರುವಂತಹದ್ದು

ಈ ಗೀತೆಯ ಸಾರ.

ಈ ನಮ್ಮ ಸ್ವಾಮಿಗೆ ನಾವು ಇಲ್ಲಿ ನಿಂತೆ ಕೈಮುಗಿಯುತ್ತೇವೆ ಎಂದು ಹಾಡಿದ್ದಾರೆ ನಮ್ಮ ಜನಪದರು.

ಬೆಟ್ಟದ ಸುತ್ತ ಬಿಟ್ಟಿರುವ ಹೂವಿನ ಮಾಲೆ
ಸುತ್ತ ಬಿಟ್ಟವರೇ ಪರಬಾಳೆ। ರಂಗಯ್ಯ
ನೆತ್ತಿಲಿ ಬಿಟ್ಟವರೆ ಕಿರಿಜಕೆ॥
ರಂಗಯ್ಯ ಬರುತ್ತಾನೆಂದು ಸಾರಿಸಿದೋ ಗುಡಿಸಿದೊ
ರಂಗಯ್ಯನ ಕುಟ್ಟೆರವಣಿರು। ಬರುತ್ತಾನೆಂದು
ಅಂಗಳಕ್ಕೆ ರಂಗೋಲಿ ಹರಡಿದೋ
ಹೋಗಿನೋಡನ ಬನ್ನಿ ಹೂವಿನ ಪೂಜೆಯ
ಸ್ವಾಮಿಯ ರಂಗಯ್ಯನಕದಲಿನು। ಪೂಜೆಯ
ಹೋಗಿ ನೋಡುವವರಿಗೆ ಅಳುವಿಲ್ಲ॥
ಹಳ್ಳಕೊಳ್ಳದ ನೀರು ದಿಲ್ಲಿಯ ಕೈ ಚೆಂಬು
ಸ್ವಾಮಿ ರಂಗಯ್ಯಗೆ ಶಿವಪೂಜೆ। ಆಗುವಾಗ
ಕಲ್ಯಾಣದ ಗಂಟೆ ಗಲಿರೆಂದೋ।

ಆ ಬೆಟ್ಟದ ಸುತ್ತಮುತ್ತ ಹೂವಿನ ಗಿಡಗಳನ್ನು ಸಮೃದ್ಧಿಯಾಗಿ ಬೆಳೆಸಲಾಗಿದೆ. ಅಂತೆಯೇ ಬಾಳೆಯ ಗಿಡವನ್ನು ಸಹ ದೇವರ ನೈವೇದ್ಯಕ್ಕಾಗಿ ಬೆಳೆಸಲಾಗಿದೆ. ಈ ಸ್ವಾಮಿಯ ಮೂರ್ತಿಗೆ ತಲೆಯ ಮೇಲೆ ಸಣ್ಣ ಜಡೆಯನ್ನು ಬಿಡಲಾಗಿ ಅದನ್ನು ಸಿಂಗರಿಸಿದೆ. ಸ್ವಾಮಿಯ ಮೆರವಣಿಗೆಯು ಬೀದಿಯಲ್ಲಿ ಬರುವುದಾಗಿ ಪ್ರಚಾರ ಮಾಡಿ ಹಾದಿ ಬೀದಿಯನ್ನು ಸ್ವಚ್ಛಗೊಳಿಸಲಾಗಿದೆ. ಅದರಂತೆ ಮನೆಯ ಅಂಗಳವನ್ನು ಗುಡಿಸಿ ಸಾರಿಸಿ ರಂಗೋಲೆಯ ಚಿತ್ತಾರ ಬಿಡಿಸಿದ್ದಾರೆ. ನಮ್ಮ ಊರಿನವರಷ್ಟೇ ಅಲ್ಲದೆ ಪರ ಸ್ಥಳಗಳಿಂದಲೂ ಈ ಸ್ವಾಮಿಗೆ ಸಿಂಗರಿಸಲು ಹೂವ ತಂದಿದ್ದಾರೆ. ಬಾಳೆಹಣ್ಣು ಪ್ರಸಾದವಾಗಿ ನೀಡಿದ್ದಾರೆ. ಬಾವುಟವು ಹಾರಾಡುತ್ತಿದೆ. ಈ ದೇವರನ್ನುನೋಡುವವರಿಗೆ ಯಾವುದೇ ರೀತಿಯ ಭಯ, ಕಷ್ಟಗಳು ಇರದೆ ನಿವಾರಣೆಯಾಗುತ್ತದೆ. ದೇವರಿಗೆ ಹರಿಯುವ ನೀರನ್ನು ಕೈಚೆಂಬಿನಲ್ಲಿ ತಂದು ಮಜ್ಜನ ಮಾಡಿಸಿ ಸಿಂಗರಿಸಿ ಶಿವಪೂಜೆಗೆ ಅಣಿಮಾಡುವ ಸಮಯಕ್ಕೆ ಶುಭ ಗಂಟೆಯನ್ನು ಬಾರಿಸಿದಾಗ ಭಕ್ತರಲ್ಲಿ ಭಕ್ತಿಯು ಮೂಡುತ್ತದೆ.

ಗಿರಿಯ ಹತ್ತುತ್ತ ಕುರುಬೆವರಬೆವರುತ್ತಾ
ಚಳ್ಳೋಗರಲ್ಲಿ ಬೆವರವರಸುತ್ತಾ। ರಂಗಯ್ಯ
ನೀ ಗಿರಿಯ ಹತ್ತಿದೆ ಶನಿವಾರ॥
ಗಂಧದ ಗಮನಕ್ಕೆ ಹೊಂಬಾಳೆ ಭಾರಕ್ಕೆ
ಸ್ವಾಮಿ ರಂಗಯ್ಯ ಬೆವತಾನು। ಪೂಜಾರಿ
ಬೇಸಯ್ಯ ಚೆಳ್ಳೀ ಚವಲಾವ॥

ಮಲ್ಲಿಗೆ ಮಳೆಯಲ್ಲಿ ಎಲ್ಲಿದ್ದೆ ರಂಗಯ್ಯ
ನಾನು ಹೊಂಬಾಳೆಲಿದ್ದೆ ಅನುಗಾಲ। ಪೂಜಾರಿ
ಬೀಸಯ್ಯ ಬೆಳ್ಳಿ ಚವಲವ॥

ಸ್ವಾಮಿ ಮದುವೆಗೆ ಭೂಮಿ ಚಪ್ಪರ ಹೂಡಿ
ದಾಳಿಂಬೆ ಹಣ್ಣ ಹಸೆಹೂಡಿ ರಂಗಯ್ಯ
ಸ್ವಾಮಿ ನಿನ್ನ ಮದುವೆ ಶನಿವಾರ॥

ಬೆಟ್ಟದ ಮೇಲಿರುವ ಸ್ವಾಮಿಯ ದರ್ಶನವನ್ನು ಪಡೆಯಲು ಗಿರಿಯನ್ನ ಹತ್ತಲೇಬೇಕು. ಶನಿವಾರ ಸ್ವಾಮಿಯ ಪೂಜೆ, ದರ್ಶನಕ್ಕೆ ವಿಶೇಷವಾದ ದಿನ. ಆ ದಿನ ಗಿರಿಯನ್ನು ಹತ್ತಿದರೆ ದರ್ಶನ ಭಾಗ್ಯವು ಲಭಿಸುತ್ತದೆ. ಬೆವರ ಸುರಿಸುತ್ತ ಬಿಸಿಲ ದಗೆಯಲ್ಲಿ ಬೆಟ್ಟಹತ್ತಬೇಕು. ಪೂಜೆಯ ಸಂದರ್ಭದಲ್ಲಿ ಪೂಜಾರಿಯು ಗರ್ಭಗುಡಿಯಲ್ಲಿರುವ ದೇವರಿಗೆ ಗಂಧದ ಗಮಗಮ ದೂಪವನ್ನು ಹಾಕುವನು. ದೇವರ ಆಚೆ ಈಚೆಗೆ ಹೊಂಬಾಳೆಯನ್ನು ಕಟ್ಟಿರುತ್ತಾರೆ. ಇದರ ಭಾರಕ್ಕೆ ಸ್ವಾಮಿಯು ಸಕೆಯಿಂದಾಗಿ ಬೆವತಿದ್ದಾರೆ. ಪೂಜಾರಿಯು ಚವಳಿಯ ಸಹಾಯದಿಂದ ಗಾಳಿಯನ್ನ ಬೀಸುವರು. ಸ್ವಾಮಿಗೆ ಮಲ್ಲಿಗೆ ಮಳೆಯನ್ನೆ ಸುರಿಸಲಾಗಿದೆ. ಹೊಂಬಾಳೆಯನ್ನು ಮುಡಿಸಲಾಗಿ ಬೆಳ್ಳಿಯ ಚವಳಿಯ ಮೂಲಕ ಗಾಳಿ ಬೀಸಲಾಗುವುದು. ಸ್ವಾಮಿಯನ್ನು ಉತ್ಸವಕ್ಕೆ ಹೊರಡಿಸುವ ಮುನ್ನ ಮದಲಿಂಗನಂತೆ ಸಿಂಗರಿಸಲಾಗುವುದು. ಈತನ ಮದುವೆಗೆ ಇಡೀ ಭೂಮಿಗೆ ಚಪ್ಪರವನ್ನ ಹಾಕಿದಂತೆ ಸಿಂಗರಿಸಲಾಗುತ್ತದೆ. ಈ ಶುಭಕಾರ್ಯಕ್ಕೆ ದಾಳಿಂಬೆ ಹಣ್ಣುಗಳಿಂದ ಪೀಠವನ್ನು ಸಿದ್ಧಪಡಿಸುವರು. ಈ ಎಲ್ಲಾ ರೀತಿಯ ಆಚರಣೆಗಳನ್ನು ಪೂರ್ಣಗೊಳಿಸಿದ ನಂತರ ರಂಗಸ್ವಾಮಿಯನ್ನು ಮದುವೆಗೆ ಶನಿವಾರದಂದು ನೆರವೇರಿಸುವರು.

ರಂಗಯ್ಯ ಮದಲಿಂಗನ ಎಲ್ಲಾ ನೋಡ ಬನ್ನಿ
ಚಿನ್ನದ ಪರಬಾಳೆ ರವಿಸೂರ। ಬೆಟ್ಟದ
ಮೇಲೆ ರಂಗಯ್ಯ ರಾತ್ರಿಕೆ॥

ಹೊತ್ತು ಸಾರಿಸಿ ಬೆಟ್ಟಕ್ಕೆ ಸ್ವಾಮಿ ರಂಗಯ್ಯ ಹುಲಿ ಬ್ಯಾಟೆ। ಹೊರಟಾರೆ
ಚನ್ನಂಗಿ ನಂಚೋ ದುರುಗಾಕೆ।

ಕಟ್ಟೋದು ಹೊಸತೇರು ಎಳೆಯೋದು ಹೊಸ ಮಕ್ಕಳು
ಈ ಊರ ಗೌಡ ಹಸುಮಗ। ರಂಗಯ್ಯ
ಹನ್ನೆರಡು ತುಪ್ಪ ಒಳಕೋಳೊ॥

ರಂಗಸ್ವಾಮಿ ದೇವರನ್ನು ಮದಲಿಂಗನಂತೆ ಸಿಂಗರಿಸಿ. ಚಿನ್ನದ ಕಿರೀಟ ಧರಿಸುವುದರಿಂದ ಶೋಭಿಸುವನು. ಬೆಟ್ಟದ ಮೇಲಿನ ಗುಡಿಯಲ್ಲಿ ಈತನು ಇರುವುದನ್ನು ರಾತ್ರಿ ನೋಡಬಹುದಾಗಿದೆ. ಸ್ವಾಮಿಯೊಂದಿಗೆ ಹೆಂಡತಿಯಾಗಿ ಸಿಂಗಾರ ಗೊಂಡಿರುವವಳು ಬಿದಿಗಮ್ಮ ತಾಯಿ. ಈಕೆ ಸಂಜೆ

ಕಳೆದ ಮೇಲೆ ಸುಣ್ಣ ಬಣ್ಣಗಳಿಂದ ಸಿಂಗರಿಸಿದ ಬೆಟ್ಟದಲ್ಲಿನ ಗುಡಿಯಲ್ಲಿ ಇರುವರು. ಈಕೆ ಇರುವ ಸ್ಥಳ ಕಲ್ಲು ಗುಡಿಯಾಗಿದ್ದು ಕೈಲಾಸದಂತೆ ಕಂಗೊಳಸುತ್ತಿದೆ. ಈ ಸಂದರ್ಭದಲ್ಲಿ ಹಸಿರು ಬೆತ್ತದ ಕೋಲನ್ನು ಹಿಡಿದು ಹುಲಿಯ ಬೇಟೆಗೆಂದು ಸ್ವಾಮಿಯು ದುರ್ಗದಿಂದ (ಕೋಟೆ) ಕಾಡಿಗೆ ಹೊರಟ್ಟಿದ್ದಾರೆ. ಬೇಟೆಯಿಂದ ಬಂದ ನಂತರ ಈ ಸ್ವಾಮಿಯ ತೇರು ಎಳೆದು ಉತ್ಸವ ನಡೆಯುತ್ತದೆ. ಈ ಸ್ವಾಮಿಯ ತೇರು ಹೊಸದಾಗಿ ನಿರ್ಮಿತಗೊಂಡಿದೆ. ಇದನ್ನು ಎಳೆಯುವವರು ಯುವಕರು ಮತ್ತು ಊರಿನ ಗೌಡರ ಮಗ. ಈ ದೇವರಿಗೆ ಆ ಸಂದರ್ಭದಲ್ಲಿ ತುಪ್ಪದ ಅಭಿಷೇಕ ಮಾಡುವರು.

ಬಂದ ಪರಸೆಯ ಮುಂದೆ ಬಸ್ಸು ಮಾಡಲು ಬ್ಯಾಡ
ಹೆಣ್ಣು ಮಕ್ಕಳವರೇ ಗುಡಿ ತುಂಬ। ನೀ ನೋಡಿ
ಸಲವಯ್ಯ ಅವರ ಕೋಪಗಾಗ॥

ಹಣ್ಣು ಕಾಯಿತಕ್ಕೊಂಡು ರಂಗಯ್ಯ ಗುಡಿಗೋದೋ
ಗುಡಿಯಲ್ಲಿ ರಂಗಯ್ಯ ಸುಳಿವಲ್ಲ। ಪೂಜಾರಿ
ಹೂವು ತೇರು ತಾವ ರಂಗಯ್ಯ॥

ಜೇನು ತುಪ್ಪ ಬಂದೊ ಬಾಳೆಯ ಹಣ್ಣು ಒಯೋ
ದಂಬಾರಿ ಬಂತೋ ನಿನ್ನ ಗುಡಿಗೇ॥ ರಂಗಯ್ಯ
ಹಣ್ಣು ತೇರು ತಾವ ದಯಮಾಡೋ॥

ದೇವರಿಗೆ ಹೋವರಿಗೆ ಬಾಳೆಯ ಹಣ್ಣು ಬೇಕು
ಹಾದಿ ನಡೆಯೊರಿಗೆ ಎಲೆ ಬೇಕು। ರಂಗಯ್ನ
ತೇರು ತದ ಬಟ್ಟಲಿಗೆ ಹಣ ಬೇಕು॥

ಜಾತ್ರೆಗೆ ಬಂದಂತಹ ಜನರು ಗುಡಿಯ ಒಳಗೆ ಸೇರುವರು. ಹೆಣ್ಣುಮಕ್ಕಳು ಬಹಳ ಸಂಖ್ಯೆಯಲ್ಲಿದ್ದು ನಿನ್ನ ದರ್ಶನಕ್ಕೆ ಕಾದಿದ್ದಾರೆ. ಕೋಪಗೊಂಡಿದ್ದಾರೆ ನಿನ್ನ ದರ್ಶನ ಸಿಗದೆ. ಅವರೆಲ್ಲರನ್ನು ನೀನೇ ಕಾಪಾಡಬೇಕು ಜನರು ಭಕ್ತಿಯಿಂದ ಹಣ್ಣು-ಕಾಯಿಗಳನ್ನು ಸ್ವಾಮಿಯ ಗುಡಿಗೆ ತಂದಿದ್ದು, ಆದರೆ ಗುಡಿಯಲ್ಲಿ ದೇವರು ಇಲ್ಲ ಅಂದು ಕೊಳ್ಳುವರು. ಈ ಸ್ವಾಮಿ ಪೂಜಾರಿ ಕೂಡ ಹೊರಗಿನ ತೇರನ್ನು ಏರಿ ಕೂತಿದ್ದಾನೆ. ದೇವರ ಪೂಜೆಗೆಂದು ಜೇನುತುಪ್ಪ, ಬಾಳೆಹಣ್ಣು ಹಿಡಿದು ಜನರು ಪೂಜೆಗೆ ಬಂದರೆ, ಸ್ವಾಮಿಯು ಹಣ್ಣು ತೇರು ಏರಿ ಕುಳಿತಿದ್ದಾನೆ. ದೇವರ ಗುಡಿಗೆ ಹೋಗುವವರು ಬಾಳೆಯ ಹಣ್ಣು ಹಿಡಿದು ಕೆಲವು ಭಕ್ತರು ಹೋಗುತ್ತಿದ್ದರೆ; ಇನ್ನೂ ಕೆಲವು ಭಕ್ತರು ಜಾತ್ರೆಯಿಂದ ಮನೆಗೆ ಎಲೆ, ಅಡಿಕೆ ಜಗೆಯುತ್ತಾ ನಡೆದಿದ್ದಾರೆ. ಅಲ್ಲದೇ ಕೆಲವು ಭಕ್ತರು ಹಣ ಕೊಡುವರು.

ದೇವರಿಗೆ ಹೋದವರಿಗೆ ದಾವತಿ ನಮಗಿಲ್ಲ
ದಾರಿ ನಡೆದಾರಿ ದಾವತಿ। ರಂಗಯ್ಯ
ದಾರಿ ನಡೆದಾರಿ ದಣಿವಿಲ್ಲ॥

ಸ್ವಾಮಿ ರಂಗಯ್ಯನ ಸ್ವಾಮಿ ಶರಣಯ್ಯನೆ
ಸ್ವಾಮಿ ರಂಗಯ್ಯ ಶರಣಯ್ಯ ಬಲವಿದ್ದರೆ
ಕಣ್ಣಿಗೆ ನಿದ್ದಾರೆ ಬರಲೊಲು॥

ಒಪ್ಪಿನ ಸೊಂಟ ಚುಚ್ಚಲು ಬಾಯಿ ಬೀಗ
ಉಕ್ಕು ಹೊಳೆಯಲ್ಲಿರುವ ನಿಂಬೇ। ರಂಗಯ್ಯ
ಒಪ್ಪಿಸಿಕೊಳ್ಳೊ ಹರಕೆಯ॥

ಹರಕೆಯ ಒಪ್ಪಿಸೋತೆ ದೊಡ್ಡೋರ ಮಗನೇನೇ
ನೀ ಸುತ್ತಿ ಬಾರೆ ಪಾಳಿಯ। ಬಾಗಿಲ್ಮುಂದೆ
ಹೊತ್ತು ಬಾರೆ ಹೊನ್ನ ಕಳಸಾನ।

ದೇವರಿಗೆ ಹೋಗುವವರಿಗೆ ಯಾವುದೇ ರೀತಿಯ ದಣಿವು, ಆಯಾಸ ಆಗುವುದಿಲ್ಲ. ಭಕ್ತಾಧಿಗಳು ನಡೆಗೆಯಲ್ಲಿ ಹೋಗುವುದರಿಂದ ಮುಕ್ತಿ ಸಿಗುವುದೆಂದು ಭಾವಿಸಿ ನಡೆದು ಹೋಗುವರು. ಆಗಲೂ ಸಹ ಯಾವುದೇ ರೀತಿಯ ಆಯಾಸವಾಗದೆ ದುಃಖ, ನೋವುಗಳನ್ನು ಮರೆಯಲು ಸಾಧ್ಯವಾಗುತ್ತದೆ. ಸ್ವಾಮಿಗೆ ಅಷ್ಟು ದೂರದಿಂದ ನಡೆದು ಬಂದು ಕೈಮುಗಿದು, ಶರಣು, ಸ್ವಾಮಿ ಅಂದರೆ ಯಾವುದೇ ರೀತಿಯ ಕಷ್ಟಗಳು ಬರುವುದಿಲ್ಲ. ದೇವರ ಧ್ಯಾನದಲ್ಲಿದ್ದರೆ ಕಣ್ಣಿಗೆ ನಿದ್ದೆ ಕೂಡ ಬರುವುದಿಲ್ಲ. ಈ ದೇವರಿಗೆ ಹರಕೆಯನ್ನ ಭಕ್ತರು ಕಟ್ಟುತ್ತಾರೆ. ಅವು ವಿಚಿತ್ರವಾಗಿರುತ್ತವೆ. ಸೊಂಟಕ್ಕೆ ಕೊಂಡಿಯನ್ನು ಸಿಕ್ಕಿಸಿಕೊಳ್ಳುವುದು. ಬಾಯಿಗೆ ಬೀಗ ಹಾಕಿಕೊಳ್ಳುವುದು. ಉಕ್ಕು ಸಿಕ್ಕಿಸಿಕೊಳ್ಳುವುದು. ಅದಕ್ಕೆ ನಿಂಬೆ ಹಣ್ಣನ್ನು ಚುಚ್ಚಿರುತ್ತಾರೆ. ಇಂತಹ ಹರಕೆಯ ಮೂಲಕವಾಗಿ ಭಕ್ತರು ತಮ್ಮನ್ನು ಒಪ್ಪಿಸಿಕೊಳ್ಳುತ್ತಾರೆ. ಹರಕೆಯನ್ನು ಶ್ರೀಮಂತರೂ ಕೂಡ ಒಪ್ಪಿಸುವರು. ಹೊನ್ನು, ಹಣವನ್ನು ಬಾಗಿಲ ಮುಂದೆ ಇಡುವ ಮೂಲಕವಾಗಿ ಪೂಜಾರಿಗೆ ಕೊಟ್ಟು, ಬಂಗಾರ ಲೇಪಿತ ಬಾಗಿಲು, ಕಮಾನುಗಳನ್ನು ನಿರ್ಮಾಣ ಮಾಡುವರು.

ಆಗಸದಿಂದ ಧೂಪದ ಹೊಗೆ ಬಂದೋ
ಆಕೆ ರಂಗಯ್ಯ ಗುಡಿ ಮುಂದೆ। ನೋಡಿದೆ
ಬೇಕಾದ ಬಾಳೇಯ ಗೊನೆ ಬಿಟ್ಟೋ॥

ಹಾಲು ಬಾನದ ಕೊಡು ಮ್ಯಾಲೆ ಭಾಗ್ಯವ ಕೊಡು
ಬಾಲಕರ ಕೊಡು ಮನೆತುಂಬ। ರಂಗಯ್ಯ
ಬಾಗೀಲ ರಜವ ಹೊಡೆದೇವು॥

ತುಪ್ಪ ಬಾನವ ಕೊಡು ಕಪ್ಪು ಬಂಗಾರ ಕೊಡು
ಪುತ್ರರ ಕೊಡು ಮನೆ ತುಂಬ। ರಂಗಯ್ಯ
ಪೌಳಿಯ ರಜವ ಹೊಡೆದೆವು॥

ಆಕಾಶದಲ್ಲಿ ದಟ್ಟವಾದ ಹೊಗೆ ಬಂದು ಗುಡಿಯ ಎಲ್ಲಾ ಆವರಣವನ್ನು ಸುತ್ತುವರಿಯುತ್ತದೆ. ಆಗ ಭಕ್ತರಿಗೆ ಬೇಕಾಗುವಷ್ಟು ಬಾಳೆಯ ಗೊನೆಯು ಗಿಡದಲ್ಲಿ ಬಿಡುತ್ತದೆ.

ಭಕ್ತರು ಸ್ವಾಮಿಗೆ ತಮ್ಮ ಕಾಣಿಕೆಯನ್ನು ಒಪ್ಪಿಸುವ ಮೂಲಕ ತಮಗೆ ಮಕ್ಕಳ ಭಾಗ್ಯವನ್ನು ಕೊಡು ಎಂದು ಕೇಳುತ್ತಾರೆ. ಹಾಲು ತುಪ್ಪದ ಬಾನವನ್ನು ಕೊಡು, ಬಂಗಾರ ಕೊಡು, ಗುಡಿಯ ಕಸವನ್ನು ಬಾಗಿಲ ಕಸವನ್ನು ಸ್ವಚ್ಛಗೊಳಿಸುತ್ತೇವೆ ಎಂದು ತಮ್ಮ ಹರಕೆಯನ್ನು ಹೊತ್ತುಕೊಳ್ಳುವರು. ಆಗ ಅವರ ಮನಸ್ಸಿಗೆ ನೆಮ್ಮದಿ ದೊರೆತು ಮುಂದೆ ಒಳ್ಳೆದಾಗುತ್ತದೆ ಎಂದು ಭಾವಿಸುವರು.

ಊರತೇರುಗಳೆಲ್ಲ ಊರ ಮುಮದೆ ಹರಿದಾರೆ
ದಲ್ಲಣಿಗಾರ ರಂಗಯ್ಯ। ನಿನ್ನ ತೇರು
ಬೆಲ್ಲದಂಗಡಿಗೆ ಹರಿದಾವು॥

ಊರ ತೇರುಗಳೆಲ್ಲ ಊರ ಮುಮದೆ ಹರದಾರೆ
ಗಾತಾಳಗಾರ ರಂಗಯ್ಯ। ನಿಂತೇರು
ದೂಪದಂಗಡಿಗೆ ಹರಿದಾವು॥

ತೇರು ಹರಿದಾವೆ ತಾನಕೆ ನಿಂದಾವೆ
ನೋಡೊ ಪರಿಷೆಲ್ಲ ಹರಿದಾಡಿ। ಹೋಗುವಾಗ
ತೇರಿಗಿಟ್ಟವರೆ ದವನವ॥

ಕಬ್ಬತ್ತಿಯ ರಂಗಸ್ವಾಮಿಯು ಯಾವ ರೀತಿಯ ಪ್ರಾಣಿ ಬಲಿಯನ್ನು ಕೇಳುವುದಿಲ್ಲ. ಅದು ಕೇವಲ ಸಸ್ಯಹಾರದ ನೈವೇದ್ಯವನ್ನು ಮಾತ್ರವೇ ಕೇಳುವಂತಹ ಸ್ವಾಮಿ, ಹಾಗಾಗಿ ಸ್ವಾಮಿಯ ತೇರು ಭಕ್ತರ ಸಹಾಯದಿಂದ ಬೆಲ್ಲದ ಅಂಗಡಿಯ ಕಡೆ, ಧೂಪದ ಅಂಗಡಿಯ ಕಡೆ, ಹರಿಯುತ್ತದೆ. ಜಾತ್ರೆಯ ಎಲ್ಲ ತೇರುಗಳು ಊರ ಮುಂದೆ ಸೇರಲು ಹೋದರೆ ಈ ಸ್ವಾಮಿಯ ತೇರು ಬೇರೆಡೆಗೆ ಸಾಗುತ್ತದೆ. ದೂಪ, ಬೆಲ್ಲದ ಅಂಗಡಿಯಿಂದ ಹಿಂದಿರುಗಿದ ತೇರು ಊರ ಮುಂದೆ ಹರಿಯುತ್ತದೆ. ನೋಡು ನೋಡುತ್ತಿದ್ದಂತೆ ಜನರ ಗುಂಪು ಸ್ವಾಮಿಗೆ, ತೇರಿಗೆ ಹೂವನ್ನು ಮುಡಿಸುತ್ತಾರೆ. ಕೆಲವರು ಹೂವನ್ನು ತೇರಿನ ಕಡೆ ಅದರ ಮೇಲೆ ತೂರುವುದು ಪದ್ಧತಿಯಾಗಿದೆ. ಹೆಣ್ಣು ಗಂಡು ಮಕ್ಕಳು, ಮುದುಕರು ಕೂಡ ಇದರಲ್ಲಿ ಭಾಗಿಗಳಾಗುವರು

ಸಂಜೆಯಾಯಿತು ಶಿವನ ಸಂಗಡೊಬ್ಬರಿಲ್ಲಾ
ನಮ್ಮ ತಂದೆಯ ಮನೆ ಸ್ವಾಮಿ। ರಂಗಯ್ಯ
ನಾನಿರುವ ಮಗಳೆ ನಡೆ ಮುಂದೆ॥

ಹೊತ್ತಾಯಿತು ಶಿವನೆ ಒತ್ತಿಲೊಬ್ಬರಿಲ್ಲ
ನಮ್ಮ ಮಾವನ ಮನೆ ಸ್ವಾಮಿ। ರಂಗಯ್ಯ
ನಾನಿರುವ ಮಗಳೆ ನಡೆ ಮುಂದೆ॥

ಅಪ್ಪರಂಗಯ್ಯನ ಕೆಪ್ಪೆ ಮೇಗಳ ನಾಮ
ಬಟ್ಟು ನೂಲೇಳೆ ತೆಗೆದಂತೆ। ರಂಗಯ್ಯ
ನಿಂಕೆಪ್ಪೇ ಮ್ಯಾಗಳ ಹರಿನಾಮ॥

ಅಣ್ಣ ರಂಗಯ್ಯನ ಕೆನ್ನೆ ಮೇಗಳ ನಾಮ

ಸಣ್ಣ ನೂಲೆಳೆ ತೆಗೆದಂಗೆ। ರಂಗಯ್ಯ
ನಿಂಕೆನ್ನೆ ಮ್ಯಾಗಳಾ ಹರಿನಾಮ॥

ಸಂಜೆಯಾಗುತ್ತಿದ್ದಂತೆ ಜಾತ್ರೆಗೆ ಸೇರಿದ ಜನ ತಮ್ಮ ತಮ್ಮ ಮನೆಗಳಿಗೆ ಹಿಂತಿರುಗುವರು. ಅಂತ ಸಂದರ್ಭದಲ್ಲಿ ಸ್ವಾಮಿಯ ಹತ್ತಿರ ಯಾರು ಇರುವುದಿಲ್ಲ. ಒಬ್ಬ ಹೆಣ್ಣುಮಗಳು ಮಾತ್ರ ಇರುವಳು. ಈ ಹೆಣ್ಣುಮಗಳ ತಂದೆ ಮತ್ತು ಮಾವನ ಮನೆಯ ದೇವರ ಆಗಿದ್ದಾನೆ ಸ್ವಾಮಿ. ಜನರಿಲ್ಲದ ಆ ಸ್ಥಳದಲ್ಲಿ ಆಕೆಗೆ ಸ್ವಾಮಿಯು ತಾನೇ ಮನೆ ಸೇರಿಸುತ್ತೇನೆ ಹೆದರ ಬೇಡವೆಂದು ಆಕೆಗೆ ಶಕ್ತಿ ತುಂಬುತ್ತಾ ಮನೆ ಸೇರಿಸುತ್ತಾನೆ.

ಸ್ವಾಮಿಯ ಹೆಸರಿನಲ್ಲಿ ಕೆನ್ನೆ ಮೇಲೆ ಮೈ ಮೇಲೆ ಸಣ್ಣದಾಗಿ ನೂಲಿನಂತೆ ನಾಮವನ್ನು ಹೆಚ್ಚಿಕೊಳ್ಳುವ ಮೂಲಕ ತಮ್ಮ ಭಕ್ತಿಯ ಪರಿಕಾಷ್ಟೆಯನ್ನು ಪ್ರದರ್ಶಿಸುತ್ತಿದ್ದಾರೆ. ಹಾಡಿನ ಮೂಲಕವೂ ಕೂಡ ಹರಿನಾಮ ಹಾಡುವ ಮೂಲಕ ತಮ್ಮ ಭಕ್ತಿಯು ಪ್ರಧಾನವಾಗಿರುತ್ತದೆ.

ಕಬ್ಬತ್ತಿ ರಂಗಾಗೆ ಕಬ್ಬನ ಉಯ್ಯಾಲೆ
ಯಾರು ತೂಗಿದರು ಮಲಕಾದು। ಕಬ್ಬತ್ತಿ
ರಂಗಯ್ಯನ ಹೆಂಡತಿ ಬಿದಿಗಮ್ಮ॥

ಯಾರು ತೂಗಿದರು ಮಲಕಾದು ಉಯ್ಯಾಲೆ
ರಂಗಯ್ಯನ ಹೆಂಡತಿ ಬಿದಿಗ್ಯಮ್ಮ। ತೂಗಿದರೆ
ಕಲ್ಯಾಣದ ಗಂಟೆ ಘಳಿರೆಂದೋ॥

ಉಯ್ಯಾಲೆಯ ಹಗ್ಗದಿಂದ ಕಟ್ಟಿರುವುದು ಸಹಜ. ಆದರೆ ಇಲ್ಲಿ ಸ್ವಾಮಿಗೆ ಕಬ್ಬಿನ ಉಯ್ಯಾಲೆಯನ್ನು ಕಟ್ಟಿ ಅದರಲ್ಲಿ ಮಲಗಿಸಿ ತೂಗಲಾಗಿದೆ. ಆದರೆ ಈ ಉಯ್ಯಾಲೆಯನ್ನು ಯಾರ‍್ಯಾರೋ ತೂಗಿದರೆ ಅದು ಮಿಸುಕಾಡುವುದಿಲ್ಲ. ಆ ಸ್ವಾಮಿಯ ಬಗ್ಗೆ ಅಪಾರವಾದ ಭಕ್ತಿ, ಪ್ರೀತಿ ಇದ್ದವರಿಗೆ ಮಾತ್ರವೇ ಸಾಧ್ಯ. ಈ ಉಯ್ಯಾಲೆಯನ್ನು ಯಾರು ತೂಗಿದರು ಅಲುಗಾಡದೆ ಆತನ ಮಡದಿಯಾದ ಬಿದಿಗ್ಯಮ್ಮ ತೂಗಿದಾಗ ಕಬ್ಬಿನ ಉಯ್ಯಾಲೆ ಮಿಸುಕಾಡುತ್ತದೆ. ಆಗ ಶುಭಗಳಿಗೆಯ ಘಂಟೆ ಬಾರಿಸುತ್ತದೆ.

ವರ್ಷಕೊರ್ಷಕ್ಕೆ ಚಂದಾಕಾನೆ ಕಬ್ಬತ್ತಿ
ವರ್ಷದ ಪೂಜೆ ಘನ ಪೂಜೆ। ರಂಗಯ್ಯ
ಹಲಿಗೆಯ ಪೂಜೆ ಹಸನಾದೋ॥

ತಿಂಗುತಿಂಗಳಿಗೆ ಚಂದಕಾನೋ ಕಬ್ಬತ್ತಿ
ತಿಂಗಳ ಪೂಜೆ ಘನ ಪೂಜೆ। ರಂಗಯ್ಯ
ಗರುಡಾನ ಪೂಜೆ ಘನವಾದೋ॥

ಆಚೆಯ ಬೀದೀಲಿ ದೀಪದ ಬೆಳಕೇನು
ಆತ ರಂಗಯ್ಯ ಮದಲಿಂಗ। ನಾಗುವಾಗ
ತುಪ್ಪದ ದೀಪ ಘನವಾದೋ॥

ಕಬ್ಬತ್ತಿ ರಂಗಸ್ವಾಮಿಯ ಜಾತ್ರೆಯು ವರ್ಷದಿಂದ ವರ್ಷಕ್ಕೆ ಚೆನ್ನಾಗಿರುತ್ತದೆ. ಪ್ರತಿದಿನದ ಪೂಜೆಗಿಂತ ವರ್ಷಕ್ಕೊಂದು ಬಾರಿ ಜಾತ್ರೆಯೆಂದು ನಡೆಯುವ ಪೂಜೆಯು ದೊಡ್ಡ ಪೂಜೆ. ಅದುವೇ ತುಂಬ ಮುಖ್ಯವಾದಂತಹದ್ದು. ಆ ಜಾತ್ರೆಯ ದಿನದಂದು ನಡೆಯುವ ಹಲಗೆಯ ಪೂಜೆಯು ಪ್ರಮುಕ. ವರ್ಷದ ಜಾತ್ರೆಯ ಪೂಜೆ, ಪ್ರತಿದಿನದ ಪೂಜೆಯಂತೆ ಪ್ರತಿ ತಿಂಗಳು ಹುಣ್ಣಿಮೆಯ ದಿನದಂದು ನಡೆಯುವ ಪೂಜೆಯೂ ಕೂಡ ಕುತೂಹಲಕರವಾದದ್ದು. ತಿಂಗಳು ತಿಂಗಳು ನಡೆಯುವ ಗರುಡನ ಪೂಜೆ ಮುಖ್ಯವಾದ ಪೂಜೆ. ಪಕ್ಕದ ಬೀದಿಯಲ್ಲಿ ದೀಪದ ಬೆಳಕಿನ ಆಕರ್ಷಣೆಯ ಈ ಅಲಂಕಾರ ಯಾಕೆಂದರೆ ಸ್ವಾಮಿಯು ಮಗಲಿಂಗನಾಗುವ ಪರಿ ಇದಾಗಿದೆ. ದೀಪದ ಅಲಂಕಾರ ತುಪ್ಪದ ದೀಪಗಳು ಅಲ್ಲಿ ಬೆಳಗುತ್ತವೆ.

ಆರತಿ ಹೊರಟಾವೆ ಕೀರುತಿ ಉಳ್ಳೋನಿಗೆ
ಕೇರಿಯ ಮೇಲೆ ಮೆರೆಯೋಗೆ। ರಂಗಯ್ಯ
ಆರತಿ ಐನೂರು ಹೊರಟಾವೇ॥

ಸ್ವಾಮಿಗೆ ಆರತಿ ಮಾಡುವಾಗ ತುಂಬ ಜನರು ಕೂಡಿ ಕೊಳ್ಳುವರು ಅಂತ ಸಂದರ್ಭದಲ್ಲಿ ರಂಗಸ್ವಾಮಿಯ ಕೀರ್ತಿ ಅಂದರೆ ಶಕ್ತಿ ಭಕ್ತಿಯ ಕುರಿತು ಮಾತನಾಡಿಕೊಳ್ಳುವರು. ರಂಗಸ್ವಾಮಿಯು ಊರಿನ ಬೀದಿಗಳಲ್ಲಿ ಮೆರವಣಿಗೆಗೆ ತೆರಳುವಾಗ ಐನೂರಕ್ಕಿಂತಲೂ ಹೆಚ್ಚು ಆರತಿಗಳನ್ನು ಎತ್ತಿ ರಂಗಸ್ವಾಮಿಯ ಪ್ರೀತಿಗೆ ಪಾತ್ರರಾಗುವ ಸಂದರ್ಭವನ್ನು ಇಲ್ಲಿ ಉಲ್ಲೇಖಿಸಲಾಗಿದೆ.

ಹೆಬ್ಬಾಗಲ ತುಂಬ ಅಬ್ಬಾರವೇನಿರೆ
ಒಬ್ಬ ತಂದೆಗೆ ಒಬ್ಬ ಮಗ ಹುಟ್ಟಿ। ರಂಗಯ್ಯ
ಅಬ್ಬರದಿ ಗುಡಿಗೆ ಬರುತಾನೆ॥

ತಾಯಿ ಮನೆ ದೇವರಿಗೆ ತಾಳಿಯ ಮಾಡಿಸಿದೊ
ನಮ್ಮ ಮಾವನ ಮನೆ ಸ್ವಾಮೀ। ರಂಗಯ್ಯಗೆ
ಹೇಳಿ ಮಾಡಿಸಿದೋ ಪರಬಾಳೆ.

ಹಸಿವಿಗೆ ಹಾಲು ಕಾಣೋ ಶಿಶುವಿಗೆ ಬೆಣ್ಣೆ ಕಾಣೋ
ಹುಟ್ಟಿದ ಮಕ್ಕಳಿಗೆ ನಿನ್ನ ಹೆಸರು। ರಂಗಯ್ಯ
ನೀ ಬಂದ ಬವುರ ಹೊಡಕೋಳೊ॥

ತಂದೆಗೆ ಒಬ್ಬ ಗಂಡು ಮಗ ಹುಟ್ಟಿದ್ದಾನೆ. ಆತ ಆ ಸಂತೋಷಕ್ಕಾಗಿ ದೇವರ ಗುಡಿಯ ಹೆಬ್ಬಾಗಿಲಿನಿಂದಲೇ ಅಬ್ಬರದ ಭಕ್ತಿಯನ್ನು ವ್ಯಕ್ತ ಪಡಿಸುತ್ತಾನೆ. ಗಂಡು ಮಗನ ಪಡೆದ ಆ ಹೆಣ್ಣು ತನ್ನ ತಾಯಿ ಮನೆಯ ದೇವರಾದ ಸ್ವಾಮಿಗೆ ತಾಳಿಯನ್ನು ಮಾಡಿಸಿ ತನ್ನ ಭಕ್ತಿಯನ್ನ ಮೆರೆದರೆ, ಇತ್ತ ಮಾವನ ಮನೆಯ ದೇವರಿಗೆ ಪರಬಾಳೆ, ಹೊಂಬಾಳೆಯನ್ನು ಕಾಣಿಕೆಯಾಗಿ ಆಕೆ ಅನಂತರ ಹಸಿದ ಮಗುವಿಗೆ ಹಾಲು ಕೊಡು ಬೆಣ್ಣೆಯನ್ನು ಕೊಡು ಸ್ವಾಮಿ ಹುಟ್ಟಿರುವ ಮಕ್ಕಳಿಗೆ ನಿನ್ನ ಹೆಸರನ್ನು ಇಟ್ಟು ನಿನ್ನ ಧ್ಯಾನದಲ್ಲಿ ಇರುತ್ತೇವೆ. ನೀನೇ ಬಂದು ನಮ್ಮನ್ನೆಲ್ಲ

ಸಲಹು ಸ್ವಾಮಿ ಎಂದು ಬೇಡುತ್ತಾರೆ. ಅಲ್ಲದೆ ಇಡೀ ನಮ್ಮ ಕುಟುಂಬದ ಹೊಣೆಗಾರಿಕೆ ನಿನ್ನದಪ್ಪ. ನಮ್ಮ ಕಷ್ಟಗಳನ್ನು ಪರಿಹರಿಸು ದೇವ ಎಂದು ಭಕ್ತಿಯಿಂದ ಪೂಜೆ ಪ್ರಾರ್ಥನೆಗಳನ್ನು ಭಕ್ತರು ಮಾಡುವರು.

ಕಷ್ಟಕ್ಕೆ ಆದವಗೆ ನಿಷ್ಟುರ ಹೊತ್ತವಗೆ
ಬಂದ ಬವುರವ ಬಯಲಾನೆ। ಮಾಡಿದಗೆ
ಪಾದಕ್ಕಿಟ್ಟೇವು ಇಡುಗಾಮಿ॥

ಇಡುಗಾಮಿ ಇಡಿಸೇವು ವಡಗಾಯ ವಡಿಸೇವೂ
ಎಳನೀರಿನ ಕೋಡಿ ಹರಿಸೋವು। ರಂಗಯ್ಯ
ನಿಂ ಕೋಣಿ ತುಂಬ ಕೋಡಿ ಹರಿಸೇವು

ಊರ ಮುಂದಿರುವವನೆ ಈರನೆ ಶೂರನೆ
ನೀರು ಗಂಧದ ಒಡೆಯಾನೆ। ರಂಗಯ್ಯಗೆ
ನೀರಿಗೋಗುತ್ತ ಕೈಯ ಮುಗಿದೇವು॥

ಸ್ವಾಮಿಯು ನಮ್ಮ ಕಷ್ಟಗಳನ್ನು ಹೋಗಲಾಡಿಸಿ ತನ್ನ ನಿಷ್ಠೆಯಲ್ಲಿ ಮರೆದಿದ್ದಾನೆ. ಬಂದ ಸಂಕಷ್ಟವನ್ನು ಪಾರು ಮಾಡಿದ್ದಾರೆ. ಸ್ವಾಮಿಯ ಪಾದಗಳಿಗೆ ನಮಸ್ಕರಿಸಿ, ಇಡುಗಾಯಿಯನ್ನು ಒಡೆಯುತ್ತೇವೆ ಎಂದು ಭಕ್ತ ಸಮೂಹ ಕಷ್ಟ ಪರಿಹಾರ ಮಾಡಿದ ಸ್ವಾಮಿಗೆ ಹರಕೆ ತೀರುಸುವರು. ಇಂತ ಸ್ವಾಮಿಗೆ ಇಡುಗಾಯಿ, ವಡಗಾಯಿ, ಎಳನೀರು ತುಂಬಿದ ಕಾಯಿಯನ್ನು ಒಪ್ಪಿಸಲಾಗುವುದು. ಗುಡಿಯ ತುಂಬ ಕಾಯಿಯ ಹೊಳೆಯನ್ನೆ ಹರಿಸುವುದಾಗಿ ಹೇಳುತ್ತಾರೆ. ಈ ಸ್ವಾಮಿಯ ಗುಡಿ ಊರ ಮುಂದಿದ್ದು, ಆತ ವೀರ, ಶೂರನಾಗಿದ್ದು, ಆತನು ನೀರು, ಗಂಧ ಪ್ರಕೃತಿಯ ಒಡೆಯನಾಗಿದ್ದಾನೆ. ಆ ರಂಗಯ್ಯನಿಗೆ ಜನ ನೀರಿಗೆ ಹೋಗುವಾಗ ಬರುವಾಗ ಊರ ಮುಂದಿರುವ ಸ್ವಾಮಿಗೆ ಕೈಮುಗಿಯುತ್ತಾರೆ. ಇದರಿಂದ ಅವರು ಶ್ರೀ ರಂಗಸ್ವಾಮಿಯ ಬಗೆಗಿರುವ ನಂಬಿಕೆ ಅಭಿವ್ಯಕ್ತ ಪಡಿಸಲಾಗುತ್ತದೆ.

ಊರ ಮುಂದಿರುವೋನೆ ಉರಿಯೋ ಹಚ್ಚಡದೋನೆ
ಜಾಜಿ ಹೂವಿನ ಜಡೆಯೋನೆ। ರಂಗಯ್ಯ
ನಿನ್ನ ಕಾರಗದ್ದೆ ಗಿಣಿ ತಿಂದೋ॥

ಸ್ವಾಮಿ ರಂಗಯ್ಯ ಏನು ಎಂಜಲಾದೋ
ಹಾಲೆಂಜಲಾದೋ ಕರುವುಂಡು। ರಂಗಯ್ಯ
ಹಣ್ಣೆಂಜಲಾದೋ ಗಿಣಿ ತಿಂದು॥

ಹಣ್ಣೆಂಜಲಾದೋ ಗಿಳಿ ತಿಂದು ರಂಗಯ್ಯ
ಹೂವೆಂಜಲಾದೋ ಹುಳು ಮುಟ್ಟಿ। ಗಂಗೇಯ
ನೀರೆಂಜಲಾದೋ ಮಿಕಮುಟ್ಟಿ॥

ಊರ ಮುಂದಿರುವ ಸ್ವಾಮಿ ಉಗ್ರನ ಅವತಾರದವನು. ಅಲ್ಲದೆ ಮೃದುವಾದವನು

ಕೂಡ. ನಿನ್ನ ಜಡೆ ಜಾಜಿ ಹೂವಿನದ್ದು, ನಿನ್ನ ಈ ಪ್ರಕೃತಿಯನ್ನು ಗಿಣಿ ಎಂಜಲು ಮಾಡಿದೆ. ಅಲ್ಲದೆ ಏನೇ ಎಂಜಲಾದರೂ ಕೂಡ ನೀನು ಮೃದು ಸ್ವಭಾದವನು. ಆದ್ದರಿಂದ ಏನೇ ಮಾಡಿದರು ನಿನ್ನ ಭಕ್ತರನ್ನು ಕ್ಷಮಿಸುವುದು ಪಾಲಿಸುವುದು ನಿನ್ನ ಕರ್ತವ್ಯವಾಗಿದೆ. ಅಲ್ಲದೆ ನಿನ್ನ ನೈವೇದ್ಯಕ್ಕೆ ಇಟ್ಟ ವಸ್ತುಗಳು ಯಾವುವು ಎಂಜಲಾದವು. ಅವುಗಳೆಂದರೆ ಕರು ಹಾಲು ಕುಡಿದು ಎಂಜಲು ಮಾಡಿತು. ಹಣ್ಣನ್ನು ಗಿಳಿ ತಿಂದು ಎಂಜಲು ಮಾಡಿದವು. ಹುಳುಗಳು ಮಕರಂದವನ್ನು ಹೀರಿ ಹೂವನ್ನು ಎಂಜಲು ಮಾಡಿತು. ಗಂಗೆಯನ್ನು ಮೀನುಗಳು ಮುಟ್ಟಿ ಎಂಜಲು ಮಾಡಿದವು. ಎಂದು ಪಟ್ಟಿಯನ್ನು ಕೊಡಲಾಗಿದೆ. ಅವೆಲ್ಲವುಗಳನ್ನು ತನ್ನ ಭಕ್ತಿಯೊಳಗೆ ಅಡಗಿಸಿ ಕೊಳ್ಳುವುದು. ಈ ಮೇಲಿನ ಹಾಡಿನ ಒಳರ್ಥವಾಗಿದೆ.

ಊರ ಮುಂದಲ ಕೆರೆಗೆ ರಂಗ ಬಾಣವ ಬಿಟ್ಟ
ನೋಡಾನ ಬನ್ನಿ ಜನರೆಲ್ಲಾ। ರಂಗಯ್ಯನ
ಜೋಡೆರಡು ಕುದುರೆ ಕುಣಿತಾವ॥

ಆದರಿಗಾರೆಲೆ ಕೂದರಿಗೆ ಮೂಕಿಲೆ
ಮಾತು ಬಲ್ಲವಗೆ ಕಾವಳಿಗೇ। ರಂಗಯ್ಯ
ಸ್ವಾಮಿಗೆ ನೋಡಿ ಎಲೆ ಪೂಜೆ॥

ಹೋಗಿ ನೋಡಾನ ಬನ್ನಿ ಹೂವಿನ ಪೂಜೆಯ
ಸ್ವಾಮಿ ರಂಗಯ್ಯನ ಕದಲಿಯಾ ಪೂಜೇಯ
ಹೋಗಿ ನೋಡೋರಿಗೂ ಮನವಿಲ್ಲ॥

ಎದ್ದು ನೋಡಾನ ಬನ್ನಿ ಮಗ್ಗಿನ ಪೂಜೆಯ
ಮುದ್ದು ರಂಗಯ್ಯನ ಕದಲಿಯ। ಪೂಜೆಯ
ಮದ್ದು ನೋಡೋರಿಗೆ ಮನವಿಲ್ಲ॥

ಊರಿನ ಮುಂದಿನ ಕೆರೆಗೆ ರಂಗಯ್ಯ ಬಾಣವನ್ನು ಬಿಟ್ಟಿದ್ದಾನೆ. ಊರಿನ ಜನರೆಲ್ಲರೂ ಅದನ್ನು ನೋಡಲು ಸೇರಿದ್ದಾರೆ. ಅಲ್ಲಿ ಸ್ವಾಮಿಯ ಕುದುರೆಗಳು ಎಂದು ಹೆಸರಾದ ಕುದುರೆಗಳ ನೃತ್ಯ ಆ ಕೆರೆಯ ಅಂಗಳದಲ್ಲಿ ನಡೆಯುತ್ತದೆ. ಅದೇ ವೇಳೆಗೆ ಸ್ವಾಮಿಗೆ ವೀಳ್ಯದ ಎಲೆಗಳಿಂದ ಅಲಂಕರಿಸಿ ಪೂಜೆಯನ್ನು ಮಾಡಲಾಗಿದೆ. ಒಲಿದವರಿಗೆ ಆರು ಎಲೆ, ಒಲಿಯದೆ ಇದ್ದವರಿಗೆ ಮೂರು ಎಲೆ ಮಾತು ಬಲ್ಲವರಿಗೆ ಅರಿವಾಣದ ತುಂಬ ಎಲೆಯನ್ನು ಪೂಜೆಗೆ ನೀಡಲಾಗುತ್ತದೆ. ಎಲೆ ಪೂಜೆಯ ನಂತರ ಹೂವಿನ ಪೂಜೆ ನಡೆಯುತ್ತದೆ. ನಂತರ ಕದಲಿಯ ಪೂಜೆ ನಡೆಯುತ್ತದೆ. ಅನಂತರ ಪೂಜೆಯನ್ನು ನೋಡಲು ತುಂಬಾ ಆಕರ್ಷಣೀಯವಾಗಿರುತ್ತದೆ. ಅಲ್ಲದೆ ಮಗ್ಗಿನ ಪೂಜೆ ಕೂಡ ಆ ವೇಳೆಯಲ್ಲಿಯೇ ನಡೆಯುತ್ತದೆ.

ಹುಟ್ಟುತುಟ್ಟುತ್ತಾ ಹರಬಿತ್ತ ದ್ಯಾವಮ್ಮ
ಬಟ್ಟಲು ಹಿಡಿದವಳೆ ಬಲಗೈಲಿ ಬೆಳ್ಳಿಯ
ಅಲಗ ಹಿಡಿದವಳೆ ಎಡಗೈಲಿ॥
ಒಡೆದು ಮೂಡ್ಯವಳೆ ಗುಡಿ ತುಂಬ ದ್ಯಾಮ್ಮ
ಒಡವೆ ಯಿಕ್ಕಮಳೆ ಮೈತುಂಬ। ದ್ವಾವಮ್ಮ
ಗುಡು ಗುಡು ಆಡ್ಯಾಳೆ ಗುಡಿ ತುಂಬಿ॥
ದ್ಯಾವಮ್ಮನ ಗುಡಿ ಮುಂದೆ ಗದಲಿಂಬೆ ಮರಹುಟ್ಟಿ।
ಕಳ್ಳರು ಕುಯ್ಯುವಾಗ ಕಸಿಗಾಯಿ। ದ್ಯಾವಮ್ಮ
ಗಂಡ ಕುಯ್ಯುವಾಗ ಗದಲಿಂಬೆ॥

ಗ್ರಾಮ ದೇವತೆಯು ಪ್ರತಿದಿನವೂ ಹುಟ್ಟುತ್ತಾಳೆ. ಗ್ರಾಮದೇವಿಗೆ ಪ್ರತಿದಿನ ಪೂಜೆ ಅಲಂಕಾರ ಮಾಡಲಾಗುತ್ತದೆ ಅಂದರೆ ಪ್ರತಿದಿನ ತುಂಬ ಆಕರ್ಷಣಿಯವಾಗಿ, ವೈವಿಧ್ಯಮಯವಾಗಿ ಕಾಣುತ್ತಾಳೆ. ದೇವಿಯು ಬಲಗೈಯಲ್ಲಿ ಬೆಳ್ಳಿಯ ಕುಂಕುಮ, ಅರಿಶಿನದ ಬಟ್ಟಲು ಹಿಡಿದಿದ್ದಾಳೆ. ಮತ್ತೊಂದು ಕೈಯಲ್ಲಿ ಕತ್ತಿಯನ್ನು ಹಿಡಿದು ದುಷ್ಟರ ಸಂಹಾರಕ್ಕಾಗಿ ಕಾದು ಕುಳಿತಿರುವಂತೆ ಭಾಸವಾಗುತ್ತದೆ . ಒಡವೆಯನ್ನು ಮೈತುಂಬ ಧರಿಸಿ, ಗುಡಿಯ ತುಂಬ ದೇವತೆಯೆ ಕಾಣುತ್ತಾಳೆ. ಈ ಗುಡಿಯ ಮುಂದೆ ಮರ ಇದೆ. ಇಲ್ಲಿ ಕಳ್ಳರು ಯಾರಾದರು ನಿಂಬೆಹಣ್ಣು ಕೇಳಲು ಬಂದರೆ ಅದು ಹೀಚು ಕಾಯಿಯಾಗುತ್ತದೆ. ಗ್ರಾಮದೇವತೆಯ ಗಂಡ ಕುಯ್ಯುವಾಗ ಮಾತ್ರ ಗಜಲಿಂಬೆಯಾಗುತ್ತದೆ. ಈ ಮರದ ಲಿಂಬೆ ಹಣ್ಣುಗಳು ಬಹಳವಾಗಿ ದಪ್ಪವಾಗಿದ್ದು ನೋಡಲು.ಕೂಡ ಸುದಂರವಾಗಿರುತ್ತದೆ

ಗಂಡಿಲ್ಲದೊಳಿಗ್ಯಾಕೆ ಗಂಧದ ಬಳೆಗಳು।
ಗಂಧದ ಬಾವೀಗುಡಿ ಮುಂದೆ। ದ್ಯಾವಮ್ಮ
ನಿನ್ನ ಗಂಡಿದ್ದರೆಷ್ಟೇ ಐಭೋಗ॥
ಅರಿಶಿನದ ಬಳೆಗಳು ಪುರುಷಿಲ್ಲದೊಳಿಗ್ಯಾಕೆ
ಅರಿಶಿನದ ಬಾವೀಗುಡಿ ಮುಂದೆ। ದ್ಯಾವಮ್ಮ
ನಿನ್ನ ಪುರುಷಿದ್ದರೆಷ್ಟೇ ಐಭೋಗ॥

ಈ ದೇವತೆಗೆ ಗಂಡ ಇಲ್ಲವೆಂದು ಪದ್ಯದಲ್ಲಿ ಸ್ಪಷ್ಟವಾಗಿ ತಿಳಿಸಿದ್ದು, ಅಂತಹವಳಿಗೆ ಗಂಧದ ಬಳೆಗಳು ಯಾಕೆ, ಗಂಧದ ಗುಡಿ ಯಾಕೆ ಎಂದು ಪ್ರಶ್ನಿಸಲಾಗಿದೆ. ವಿಧವೆಯಾದ ನಿನಗೆ ಏಕೆ ಇಷ್ಟು ವೈಭೋಗ, ಗಂಡನಿದ್ದರೆ ಇನ್ನೆಷ್ಟು ಅಲಂಕರಿಸಿಕೊಳ್ಳುತ್ತಿದ್ದೆ. ಅರಿಶಿನದ ಬಳೆಗಳು ನಿನಗೆ ಯಾಕೆ ಅರಿಶಿನದ ಗುಡಿಯಾಕೆ ಎಂದು ಈ ತ್ರಿಪದಿಗಳಲ್ಲಿ ಗ್ರಾಮ ದೇವತೆಯ ಕುರಿತು ನಾನಾ ಪ್ರಶ್ನೆಗಳು ನಮ್ಮೆದುರಿಗೆ ಬಂದು ನಿಲ್ಲುತ್ತದೆ.

ಮೂಗುತಿ ಮುಂಭಾರ ಎಣೆಗಂಟು ಹಿಂಭಾರ
ಸಣ್ಣಂಚಿನೋಲೆ ಕಿವಿಭಾರ। ದ್ಯಾವಮ್ಮ
ದೊಡ್ಡ ಗುಂಡಿನ ಸರ ಎದೆ ಭಾರ॥

ಹರಬಿತ್ತಿ ದ್ಯಾವಮಮ್ಮ ಹಾದಿಲಿ ಗುಂಡಿ ತೋಡಿ
ಹಾಡೀಕು ಯಾಳ್ತೆ ಅರನೀನ। ಶೀಗೆ ಕಾಯಿ
ದಾಳಿ ಹೋಗಿರುವ ಅವಳ ಮಗನಿಗೆ॥

ಪಿಲ್ಲಿಕಾ ಲೋಳೆ ಚೆಲ್ಲಿದ ನೆರೆಗ್ಯೋಳೆ
ಕಲ್ಲುಮ್ಯಾಲೆ ಕಾಲ ಬೆಳಗೋಳೆ। ದ್ಯಾವಮ್ಮನ
ಪಿಲ್ಲಿ ಸಾವಿರಕ್ಕೆ ಬೆಲೆಯಾದೋ॥

ಗ್ರಾಮದೇವತೆ ದ್ಯಾವಮ್ಮನ ಚಿತ್ರವನ್ನು ಸ್ಪಷ್ಟವಾಗಿ ಆಕರ್ಷಕವಾಗಿ ಜನಪದ ಕವಿ ಇಲ್ಲಿ ಚಿತ್ರಿಸಿದ್ದಾರೆ.

ಪ್ರತಿಯೊಂದು ಊರು, ಕೇರಿ, ನಾಡಿಗೆ ಒಂದೊಂದು ಗ್ರಾಮದೇವರು ಇರುವುದು . ಅದರಂತೆ ಕಬ್ಬತ್ತಿಯಲ್ಲಿ ದ್ಯಾವಮ್ಮ ಎಂಬ ಗ್ರಾಮದೇವತೆ ಇರುವಳು. ದ್ಯಾವಮ್ಮ ಮೂಗುತಿ, ಅಣೆಪಟ್ಟಿ, ಸಣ್ಣಂಚಿನ ಕಿವಿಓಲೆ, ದೊಡ್ಡ ಗುಂಡಿನ ಸರವನ್ನು ಧರಿಸಿದ್ದಾಳೆ, ಈಕೆ ದುಷ್ಟರನ್ನು ಸಂಹರಿಸಲು ಹೊರಡುವ ಸಂದರ್ಭದಲ್ಲಿ ತನ್ನ ಮಗನಿಗಾಗಿ ಅರಿಶಿನ, ಶೀಗೆಕಾಯಿ ಇತ್ಯಾದಿಗಳನ್ನ ಬಳಸಿ ಪೂಜೆಯನ್ನು ಭಕ್ತರಿಂದ ಪಡೆದಿದ್ದಾಳೆ. ಕಾಲಿಗೆ ಪಿಲ್ಲಿಯನ್ನು ಧರಿಸಿದ್ದಾಳೆ. ಸಿರಿಗೆಯ ಸೀರೆ ಉಟ್ಟು ಕಲ್ಲಿನಲ್ಲಿ ಒಡಮೂಡಿದ್ದಾಳೆ. ಅಂತೆಯೇ ಆಕೆಯ ಪಿಲ್ಲಿಯು ಸುಮಾರು ಹಣಕ್ಕೆ ಬೆಲೆಬಾಳುವಂತಹದ್ದು. ಈ ರೀತಿಯಾಗಿ ಗಂಡನಿಲ್ಲದ ದ್ಯಾವಮ್ಮ ಸಿಂಗರಿಸಿ ಕೊಂಡಿರುವುದನ್ನು ಪದ್ಯರೂಪದಲ್ಲಿ ವಿವರಿಸಲಾಗಿದೆ.

ಏರಿ ಮ್ಯಾಲೆ ನಿಂತ್ಕೊಂಡು ಯಾರನ್ನ ಕೂಗುತ್ತೀಯ
ದೂರ ಹೋಗ್ಯವನೆ ನಿನ್ನ ಮಗ। ಈರಣ್ಣ
ಪೂಜೆಗ್ದೊಂಬಾಳೆ ತರುವಾಗ॥

ಒಂದೇ ಹೊಂಬಾಳೆ ಒಪ್ಕೋಳೆ ದ್ಯಾವಮ್ಮ
ಮುಂದಕ್ಕೆ ನಿನ್ನ ಮಗ ದೊರೆಯಾಗಿ। ಬದುಕ್ಕಿದ್ದರೆ
ಹಿಂಡು ಹೊಂಬಾಳೆ ಬೆಳೆದಾನು॥

ತೋಟದಲ್ಲಿರುವ ನೀಟುಳ್ಳ ಹೊಂಬಾಳೆ
ಏಟೊತ್ತು ನಿನ್ನ ಅರಸೋದು। ಹೊಂಬಾಳೆ
ಗಂಡು ಹೊಂಬಾಳೆ ಗಮನಾದೋ।

ಹಿಂದು ಹೊಂಬಾಳೆ ಒದರ್ಯಾವೆ ದ್ಯಾವಮ್ಮ
ಚಂಡಿ ಕೂತವಳೆ ಹೊಳೆಯಲ್ಲಿ। ದ್ಯಾವಮ್ಮ
ಗೊಂಬೇಯ ಸೀರೆ ತರಹೇಳಿ॥

ಚಂದ್ರಗಿರಿ ಸೀರೆ ಚಂದವಲ್ಲವೆಂದು
ಚಂಡಿ ಕೂತವಳೆ ಹೊಳೆಯಲ್ಲಿ ದ್ಯಾವಮ್ಮ
ಗೊಂಬೆಯ ಸೀರೆ ತರಹೇಳಿ॥

ದೇವಿಯ ಪೂಜೆಗೆಂದು ಭಕ್ತ ಹೊಂಬಾಳೆಯನ್ನು ತರಲು ಹೋಗಿದ್ದಾನೆ. ಆದರೆ ತಾಯಿ ಹೊಂಬಾಳೆಗಾಗಿ ಕಾದು ನಿಂತಿದ್ದಾಳೆ. ಈಗ ಇರುವ ಒಂದು ಹೊಂಬಾಳೆಯನ್ನು ಒಪ್ಪಿಸಿಕೊ ತಾಯಿ ಎಂದು ಭಕ್ತ ಸಮೂಹ ಕಾದುನಿಂತಿದೆ. ಹೊಂಬಾಳೆಯು ಪೂಜೆಯಲ್ಲಿ ತುಂಬಾ ಮುಖ್ಯವಾದದ್ದು. ಅದು ವಿಜಯದ ಸಂಕೇತವಾಗಿದೆ ಮತ್ತು ಹೊಸ ಹುಟ್ಟು ಬೆಳವಣಿಗೆಯಾಗಿದೆ. ಅಂತಹ ಹೊಂಬಾಳೆಯನ್ನ ತಂದ ಮೇಲೆ ಸಂಪೂರ್ಣವಾಗಿ ಅದರಿಂದಲೇ ಸಿಂಗರಿಸುವುದಾಗಿ ಹೇಳುತ್ತಾರೆ. ಹತ್ತಿರದ ತೋಟದಲ್ಲಿ ಇರುವ ಹೊಂಬಾಳೆಯನ್ನು ಒಪ್ಪಿಸಿಕೋ ತಾಯಿ ಎಂದು ಹೇಳುತ್ತಾ ಹಠ ಹಿಡಿದು ಕೂತ ತಾಯಿಗೆ ಹರಕೆ ಹೊತ್ತು ಗೊಂಬೆಯ ಚಿತ್ತಾರವಿರುವ ಸೀರೆ ಕೊಡುವುದಾಗಿ ಹೇಳಿದಾಗ ಚಂದ್ರಗಿರಿಯ ಸೀರೆ ಚಂದವಲ್ಲವೆಂದು ಮತ್ತೆ ಹಠ ಹಿಡಿಯುತ್ತಾಳೆ. ಹೊಳೆಯಲ್ಲಿಯೇ ಕೂತಿದ್ದಾಳೆ ಗೊಂಬೆಯ ಚಿತ್ತಾರದ ಸೀರೆ ಬೇಕೆಂದು ದ್ಯಾವಮ್ಮ ಹಟಹಿಡಿಯುವುದು ಇಲ್ಲಿನ ವಿಶೇಷವಾದರು ತನಗಿಷ್ಟವಾದದ್ದನ್ನೆ ಬಯಸುವ ಬಯಕೆ ಆಕೆಯದಾಗಿರುತ್ತದೆ.

ಗೊಂಬೆಯ ಸೀರೆ ಅಂಚ ತಂದೀವಿ ದ್ಯಾವಮ್ಮ
ಕಾಗೊಡು ಕರದು ಮುಸಕೀಡು। ದ್ಯಾವಮ್ಮ
ಒಪ್ಪೀಸಿ ಕೊಳ್ಳೇ ಚೆಂದದಲಿ॥

ಅಷ್ಟು ಹೊತ್ತಿಗೆ ಭಕ್ತನು ಬಂದು ದೇವಿಗೆ ಸೀರೆಯನ್ನು ಒಪ್ಪಿಸುತ್ತಾನೆ. ಓಗೊಟ್ಟು ಬಂದು ಸೀರೆಯನ್ನು ತೊಟ್ಟು ಒಪ್ಪಿಸಿಕೊ ತಾಯಿ ಮುನಿಸಿನಿಂದ ಹೊರ ಬಾ ಎಂದು ಸೀರೆಯನ್ನು ಒಪ್ಪಿಸುತ್ತಾರೆ.

ಅಕ್ಕ ದ್ಯಾವಮ್ಮ ಹಾಲಿಲ್ದೆ ಊಣಲೊಲ್ಲೆ
ಹಾರುವರಕೇರಿ ಒಳಗೆಲ್ಲ। ದ್ಯಾವಮ್ಮ
ಹಾಲಿಗೇ ಹಸುವ ಹುಡಿಕ್ಸವರೆ॥

ತಾಯಿ ದ್ಯಾವಮ್ಮ ತುಪ್ಪಲ್ದೆ ಉಣಲೊಲ್ಲೆ
ಉತ್ತಮರಕೇರಿ ಒಳಗೆಲ್ಲ। ದ್ಯಾವಮ್ಮ
ತುಪ್ಪಕ್ಕೆ ಹಸುವ ಹುಡಿಕ್ಸಾಳೆ॥

ಹಾಲಿಲ್ಲದಿದ್ದರೆ ಹಾಲು ನಾವು ಕೊಟ್ಟೇವು
ಗುರುತಿಟ್ಟು ಬಗೆಯೋ ಮಡಿವಾಳಿ। ದ್ಯಾವಮ್ಮ
ಮೂಡಲಾಗೈತೆ ಗೊಜಿಗೊಂಡೆ॥

ತಾಯಿಗೆ ನೈವೇದ್ಯವು ಹಾಲಿಲ್ಲದಿದ್ದರೆ ಆಗವುದಿಲ್ಲ. ಆದ್ದರಿಂದಾಗಿ ಬ್ರಾಹ್ಮಣರು, ದಾಸರೂ ಕೇರಿಗಳಲ್ಲಿ ಹಸುವನ್ನು ಹುಡುಕಿಸಿದ್ದಾಳೆ. ಅಷ್ಟೇ ಅಲ್ಲದೆ ತುಪ್ಪ ಕೂಡ ಇಲ್ಲದೆ ಆಕೆ ಊಟ

ಮಾಡುವುದಿಲ್ಲ. ಅದಕ್ಕಾಗಿ ಉತ್ತಮರ ಕೇರಿಯಲ್ಲಿ ಹಸುವನ್ನು ಹುಡುಕಿ ಹಾಲು, ತುಪ್ಪವನ್ನು ಪಡೆಯಲಾಗಿದೆ. ದೇವಿಯ ಸೀರೆಯನ್ನು ಮಡಿವಾಳನಿಗೆ ಕೊಟ್ಟು ಎಚ್ಚರಿಕೆಯಿಂದ ತೊಳೆಯಬೇಕು ಎಂದು ಹೇಳುತ್ತಾರೆ.

ಕೆರೆಯ ನೀರಿಗೆ ತೆಳ್ಳನೆ ಕಲ್ಲಿಗೆ
ಹಾರಾಡಿ ಕಾಯೋ ಬಿಸಲಿಗೆ। ದ್ಯಾವಮ್ಮ
ನಿನ್ನ ಸಾಲಿಯ ಸೀರೆ ಮಡಿಯಾದೋ॥
ಮಲ್ಲಿಗೂವಿನಲ್ಲಿ ಮಡಿಯಾದೋ ಆ ಸೀರೆ
ಸಂಪಿಗೂವಿನಲ್ಲಿ ಗಮನಾದೋ। ಆ ಸೀರೆ
ತಾಳೆ ಹೂವಿನಲ್ಲಿ ಮಳಿಗಾದೋ ಆ ಸೀರೆ
ನಲ್ಲಿ ಮರದಡಿ ನರಿಗಾದೋ। ಬಣ್ಣಾವ
ನಲ್ಲೆ ದ್ಯಾವಮ್ಮ ಬಡಬ್ಯಾರೆ॥

ಮಡಿವಾಳನು ಕೆರೆಯ ನೀರಿನಲ್ಲಿರುವ ತೆಳ್ಳನೆಯ ಕಲ್ಲಿಗೆ ಹರಡಿ ಒಗೆದು ಬಿಸಿಲಿಗೆ ಒಣ ಹಾಕಿದ್ದಾನೆ. ಮಡಿವಾಳನು ಸೀರೆಯನ್ನು ಸ್ವಚ್ಛಂದವಾಗಿ ಮಡಿ ಮಾಡಿದ್ದಾನೆ. ಮಲ್ಲಿಗೆ ಹೂವಿನಂತೆ ಮಡಿಮಾಡಲಾಗಿದೆ. ಸಂಪಿಗೆ ಹೂ ನಂತೆ ಗಮಗಮ ವಾಸನೆ ಆಹ್ಲಾದಕರವಾಗಿರುತ್ತದೆ. ತಾಳೆ ಹೂವಿನಂತೆ ತಳತಳಿಸುತ್ತಿದೆ. ಅಂತಹ ಸೀರೆಯಲ್ಲಿ ಮರದ ಅಡಿಯಲ್ಲಿರುವ ಪ್ರೀತಿಯ ದ್ಯಾವಮ್ಮನಿಗೆ ಉಡಿಸಲಾಗಿದೆ. ಇದರಿಂದ ದ್ಯಾವಮ್ಮ ಸಂತೃಪ್ತಳಾಗುತ್ತಾಳೆಂಬ ನಂಬಿಕೆ ಭಕ್ತರದು.

ನರಸೀಪುರದಲ್ಲಿ ಬರೆಸ್ಯಾರೆ ಬಣ್ಣಾವ
ಅರಸಿ ದ್ಯಾವಮ್ಮ ಹೆಸರೀನ। ಸೆರಗೀಗೆ
ನಿಲ್ಲಿಸ್ಯಾರೆ ನೀಲಿ ಕುದುರೆಯ॥
ಸೀರೆ ಚಿಕ್ಕದು ಸೆರಗಲ್ಲಿ ಗಿಣಿರಾಮ
ಸೆರೆಗಿದೆ ಕೊಟ್ಟವರೆ ಹಿಡಿಹೊನ್ನು। ದ್ಯಾವಮ್ಮ
ನೀನುಟ್ಟು ದೊಡ್ಡವರ ಮಗಳಾದೆ।
ಕಂದು ಕನ್ನಾಂಬಾಡಿ ಬಿಳಿದು ಬೆಂಗಳೂರು
ಸೆರಗೇ ಸೇರೇ ವದಗಜ ಸೀತೆ। ದ್ಯಾವಮ್ಮ
ಸೆರಗಿಗೆ ಕೊಟ್ಟವರೆ ಹಿಡಿ ಹೊನ್ನು॥

ದ್ಯಾವಮ್ಮ ಉಟ್ಟಸೀರೆಗೆ ನರಸೀಪುರದಲ್ಲಿ ಬಣ್ಣವನ್ನು ಹಾಕಿಸಿದ್ದಾರೆ. ಆಸೆ ಪಟ್ಟು ಆ ಸೀರೆಯ ಸೆರಗಿಗೆ ನೀಲಿ ಕುದುರೆಯ ಚಿತ್ರವನ್ನು ಹಾಕಿಸಲಾಗಿದೆ. ಸೀರೆ ಚಿಕ್ಕದಾಗಿದ್ದರೂ ಕೂಡ ಸೆರಗಿಗೆ ಗಿಣಿರಾಮನ ಚಿತ್ರ ಬರೆಯಲಾಗಿದೆ. ಇದಕ್ಕೆ ಹಿಡಿ ಬಂಗಾರವನ್ನು ಕೊಡಲಾಗಿದೆ. ಅಂತಹ ಸೀರೆಯುಟ್ಟು ಈ ತಾಯಿ ಶ್ರೀಮಂತರ ಮನೆಮಗಳಂತೆ ಕಾಣುತ್ತಿದ್ದಾಳೆ. ಸೀರೆಯ ಬಣ್ಣವನ್ನು ಬೇರೆ ಬೇರೆ ಕಡೆಯಿಂದ ತರಿಸಲಾಗಿದೆ. ಕನ್ನಂಬಾಡಿಯಿಂದ ಕಂದು ಬಣ್ಣ, ಬೆಂಗಳೂರಿನಿಂದ

ಬಿಳಿ ಬಣ್ಣ ತರಿಸಿ ಹಾಕಲಾಗಿದೆ. ಸೆರಗಿಗೆ ಮದಗಜಗಳ ಚಿತ್ರವಿದೆ. ಇಂತಹ ಸೀರೆಗೆ ಹಿಡಿ ಬಂಗಾರವನ್ನು ಕೊಟ್ಟು ತರಿಸಲಾಗಿದೆ.

ಹೆಣ್ಣು ಹುಟ್ಟಿದರೆ ಹೆಚ್ಚಾಳ ದ್ಯಾವಮ್ಮಗೆ
ಚಿನ್ನದ ಕಡತ ತೊಡೆಯ್ಯಾಲೇ। ಇಟ್ಟುಕೊಂಡು
ಹೆಣ್ಣು ಮಕ್ಕಳಿಗೆ ಪತ್ರ ಬರೆದಾಳಿ॥

ಸೀಗೆ ಗುಡ್ಡದ ಮೇಲೆ ಮೇಲೆ ಸಿರಿಗಂಧದ ಮರ ಹುಟ್ಟಿ
ಹರಿಹರಕೆ ಬೇರು ಹರಿದಾವು। ದ್ಯಾವಮ್ಮ
ನಿನ್ನ ಗೊಜಗೊಂಡಕ್ಕೆ ಮೊಗ್ಗು ಸುರಿದಾವು॥

ಬಾಳೆ ಪಟ್ಟಿಯ ಸೀರೆ ಬಾಚಿ ಕಟ್ಟಿದ ಮಂದೆ
ಬಾಗಲ ಬಿಡೇ ದೊರೆದೇವಿ। ನಿನ್ನ ಮಗ
ಬಾಲಣ್ಣ ಪೂಜೆಗೆ ಬರುತಾನೆ॥

ಹಸುರು ಪಟ್ಟದ ಸೀರೆ ಹಸನಾದ ಬಕುತಾಲೆ
ಹೊಸಲನ್ನು ಬಿಡೆ ದೊರೆದೇವಿ। ನಿನಮಗ
ಹಸುಳೆ ಪೂಜೆಗೆ ಬರುತಾನೆ॥

ತನ್ನ ಭಕ್ತರಿಗೆ ಹೆಣ್ಣು ಹುಟ್ಟಿದರೆ ಚಿನ್ನವನ್ನು ದೇವಿಗೆ ಅರ್ಪಿಸುತ್ತಾರೆ. ಅವಳ ಶರೀರದ ಮೇಲೆ ಚಿನ್ನದ ಸುರಿಮಳೆಯೇ ಆಗುತ್ತದೆ. ಸೀಗೆಗುಡ್ಡದ ಮೇಲೆ ಶ್ರೀಗಂಧದ ಮರ ಹುಟ್ಟಿದೆ. ಅದರ ಬೇರುಗಳು ಹರಿಹರದವರೆಗೂ ಹಬ್ಬಿದೆ. ಅಂತೆಯೇ ಆ ತಾಯಿಯ ಪಾದಕ್ಕೆ ಹೂವಿನ ಮೊಗ್ಗು ಸುರಿಸಲಾಗಿದೆ. ದೇವಿಯ ಗುಡಿಯ ಬಾಗಿಲಿಗೆ ಬಾಳೆಯ ಪಟ್ಟಿಯನ್ನು ಕಟ್ಟಲಾಗಿದೆ. ಯಾರೂ ಒಳಗೆ ಪ್ರವೇಶಿಸದಂತೆ ನಿರ್ಬಂಧಿಸಲಾಗಿದೆ. ಬಾಲಣ್ಣನನ್ನು ಒಳ ಬಿಟ್ಟರೆ ನಿನ್ನ ಪೂಜೆಗೆ ಅಣಿಯಾಗುತ್ತದೆ ಎನ್ನಲಾಗಿದೆ. ಹಸಿರು ಸೀರೆಯುಟ್ಟು ಬೈತಲೆ ತೆಗೆದು ತಲೆ ಬಾಚಿ ಹೊಸಲಿನ ಮೇಲೆ ದಾರಿ ಬಿಡದೆ ಕುಳಿತಿದ್ದಾಳೆ. ನಿನ್ನ ಮಗ ನೀನು ಹರಸಿ ಕೊಟ್ಟ ಮಗ ಪೂಜೆಗೆ ಬಂದಿದ್ದಾನೆ ದಾರಿ ಬಿಡು ಎಂದು ಭಕ್ತರು ಬೇಡುತ್ತಿದ್ದಾರೆ ಇದೇ ಈ ಹಾಡೋಳಗೆ ಇರುವ ಅಂಶ.

ಬಾಯಿ ಬೀಗದೊರು ಬಂದು ಬಾಗಿಲಲಿ ನಿಂದವರೆ
ತಾಯಿ ದ್ಯಾವಮ್ಮ ಒಳಗಿಲ್ಲ ಬಂದವರೆ
ಎಟ್ಟೋತ್ತ ನಿನಗೆ ಸುಖನಿದ್ರೆ

ತಾನಕೆ ಬಂದು ಹೊರಗವರೆ ದ್ಯಾವಮ್ಮ
ಏಳವ್ವಗದಿಗೇ ಮ್ಯಾಲಿಂದ। ದ್ಯಾವಮ್ಮ
ದೀವಿಗೆ ತುಪ್ಪ ಎರೆದೇವು॥

ಬಾಯಿ ಬೀಗದವರು ಬಂದು ಬಾಗಿಲಲ್ಲಿ ನಿಂತಿದ್ದಾರೆ. ತಾಯಿ ದ್ಯಾವಮ್ಮ ಗುಡಿಯ ಒಳಗೆ ಕೂತಿದ್ದಾಳೆ ಅಲ್ಲದೆ ಭಕ್ತರು ಬಂದು ಹೊರಗೆ ಕಾದುಕುಳಿತಿದ್ದಾರೆ. ನಿದ್ರೆಯಿಂದ ಏಳು, ನಿನಗೆ ತುಪ್ಪದ ದೀಪವನ್ನು ಹಚ್ಚುತ್ತೇವೆ. ಅಂತ ಹರಕೆಯನ್ನು ಭಕ್ತರು ಮಾಡಿಕೊಂಡಿದ್ದಾರೆ.

ದ್ಯಾವಮ್ನ ಮ್ಯಾಗಳ ಮಾಲೆಯ ನಮಗೊಂದು
ನಾಮದ ಬೇಡಿ ಮಗಳಾದೋ। ತೊಳಸೀಯ
ತೇರುತಾ ಬೇಡಿ ಮಗಳಾದೋ॥

ಕರಿಯಂಚಿನ ಸೀರೆ ಕಣಗಾಲಿಗರಿಸಿನ
ಕೆಣಕಿದವಳು ಕಿಡಿಗಣ್ಣಿ। ದ್ಯಾವಮ್ಮ
ಮಲೆತರೆ ಮನೆಯ ಮುರಿದಾಳೆ॥

ದ್ಯಾವಮ್ಮನನ್ನು ಬೇಡಿದ ಮೇಲೆ ನಮಗೆ ಮಗಳು ಹುಟ್ಟಿದ್ದಾಳೆ. ಆಕೆಗೆ ನಿನ್ನ ಹೆಸರನ್ನು ಇಟ್ಟು ತುಳಸಿಯ ತೇರನ್ನು ಕೊಡುವುದಾಗಿ ಹೇಳುತ್ತಾರೆ. ಕರಿಯಂಚಿನ ಸೀರೆ ಧರಿಸಿರುವ ಈ ತಾಯಿ ಕೊಟ್ಟವರಿಗೆ ಕಿಡಿಕಾರುವವಳು. ಮರೆತರೆ ಅವರ ಸರ್ವನಾಶವೇ ಆಗುತ್ತದೆ. ಅಂತಹ ಶಕ್ತಿಯನ್ನು ಉಳ್ಳವಳು ಈ ತಾಯಿ.

ಹತ್ತಿಯ ಮರಕ್ಕೆ ಹತ್ಯೋಗೊ ಸರ್ಪವ
ನೆತ್ತಿಯ ಹಿಡಿದು ಬಡಿಚಾಳೆ। ದ್ಯಾಮಮ್ಮ
ಸತ್ಯ ತೋರ್‍ಯಾಳೆ ಜನರಿಗೆ।

ಆಲದ ಮರಕ್ಕೆ ಏರೋಗೊ ಸರ್ಪವ
ಬಾಲದ ಹಿಡಿದು ಬಡಿದಾಳೆ। ದ್ಯಾಮಮ್ಮ
ನಿಷ್ಠೆ ತೊಯಾರ್‍ಯಳೆ ಜನರಿಗೆ॥

ಜಾನಪದದ ನುಡಿಯಲ್ಲಿ ಒಂದು ವಿಶೇಷವಾದ ಸೊಬಗು ಇದೆ. ಗ್ರಾಂಥಿಕ ಭಾಷೆಗೆ ಆ ಸೊಬಗು ಎಂದಿಗೂ ಬಾರದು, ಗ್ರಾಮದೇವತೆಯ ಶಕ್ತಿಯನ್ನು ವರ್ಣಿಸುವ ಹಾಡು ಹೀಗಿದೆ. ಹತ್ತಿಯ ಮರಕ್ಕೆ ಹತ್ತುತ್ತಿರುವ ವಿಷಸರ್ಪವನ್ನು ಅದರ ತಲೆಯ ಭಾಗವನ್ನು ಹಿಡಿದು ನೆಲಕ್ಕೆ ಬಡಿದು ಸಾಯಿಸಿ ತನ್ನ ಶಕ್ತಿ ಮತ್ತು ಸತ್ಯದ ಪ್ರದರ್ಶನವನ್ನು ತೋರಿಸಿದ್ದಾಳೆ. ನಂತರದಲ್ಲಿ ಬಾಲವನ್ನು ಹಿಡಿದು ತಿರುಗಿಸಿ ಆಲದ ಮರಕ್ಕೆ ಹತ್ತಿದ ಸರ್ಪವನ್ನು ಕೂಡ ಬಡಿದು ಹಾಕಿದ್ದಾಳೆ. ತನ್ನ ಭಕ್ತರನ್ನ ಕಾಪಾಡುವುದರ ಮೂಲಕ ನಿಷ್ಠೆಯನ್ನು ಜನರಿಗೆ ತೋರಿಸಿಕೊಂಡಿದ್ದಾಳೆ.

ಶಿವರಾಯನ ಹಾಡು

ಶಿವರಾಯನ ಹಾಡಿನಲ್ಲಿ ತಾತ್ವಿಕ ವಿಚಾರಧಾರೆಗಳ ಅಂಶಗಳನ್ನು ಅಡಕಗೊಳಿಸಲಾಗಿದೆ. ಪ್ರದಾನವಾಗಿ ಗಂಗೆ–ಗೌರಿ–ಶಿವ ಇವರ ಬಗ್ಗೆ ಸರಸ, ವಿರಸ, ಸಿಟ್ಟು, ಹಟ ಹೀಗೆ ದೈವ ಸಂಬಂದದ ವಿಚಾರಗಳು ಈ ಹಾಡಿನಲ್ಲಿ ವ್ಯಕ್ತವಾಗುತ್ತದೆ.

ಆಕೆಯ ತರ ಹೋಗಿ ಲೋಕವ ಹುಡುಕಿದ
ಆಕೆ ಗೌರಮ್ಮನ ತರಹೋಗಿ। ಶಿವರಾಯ
ಬಾಳೆಯ ಮರವ ಒರಗಿದ॥

ಬಾಲೆಯ ತರ ಹೋಗಿ ಭೂಲೋಕ ಹುಡುಕಿದ।

ಬಾಲೆ ಗಂಗಮ್ಮನ ತರ ಹೋಗಿ। ಶಿವರಾಯ
ದಾಳಿಂಬಿ ಮರದ ಒರಗಿದ॥

ಆರಂಭದಲ್ಲಿ ಶಿವರಾಯನು ಗಂಗೆ-ಗೌರಿಯರನ್ನು ಹುಡುಕಲು ಹೋಗಿ ಬಸವಳಿದ ಪ್ರಸಂಗ ಏದೆ. ಗೌರಮ್ಮನನ್ನು ಇಡೀ ಲೋಕವೆಲ್ಲ ಹುಡುಕಿದ. ಶಿವನು ಸೋತು ಸೊರಗಿ ಬಾಳೆಯ ತೋಟದ ನೆರಳಲ್ಲಿ ಬಾಳೆಯ ಗಿಡಕ್ಕೆ ಒರಗಿ ಕೂರುತ್ತಾನೆ. ಬಾಲೆಯಾದ ಗಂಗಮ್ಮನನ್ನು ಭೂಲೋಕವೆಲ್ಲ ಹುಡುಕುತ್ತಾನೆ. ಎಲ್ಲೂ ಸಿಗದೆ ಸೋತು ತನ್ನ ದಣಿವನ್ನು ಆರಿಸಿಕೊಳ್ಳಲು ದಾಳಿಂಬೆಯ ಮರವನ್ನು ಒರಗಿ ಕೂರುತ್ತಾನೆ.

ಯಾಕೊಲ್ಲೆನೆಂದಿ ನಾಲ್ಕೈದು ಜಡೆಯೋರ
ಲೋಕನೆಲ್ಲಾ ಸಲವೊ ಶಿವರಾಯ। ಸ್ವಾಮಿಯ
ಯಾಕೊಲ್ಲೆ ಮುದ್ದು ಗೌರಮ್ಮ॥

ಹತ್ತು ವರುಷದಲ್ಲಿ ಚಿಕ್ಕ ಪ್ರಾಯದಲ್ಲಿ
ನಾನು ಸಿಕ್ಕಿದೆ ಶಿವರಾಯನ। ಬಲಗೈಲಿ
ಆರು ವರುಷದಲ್ಲಿ ಕೋರಿ ಪ್ರಾಯದಲ್ಲಿ
ನಾನು ಸೇರಿದೆ ಶಿವರಾಯ। ಬಲಗೈಲಿ

ಗೌರಮ್ಮಳು ನಾಲ್ಕೈದು ಜಡೆಯನ್ನು ಇರುವ ಶಿವರಾಯನನ್ನು ಬೇಡವೆಂದು ತಿರಸ್ಕರಿಸಿದ್ದಾಳೆ. ಲೋಕದಲ್ಲಿ ಇರುವವರೆಲ್ಲರನ್ನು ಸಲಹುವನು. ಇಂತ ಸ್ವಾಮಿಯನ್ನು ಆಕೆ ಬೇಡಬೇಡವೆಂದು ದೂಡಿದ್ದಾಳೆ. ಈ ಮುದ್ದು ಗೌರಮ್ಮ. ಹತ್ತು ವರ್ಷದ ಪ್ರಾಯದವಳಾಗಿದ್ದ ಗೌರಮ್ಮ ಶಿವರಾಯನ ಬಲಗೈಯನ್ನು ಹಿಡಿದರೆ, ಆರು ವರ್ಷದ ಪ್ರಾಯದವಳಾಗಿದ್ದಾಗ ಗಂಗೆಯು ಶಿವನ ಕೈ ಹಿಡಿದಳು.

ಒಬಣ್ಣ ಮಲ್ಲಿಗೆ ಒಬ್ಬಣ್ಣ ಸಂಪಿಗೆ
ಒಬ್ಬಣ್ಣ ಚನ್ನಬಸವಯ್ಯ ಮೂರು ಮಂದಿ
ಕೊಟ್ಟರು ಗೌರಿಯ ಶಿವರಾಯಗೆ॥

ಪನ್ನಂಗದರಸೆ ಮನೆಗೆಂದ ಮಂಚಕ್ಕೆ
ಇನ್ನೊಂದ ಹೆಣ್ಣ ತರುತೀನಿ। ನಾನೀಗ
ಇನ್ನೊಂದು ಹೆಣ್ಣ ತರುತೀನಿ

ತಂದರು ತರು ಹೋಗಿ ಜೋತಿ ಎಲ್ಲಿಗೆ ಹೂವ
ನಾ ಮುಡಿದು ನನ್ನ ಶಿರ ಮುಡಿದು। ಮಿಕ್ಕ ಹೂವ
ಯಾವ ಬಾಲ್ಯಾರೂ ಮುಡಿಲೇಳಿ॥

ಬಂದಾರ ಬರ ಹೇಳಿ ಎಂದಿನಂತಿದು ವೋನ
ಮುಂದಲರಮನೆ ಎರಡು ಬಾಗಿಲ ಮಾಡಿ
ಬಂದಂತ ಬಾಲೆ ಮಡಬಾನ॥

ಮನಗಿದ್ದ ಮಡದಿಯ ಭುಜವತೊಟ್ಟೆಬ್ಬರಿಸಿ
ಕಂಡೇನೆ ಗೌರಿ ಸ್ವಪ್ನಾವ। ಮೂಗಂಡುಗ
ತಿಳಿದೇಳಿ ಶಿವನೇ ಸ್ವಪುನಾವ॥

ಗೌರಿಯ ಅಣ್ಣಂದಿರು ಮೂರು ಜನ. ಒಬ್ಬಣ್ಣ ಮಲ್ಲಿಗೆ, ಇನ್ನೊಬ್ಬ ಸಂಪಿಗೆ, ಮತ್ತೊಬ್ಬ ಚನ್ನ ಬಸವಯ್ಯ. ಈ ಮೂವರು ಸೇರಿ ಗೌರಿಯನ್ನು ಶಿವರಾಯನಿಗೆ ಕೊಟ್ಟು ಮದುವೆ ಮಾಡಿದ್ದಾರೆ. ಶಿವನು ಗೌರಿಗೆ ತನ್ನ ಮನಸ್ಸಿನ ಅರಸಿಯೇ ಮಂಚದ ಮೇಲೆ ನೀನು ಮಲಗು ನಿನ್ನ ಮತ್ತು ನನ್ನ ಸಹಾಯಕ್ಕೆ ಮತ್ತೊಂದು ಹೆಣ್ಣನ್ನು ತಾನು ಮದುವೆಯಾಗುತ್ತೇನೆ ಅಂತ ಹೇಳುತ್ತಾನೆ. ಅದಕ್ಕೆ ಗೌರಿಯು, 'ತಂದರೆ ತಾ ಜೊತೆಯಲ್ಲಿ'ಯೆ ಆಕೆಯನ್ನು ಇಟ್ಟುಕೊ. ನಾನು ಮುಡಿದ ಮಲ್ಲಿಗೆಯನ್ನು ಆಕೆಯೂ ಮುಡಿಯಲಿ. ಬೇರೆ ಹೆಣ್ಣುಗಳೂ ಕೂಡ ಮುಡಿಯಲ್ಲಿ ಎಂದು ಹೇಳುತ್ತಾಳೆ. ಕರೆದುಕೊಂಡು ಬನ್ನಿ. ಈಗ ಹೇಗೆ ಸುಖವಾಗಿದ್ದೀವೋ ಹಾಗೆಯೇ ಮುಂದೆ ಕೂಡ ಇರೋಣ. ಮುಂದಿರುವ ಅರಮನೆಗೆ ಮತ್ತೊಂದು ಬಾಗಿಲು ಮಾಡಿ ಅಲ್ಲಿ ಆಕೆಯನ್ನು ಇರಿಸೋಣ ಎಂದು ಹೇಳುತ್ತಾಳೆ. ಇಷ್ಟೇಲ್ಲ ನಡೆಯುವುದು ಆಕೆಯ (ಗೌರಿಯ) ಕನಸಿನಲ್ಲಿ. ಶಿವನು ಬಂದು ಮಲಗಿದ್ದ ಗೌರಿಯ ಭುಜವನ್ನು ತಟ್ಟಿ ಏಳಿಸುತ್ತಾನೆ. ಮುಂದೆ ನಡೆಯಬಹುದಾಗಿದ್ದಂತಹದನ್ನು ಗೌರಿಯು ಸ್ವಪ್ನಕಂಡೆನೆ ಎಂದು ಶಿವನನ್ನು ಕೇಳುತ್ತಾಳೆ.

ಲಿಂಗ ಬರುವುದು ಕಂಡೆ ನಂದಿ ಏರೂದು ಕಂಡೆ
ನಂದಿಯ ಹಿಂದೆ ತೆರೆಯುಕ್ಕಿ ಬರುವುದು
ಕಂಡೆಕನೆ ಗೌರಿ ಸ್ವಪುನವಾ॥

ಲಿಂಗನೆಂಬುದು ಶಿವನು ಬಸವ ಎಂಬುದು ನಂದಿ
ನಂದಿಯ ಹಿಂದೆ ತೆರೆಯಿಕ್ಕಿ। ಬರುವೋಳು
ಗಂಗ್ಯಮ್ಮನಲ್ವೆ ನಿಮ್ಮ ಮಡದಿ॥

ಇಟ್ಟವರೆ ಈಬೂತಿ ತೊಟ್ಟವರೆ ರುದ್ರಾಕ್ಷಿ
ಹೊನ್ನೆ ಜೋಳಿಗೆ ಹೆಗಲೇರಿ। ಶಿವರಾಯ
ಮನೆಜೋಕೆ ಗೌರಿ ಮಠ ಜೋಕೆ॥

ಮನಗಿದ ಮಗನ ಭುಜವ ತಟ್ಟೆಬ್ಬರಿಸಿ
ಕಂಡೇನೊ ಕಂದ ಸ್ವಪ್ನವ। ಮೂಗಂಡುಗ
ತಿಳಿದೇಳ ತಾಯಿ ಸ್ವಪ್ನವಾ॥

ಮಲಗಿದಾಗ ಕನಸಿನಲ್ಲಿ ಏನೆಲ್ಲ ಕಂಡೆ ಎಂದು ಮಗನನ್ನು ಏದ್ದೇಳಿಸಿ ತಾಯಿ ಹೇಳುತ್ತಾಳೆ. ಲಿಂಗ ಬರುವುದ ಕಂಡೆ, ನಂದಿ ಹತ್ತುವುದು ಕಂಡೆ, ಆತನ ಹಿಂದೆ ತೆರೆ ಬರುವುದನ್ನು ಕಂಡೆ ಎಂದು ಹೇಳುತ್ತಾಳೆ. ಲಿಂಗವೆಂದರೆ ಶಿವನು, ಬಸವನೆಂದರೆ ನಂದಿ, ನಂದಿಯ ಹಿಂದಿನ ತೆರೆ ಎಂದರೆ ಗಂಗೆ ಎಂದು ವಿವರ ವಿವರವಾಗಿ ಭುಜತಟ್ಟಿ ಎಬ್ಬಿಸಿ ಮಗನಿಗೆ ಕಂಡ ಕನಸ್ಸನ್ನು

ಹೇಳುತ್ತಾಳೆ. ಆಕೆಯು ತನ್ನ ಸವತಿ ಕೂಡ ಆಗಿದ್ದಾಳೆ ಎನ್ನುತ್ತಾಳೆ.

ಗಂಗಮ್ಮನಲ್ವೆ ನಿನ್ನ ಸವತಿ ತಾಯಮ್ಮ
ಹೋಗೆ ಗೆಣಕಾತಿ ಅರಮನೆಗೆ। ಅಮ್ಮಯ್ಯ
ಹೋಗೆ ಗೆಣೆಕಾತಿ ಅರಮನೆಗೆ॥

ಎಂದೂ ಬರದ ಗೌರು ಯಾಕವ್ವ ಬಂದವಳೆ
ಕುಂಡ್ರುಕ್ಕೆ ಹಾಕ್ಯವಳೆ ಸಣ್ಣ ಮಂಚ॥

ಕೂರೋದು ನಾವಲ್ಲ ನಿಲ್ಲೋರು ನಾವಲ್ಲ
ಕಂಡ್ಯಗೆಣಕಾತಿ ಸವನಾವ॥

ಗೌರಿಯು ತನಗೆ ಕನಸಿನಲ್ಲಿ ಆದ ತಳಮಳವನ್ನು ಈಗ ಗೆಳತಿಯಲ್ಲಿ ಕೂಡ ಹೇಳುತ್ತಾಳೆ. ಅದಕ್ಕೆ ಅವಳು ಗಂಗಮ್ಮ ನಿನ್ನ ಸವತಿ ಬಂದಿದ್ದಾಳೆ. ಅರಮನೆಗೆ ಹೋಗಿ ನೋಡು. ಎಂದೂ ಬರದೇ ಇದ್ದ ಗೌರಿ ಇಂದು ಬಂದಳೆಂದು ಗೆಳತಿಯು ಕೂರಲು ಸಣ್ಣ ಮಂಚವನ್ನು ಹಾಕುತ್ತಾಳೆ. ಗೌರಿಯು ತಾಳ್ಮೆ ಇಲ್ಲದೆ ಕೂರಲೂ ಆಗದೆ ನಿಲ್ಲಲೂ ಆಗದೆ ಕನಸು ಕಂಡೆ ನಾನು, ನೀನು ಹಾಗೆಯೇ ಕಂಡೆಯ ಎಂದು ಕೇಳುತ್ತಾಳೆ. ಲಿಂಗ ಬರುವುದ ಕಂಡೆ ನಂದಿ ಬರುವುದ ಕಂಡೆ. ಆತನ ಹಿಂದೆ ಗಂಗೆ ಬರುವುದು ಕಂಡೆ ಎಂದು ವಿವರಿಸುತ್ತಾಳೆ.

ಪುಟ್ಟ ಜೋಳಿಗೆ ಹೆಗಲಿಗೆ ಹಾಕ್ಕೊಂಡು
ಜಂಗಮ ವೇಷವ ತಾಳ್ಯಾರೆ। ಶಿವರಾಯ
ಮುಂದು ಮುಂದಳೆ ನಡೆದಾರೆ॥

ಮುಂದುವರೆದು ಪುಟ್ಟ ಜೋಳಿಗೆಯನ್ನು ಹೆಗಲಿಗೆ ಹಾಕಿಕೊಂಡು ಜಂಗಮನ ವೇಷಧರಿಸಿದ್ದಾರೆ. ಶಿವರಾಯ ಮುಂದೆ – ಮುಂದೆ ನಡೆಯುತ್ತಿದ್ದರು ಎಂದು ಹೇಳುತ್ತಾರೆ, ಈ ರೀತಿಯಾಗಿ ಗೌರಿಯು ತನ್ನ ಗೆಳತಿಯ ಹತ್ತಿರ ಸಂಭಾಷಣೆಯಲ್ಲಿ ತೊಡಗಿರುತ್ತಾಳೆ.

ಹರಬಿ ಬಾಯಿಗೆ ಹಲ್ವಂಗದ ವಸ್ತುರ
ಬೆನ್ನಲ್ಲಿ ಬೆಳ್ಳಿ ಶಿವದಾರ। ಇಟ್ಟುಕೊಂಡು
ಹೊಳೆಯಲ್ಲಿ ನೀರ ಮೊಗಿದಾಳೆ॥

ಹೊಳೆಯಲ್ಲಿ ನೀರ ಮೊಗೆಯೊ ಬಾಲೆಯ ಕಂಡು
ಶಿವರಾಯ ಜಪವ ಮರೆತಾನು। ಜಂಗಮನು
ತನ್ನನೆ ತಾನು ಮರೆತಾನು॥

ಜಪವನು ಮರೆತಾನೆ ಜಗ್ಗನೆ ಎದ್ದಾನೆ
ರುದ್ರಾಕ್ಷಿ ತೆಗೆದು ನೆಲಕಿಟ್ಟು ಜಂಗಮಯ್ಯ
ನೀ ಬರಬೇಕು ನಮ್ಮ ಅರಮನೆಗೆ॥

ಮೈಗೆ ರೇಶಿಮೆಯ ವಸ್ತ್ರ ಧರಿಸಿದ್ದು, ಬೆನ್ನಿಗೆ ಶಿವದಾರ ಕಟ್ಟಿಕೊಂಡಿದ್ದ. ಹೊಳೆಯಲ್ಲಿ ಮುಳುಗಿಸಿ ನೀರನ್ನು ಮೊಗೆಯುವ ಗಂಗೆಯ ಸನ್ನಿವೇಷದ ಪ್ರಸಂಗವಿದು. ಆಗ ಅಲ್ಲಿಯೇ ಜಪದಲ್ಲಿ ನಿರತನಾಗಿದ್ದ ಶಿವನು ಆಕೆಯ ಸೌಂದರ್ಯಕ್ಕೆ ಜಪವನ್ನ ಮರೆಯುತ್ತಾನೆ. ತನ್ನನ್ನೇ ತಾನು ಮರೆತು ಹೋಗುತ್ತಾನೆ. ಜಪವನ್ನು ಬಿಟ್ಟು ಮೇಲೆದ್ದು ರುದ್ರಾಕ್ಷಿಯನ್ನು ನೆಲದ ಮೇಲೆ ಇರಿಸಿ ಆಕೆಯನ್ನು ನೋಡುತ್ತಾ ನಿಲ್ಲುತ್ತಾನೆ. ಆಗ ಗಂಗೆಯು ಜಂಗಮನನ್ನು ಕಂಡು ನೀವು ನಮ್ಮ ಅರಮನೆಗೆ ಬರಬೇಕೆಂದು ಔತಣವಿರುಸುತ್ತಾಳೆ. ಬಂದ ಜಂಗಮನಿಗೆ ಕೂರಲು ಮಂಚ ಹಾಕುತ್ತಾಳೆ.

ಬಂದ ಜಂಗಮಯ್ಯಗೆ ಕೊರಕೆ ಮಂಚ ಹಾಕಿ
ನಮ್ಮ ಗಂಗೆ ಹುಟ್ಟಿದ ವಾರ ತಿಳಿದ್ಹೇಳಿ ಮಹಾಸ್ವಾಮಿ
ಮಟಮಟ ಮಧ್ಯಾಹ್ನ ಕಟ್ಟಿದ। ಶನಿವಾರ
ನಿಮ್ಮ ಗಂಗೆ ಹುಟ್ಟಿದ್ದು ಇಸುವಾರ॥

ಹುಟ್ಟಿದ ಗಂಗೆ ಮನೆಯೊಳಗೆ ಇದ್ದಾರೆ
ತಾಯಿ ತಂದೆಗೆ ಮರಣಾವು। ಗಂಗೆಯ
ಬಿಡಿರಯ್ಯ ಹರಿಯೊದ ಜಲದಾಗೆ॥

ಆಗೊಂದು ಹಡಿದೋ ರುದ್ರೇಶ್ವರಗೆ ಕೊಟ್ಟೆ
ಈಗೊಂದು ಇದ್ದರೆ ಜಲದಿಗೆ। ಬಿಡಬೇಕೆ
ಹುಚ್ಚೆನೋ ಶಿವನೆ ಮರುಳೇನೂ॥

ಬಂದ ಜಂಗಮಗೆ ಕೂರಲು ಮಂಚಹಾಕಿ ನಮ್ಮ ಗಂಗೆ ಹುಟ್ಟಿದ ವಾರ, ಗಳಿಗೆ, ತಿಥಿಯನ್ನು ತಿಳಿಸಿ ಸ್ವಾಮಿ ಎಂದು ಕೇಳಿದಾಗ, ಜಂಗಮನು ಈಕೆ ಮಟಮಟ ಮಧ್ಯಾಹ್ನದ ಶನಿವಾರದಂದು ಗರ್ಭಧರಿಸಿ ಭಾನುವಾರ (ಇಸುವಾರ) ದಂದು ಗಂಗೆ ಹುಟ್ಟಿದಳು ಎಂದು ಹೇಳುತ್ತಾನೆ. ಹುಟ್ಟಿರುವ ಗಂಗೆ ಮನೆಯಲ್ಲಿದ್ದರೆ ತಂದೆ – ತಾಯಿಗೆ ಮರಣ ಆದ್ದರಿಂದ ಆಕೆಯನ್ನು ಹರಿಯುವ ನೀರಿಗೆ ಬಿಡಿ ಎಂದು ಹೇಳುತ್ತಾನೆ ಜಂಗಮ. ಆಗ ಗಂಗೆಯ ತಾಯಿ ಮೊದಲು ಹಡೆದ ಮಗುವನ್ನು ರುದ್ರೇಶ್ವರನಿಗೆ ಕೊಟ್ಟೆ ಈಗ ಇವಳನ್ನು ಗಂಗೆಗೆ ಬಿಡಬೇಕೆ, ನಿನಗೇನು ಹುಚ್ಚೆ ಜಂಗಮನೇ ಎಂದು ಬೈಯ್ಯುತ್ತಾಳೆ.

ಇಸುವಾರ ಹುಟ್ಟಿದ ಗಂಗೆ ಮನೆಯಲ್ಲಿ ಇದ್ದರೆ
ಅಣ್ಣ ತಮ್ಮರಿಗೆ ಮರಣಾವು। ಗಂಗೆಯ
ಬಿಡಿರಯ್ಯ ಹರಿಯುವ ಜಲಧಿಗೆ॥

ನೆನಯಕ್ಕಿ ನೆನೆಗಡಲೆ ಗೊನೆಯ ಬಾಳೆಯ ಹಣ್ಣು
ಚಿನ್ನದ ತೊಟ್ಟಿಲ ರನ್ನದ ನ್ಯಾಕೆ ಹಗ್ಗ
ಸಯ್ವಾಗಿ ಗಂಗೆಯ ಬಿಡಿರಯ್ಯ॥

ಮುಂದುವರೆದ ಜಂಗಮನು ಇಸುವಾರ ಹುಟ್ಟಿದ ಗಂಗೆಯು ಮನೆಯಲ್ಲಿದ್ದರೆ ಅಣ್ಣ ತಮ್ಮಂದಿರಿಗೆ ಮರಣ. ಆದ್ದರಿಂದ ಹರಿಯುವ ನೀರಿಗೆ ಬಿಡಿ ಎಂದು ನೆನೆಸಿದ ಅಕ್ಕಿ, ನೆನೆಸಿದ ಕಡಲೆ, ಬಾಳೆಹಣ್ಣಿನ ಗೊನೆಯನ್ನು ಚಿನ್ನದ ತೊಟ್ಟಿಲಿಗೆ ರನ್ನದ ಹಗ್ಗ ಕಟ್ಟಿ ಗಂಗೆಗೆ ಬಿಡಬೇಕೆಂದು ಜಂಗಮ ಹೇಳುತ್ತಾನೆ.

ಬಿಟ್ಟು ಬಂದ ಸುದ್ದಿಯ ಕೇಳ್ಯಾನೆ ಅಂಬಿಗರಣ್ಣ
ಉಕ್ಕಿನ ಬೆಲೆ ಹಾಕಿ ಎಳೆದಾನು ಅಂಬಿಗರಣ್ಣ
ಚಿನ್ನ ಸಿಕ್ಕಿತು ನಮಗೊಂದು॥

ಬಂದುಬಿಗಿತ್ತಿಗೆ ಏನೆಂದು ಹೇಳುತ್ತಾನೆ
ಹನ್ನೆರಡು ವರುಷ ಮಕ್ಕಳಲ್ಹೆನಾವಿದ್ದೊ
ಈಗೊಂದು ಕೊಟ್ಟ ಶಿವರಾಯ॥

ಈಗೊಂದು ಕೊಟ್ಟ ಅಂಬಿಗಿತ್ತಿ ಮಗಳನ್ನು
ಚಂದಾಗಿ ಸಾಕೆ ಹರದೆಯ। ಅಂಬಿಗಿತ್ತಿ
ಚೆಂದಾಗಿ ಸಾಕೆ ಹರದೆಯ॥

ಗಂಗೆಯನ್ನು ನೀರಿಗೆ ಬಿಟ್ಟು ಬಂದ ಸುದ್ದಿ ಕೇಳಿದ ಅಂಬಿಗನು ಕಬ್ಬಿಣದಂತಹ ಬಲೆಯನ್ನು ಬೀಸಿ, ಆ ತೊಟ್ಟಿಲನ್ನು ತೆಗೆದುಕೊಂಡು ಮನೆಗೆ ಬಂದು ತನ್ನ ಹೆಂಡತಿಗೆ ಕೊಟ್ಟು ಹನ್ನೆರಡು ವರ್ಷದಿಂದ ಮಕ್ಕಳಿಲ್ಲದ ನನಗೆ ಶಿವರಾಯ ಮಗನನ್ನು ಕೊಟ್ಟಿದ್ದಾನೆ ಎಂದು ಹೀಗೆ ಕೊಟ್ಟ ಮಗುವನ್ನು ಚೆಂದಾಗಿ ಸಲಹು ಎಂದು ಅಂಬಿಗ ಅಂಬಿಗೆತ್ತಿಗೆ ಕೊಡುತ್ತಾನೆ.

ಚಟ್ನಿ ತುಪ್ಪ ಹಾಕಿ ಬಟ್ಟಲು ಹಾಲುಯ್ಯ
ಹೆತ್ತ ಮಗಳಂಗೆ ಸಲವಮ್ಮ। ಅಂಬಿಗಿತ್ತಿ
ಹೆತ್ತೆ ಮಗಳಂಗೆ ಸಲವನ್ನು

ಹರಬಿಯ ಹಾಲುಯುದು ಗಿಂಡೀಲ್ ತುಪ್ಪ ಹಾಕಿ
ಹಡದ ಮಗಳಂಗೆ ಸಲವಮ್ಮ। ಅಂಬಿಗಿತ್ತಿ
ಹಡದ ಮಗಳಂಗೆ ಸಲವಮ್ಮ॥

ಸಾಲೀ ಉಡಮ್ಮ ಸಣ್ಣ ಮುತ್ತ ಕಟ್ಟಿಮ್ಮ
ನೀಸಣ್ಣ ಮಳಲಲ್ಲಿ ಆಡಿಬಾರೆ। ಗಂಗಮ್ಮ
ಬಂದುಕುಯೆ ನಮ್ಮ ಎದೆ ಹಾಲು॥

ಸಾಲೀಯು ನನಗ್ಯಾಕೆ ಸಣ್ಣ ಮುತ್ತಿನಗ್ಯಾಕೆ
ಸಣ್ಣ ಮಳಲಾಟ ನನಗ್ಯಾಕೆ। ಅಂಬಿಗಮ್ಮ
ನಿಮ್ಮ ಎದೆ ಹಾಲು ನೆನಗ್ಯಾಕೆ॥

ಚಟ್ನಿ, ತುಪ್ಪ, ಬಟ್ಟಲು ತುಂಬ ಹಾಲು, ಕೊಟ್ಟು ಹೆತ್ತ ಮಗಳಂತೆ ಸಾಕು. ನೊರೆಹಾಲು ಕೊಟ್ಟು ಬಟ್ಟಲು ತುಂಬ ತುಪ್ಪ ಕೊಟ್ಟು ಹಡೆದ ಮಗಳಂತೆ ಸಾಕು. ಎಂದು ಅಂಬಿಗ ತನ್ನ ಹೆಂಡತಿಗೆ ಹೇಳುತ್ತಾನೆ. ಬಟ್ಟೆಯನ್ನು ತೊಟ್ಟು, ಮುತ್ತಿನಂತ ಮಾತನಾಡು, ಹತ್ತಿರದ ಸಣ್ಣ ಮರಳಲ್ಲಿ ಆಟವಾಡು, ಬಂದು ಹಾಲು ಕುಡಿದು ಮಲಗು ಎಂದು ಅಂಬಿಗಿತ್ತಿ ಗಂಗೆಗೆ ಹೇಳಿದಾಗ ಗಂಗೆಯು ತಾನು ದೊಡ್ಡವಳಾಗಿದ್ದೇನೆ. ನನಗೆ ಸಣ್ಣ ಬಟ್ಟೆ ಬೇಡ, ಸಣ್ಣ ಮುತ್ತುಗಳು ಬೇಡ, ಮರಳಿನಲ್ಲಿ ಆಟವಾಡುವುದಿಲ್ಲ. ಹಾಲು ಕುಡಿಯುವುದಿಲ್ಲ ಎಂದು ಹಟ ಮಾಡುತ್ತಾಳೆ.

ಸಾಲಿ ಉಟ್ಟುಕೊಂಡು ಸಣ್ಣ ದನಿಹರವೋ ಬಾಲೆ
ಅಲ್ಲಿಗೆ ಶಿವರಾಯ ಕೊಡ ಹಿಡಿದು। ಕೇಳ್ಯಾನೆ
ಬಂದೆನ್ನ ಬಡಿಯೋಳಗೆ ಇರುವಂಗೆ॥

ನೀ ಹೆಂಡಿರುಳ್ಳೊನು ನೀ ಮಕ್ಕಳುಳ್ಳೂನು
ನೀ ಸಾವಿರ ಬಳಗದೋನು। ಶಿವಶಿವ
ನೀ ಸಾವಿರ ಬಳಗದೋನು॥

ಹೆಂಡಿರು ನನಗಿಲ್ಲ ಮಕ್ಕಳು ನನಗಿಲ್ಲ
ಸಾವಿರ ಬಳಗ ನನಗಿಲ್ಲ। ಎಲೆ ಗಂಗೆ
ಬಂದೇರು ನನ್ನ ಜಡೆಯೊಳಗೆ॥

ಆಚೆ ಕೊಂಬಿಂದ ಈಚೆ ಕೊಂಬಿಂಗೆ ದಾಟಿ
ರೂಪರಾಕ್ಷಿ ಹಣ್ಣ ಕುಯ್ವಾಗ। ಎಲೆ ಗಂಗೆ
ಸೋಕಾಗಿ ಬಾರೆ ಜಡೆಯೊಳಗೆ॥

ಸಾಲಿ ತೊಟ್ಟ ಸಣ್ಣ ದನಿಯುಳ್ಳ ಕೊಡ ಹಿಡಿದ ಗಂಗೆಯನ್ನು ಶಿವರಾಯನು ಬಂದು ನನ್ನ ಜಡೆಯೊಳಗೆ ಇರು ಗಂಗೆ ಎಂದು ಬೇಡುತ್ತಾನೆ. ಅದಕ್ಕೆ ಗಂಗೆ ನೀನು ಹೆಂಡತಿ ಇರುವವನು, ಮಕ್ಕಳು ಬಳಗ, ಬಂಧು ಇರುವವನು ಎಂದು ಹೇಳುತ್ತಾಳೆ. ಆಗ ಶಿವರಾಯನು ತನಗೆ ಹೆಂಡತಿ ಇಲ್ಲ ಮಕ್ಕಳಿಲ್ಲ ಸಾವಿರ ಬಳಗವಿಲ್ಲ ಗಂಗೆ ನನಗೆ ಯಾರು ಗತಿ ಇಲ್ಲ ಬಂದು ನೀನು ನನ್ನ ಜಡೆಯನ್ನು ಸೇರು ಎಂದ್ಹೇಳುತ್ತಾನೆ. ಮುಂದುವರೆದು ಹಣ್ಣು ಕೊಯ್ಯುವಾಗ ಮರದಲ್ಲಿ ರೆಂಬೆಯಿಂದ ರೆಂಬೆಗೆ ದಾಟುವಾಗ ಸುಲಭವಾಗಿ ಬಂದು ನೀನು ನನ್ನ ಜಡೆಯನು ಸೇರೆಂದು ಹೇಳುತ್ತಾನೆ.

ಕಗ್ಗಲಿಕಣಿವಿಂದ ಒಬ್ಬಾನೆ ಬಂದಿವಿನಿ
ತಟ್ಟಿ ಕರೆದರೆ ಕದವತೆಗಿ ಗೌರಿ॥

ಕದವ ತೆಗೆಯೋಕೆ ಕಂದಯ್ಯ ತೊಡಿಮ್ಯಾಲೆ
ಹೊತ್ತುಟ್ಟಲಿ ಶಿವನೆ ಹೊರಗೀರಿ।

ಕಂದ್ನ ಕೊಂಡ್ಹೋಗಿ ತೂಗೋ ಮಂಚಕ್ಕೆ ಹಾಡು
ಬ್ಯಾಗನೆ ಕದವ ತೆಗಿ ಗೌರಿ॥
ಕದವನ್ನೆ ತೆಗಿಯಾಕೆ ನಾ ಸೀರೇನೆ ಉಟ್ಟಿಲ್ಲ
ಹೊತ್ತುಟ್ಟಲಿ ದೇವರೆ ಹೊರಗೀರಿ॥
ಪಟ್ಟಿಗೆಲಿರುವ ಪಟ್ಟೆ ಸೀರೆಯುಟ್ಟು
ಕಟ್ಟಾನೆ ಕದವ ತೆಗಿ ಗೌರಿ॥
ಕದವನ್ನೆ ತೆಗೆದಾಳೆ ಕೈ ಹೋದುನಕ್ಕಾಳೆ
ತಂದಿಟ್ಟಳೆರಡು ಮಣಿಗಳ॥
ಚಿನ್ನದ ಗಿಂಡಿಲಿ ಪನ್ನೀರ ತಕ್ಕೊಂಡು
ಅವಳೊಂದು ಪಾದವ ತೊಳೆದಾಳೆ
ಎಂದಾರು ಬಂದಾರೆ ಎರಡು ಪಾದ ತೊಳಿದಿದ್ದೆ
ಇವತ್ತೊಂದು ಪಾದವ ತೊಳೆದಲ್ಲೆ! ಎಲೆ ಗೌರಿ
ನಿನಗಿಬ್ಬರುಂಟೇನೆ ಪುರುಷರು॥
ಅಂಜಿದೆ ಶಿವನೆ ನಿಮ್ಮಣಕಾದ ಮಾತಿಗೆ
ಸುರಗಿನ ಕೆಂಜಾಡೆ ಮಗುಟಾದ ಮಾತಿಗೆ ಒಳಗಿದೆ
ಗಂಗಿಗೆ ಒಂದು ನನಗೊಂದು॥

ಇಲ್ಲಿನ ಗೀತೆಗಳಲ್ಲಿ ನವಿರಾದ ಸರಸ–ವಿರಸ ಗೌರಿ–ಶಿವನ ನಡುವೆ ನಡೆಯುವುದು. ಮಾತಿಗೆ ಪ್ರತಿ ಮಾತುಗಳು ಹುಸಿ ಮುನಿಸು ಇಲ್ಲಿದೆ.

ಕಗ್ಗತ್ತಲಿನ ಕಾಡಿನಿಂದ ಒಬ್ಬನೆ ಬಂದಿದ್ದೇನೆ. ಕದ ತೆಗೆ ಗೌರಿ ಎಂದು ಶಿವರಾಯ ಕೂಗಿದಾಗ, ಗೌರಿಯು ಒಳಗಿನಿಂದ ಕದ ತೆಗೆಯಲು ಮಗು ತನ್ನ ತೊಡೆಯ ಮೇಲೆ ಮಲಗಿದೆ ಆದ್ದರಿಂದ ನೀವು ಅಲ್ಲೇ ಇರಿ ಬೆಳಕು ಹರಿಯಲಿ ಎಂದು ಹೇಳುತ್ತಾಳೆ. ಅದಕ್ಕೆ ಶಿವನು ಕಂದನನ್ನು ತೂಗುವ ಮಂಚದಲ್ಲಿ ಮಲಗಿಸಿ ಬೇಗ ಕದವನ್ನು ತೆಗೆ ಗೌರಿ ಅನ್ನುತ್ತಾನೆ. ಆಗ ಕದವನ್ನು ತೆಗೆಯಲು ತಾನು ಸೀರೆಯನ್ನು ಉಟ್ಟಿಲ್ಲ ಎಂದು ಅಂದಾಗ ಪೆಟ್ಟಿಗೆಯಲ್ಲಿರುವ ಪಟ್ಟೆ ಸೀರೆಯುಟ್ಟು ಬೇಗ ಕದ ತೆಗಿ ಎಂದಾಗ ಆಕೆ ಕದ ತೆಗೆದು ಕೈ ಕಾಲು ತೊಳೆಯಲು ಮಣೆ ಹಾಕಿ ನಕ್ಕು ಒಳ ಹೋಗುತ್ತಾಳೆ. ಒಳ ಹೋಗಿ ಬಂಗಾರದ ಗಿಂಡಿಯಲ್ಲಿ ನೀರು ತಂದು ಒಂದು ಪಾದವನ್ನು ತೊಳೆಯುತ್ತಾಳೆ. ಆಗ ಶಿವ ಆಶ್ಚರ್ಯ ಚಕಿತನಾಗಿ ಯಾವಾಗಲೂ ಎರಡೂ ಪಾದ ತೊಳೆಯುತ್ತಿದ್ದೆ.ಈಗ ಯಾಕೆ ಒಂದೇ ಪಾದ ತೊಳೆಯುತ್ತಿರುವೆ ನಿನಗೇನು ಇಬ್ಬರು ಗಂಡಂದಿರೇ ಎಂದು ಶಿವನು ಗೌರಿಯನ್ನು ಪ್ರಶ್ನಿಸಿದಾಗ ಗೌರಿಯು ಹೆದರಿ ಶಿವನೆ ನಿಮ್ಮಾಣೆಗೂ ಇಲ್ಲ. ಆದರೆ ನಿಮ್ಮ ಕೆಂಜಡೆಯಲ್ಲಿರುವ ಗಂಗೆಗೆ ಒಂದು ಪಾದ ನನಗೆ ಒಂದು ಪಾದ ಎಂದು ಉತ್ತರಿಸುತ್ತಾಳೆ.

ಗಂಗೆ ಬಂದು ಸುದ್ದಿ ಗೌರಿಗ್ಯಾರು ಹೇಳಿದರೋ
ಅದೇಳ್ ಪುರದಿಂದ ಗಿಣಿರಾಮ। ಬಂದವನೆ
ಅವರಕ್ಕಗೊಂದು ಮಾತ ಉರುಬವನೆ

ಹಕ್ಕಿಯ ಹಿಡಿಸುವ ರೆಕ್ಕೆಯ ತರಿಸುವೆ
ಬೆಕ್ಕಿನ ಮುಂದೆ ಮಡಗುವೆ। ಎಲೆಗೌರಿ
ಸೊಕ್ಕಿನ ಹಕ್ಕಿ ಮಡಗುವೆ॥

ತಾನು ಗಂಗೆಯನ್ನು ಕರೆತಂದ ವಿಷಯವನ್ನು ಗೌರಿಗೆ ಯಾರು ತಿಳಿಸಿದರೆಂದು ಯೋಚಿಸುತ್ತಿದ್ದಾಗ, ಅಲ್ಲಿ ಗಿಣಿರಾಮ ಹಾರಾಡುವುದನ್ನು ಕಂಡು ಈ ಕೆಲಸ ಇದರದ್ದೇ ಎಂದು ತಿಳಿದು ಇದನ್ನು ಹಿಡಿದು ರೆಕ್ಕೆ ಮುರಿದು ಬೆಕ್ಕಿಗೆ ಆಹಾರವಾಗಿ ಮಾಡಬೇಕು ಎಂದು ಈ ಸೊಕ್ಕಿನ ಹಕ್ಕಿಯ ಪ್ರಾಣವನ್ನು ತೆಗೆಯಬೇಕೆಂದು ನಿಶ್ಚಯಿಸುತ್ತಾನೆ.

ಚಿನ್ನದ ಬಾಚಣಿಗೆ ರನ್ನದ ಸೀರಣಿಗೆ
ರನ್ನ ಚಿನ್ನದ ಕೊಣದೆಣ್ಣೆ। ತಕ್ಕೊಂಡು
ಸುರಗಿ ಕೆಂಜಾಡೆ ಅಳದಾಳ॥

ಅದರೊಳಗೆ ಗಂಗೆ ನಗು ನಗುತ ಕುಂತವಳೆ
ಮಂಚದ ಮೇಲೆ ಶಿವರಾಯ॥ ಕೂತುಕೊಂಡು
ಅಂಜಬೇಡ ಗಂಗೆ ಗೌರಿಗೇ॥

ನಾ ಅಂಜುವೆನು ಅತ್ತೆಗೆ ನಾ ಅಂಜುವೆನು ಮಾವಗೆ
ನಾ ಅಂಜೆನು ಸರಿಯ ಸವತಿಗೆ। ಶಿವರಾಯ
ಅಂಜೇನು ಸರಿಯೆ ಸವತಿಗೆ॥

ಶಿವನ ಕೆಂಜಡೆಯನ್ನು ಬಾಚಲು ಗೌರಿಯು ಚಿನ್ನದ ಬಾಚಣಿಗೆ, ರನ್ನದ ನೀರಣಿಗೆ, ರನ್ನ-ಚಿನ್ನದ ಕೊಣದೆಣ್ಣೆ ತಂದು ಕೆಂಜೆಡೆಗೆ ಹಚ್ಚಲು ಅಣಿಯಾಗುತ್ತಾಳೆ. ಆಗ ಕೆಂಜೆಡೆಯಲ್ಲಿದ್ದ ಗಂಗೆಗೆ ನಗುತ್ತಾ ಇರು. ಹೆದರ ಬೇಡ ಎಂದು ತೂಗು ಮಂಚದ ಮೇಲೆ ಕೂತು ಶಿವ ಹೇಳುತ್ತಾನೆ. ಅದಕ್ಕೆ ಪ್ರತಿಯಾಗಿ ಗಂಗೆಯು ತಾನು ಹೆದರುವುದು ಅತ್ತೆಗೆ, ಮಾವಗೆ ಅಷ್ಟೇ ಸವತಿಗೆ ಹೆದರುವುದಿಲ್ಲ. ಶಿವರಾಯ ಎಂದು ಹೇಳುತ್ತಾಳೆ.

ಗಂಗೆಗೂ ಗೌರಿಗೂ ಹತ್ತೀತೆ ಕಾಳಗ
ಗಂಗೆಯ ಕುಲವ ಗೌರಮ್ಮ। ಎತ್ತಿಕೊಂಡು
ಹಂಗಿಸ್ಯಾಡಾಳ ಸವತಿಯ॥

ಹರಗೋಲ ಹಾಕೋರು ಹುಟ್ಟಿಯ ಬಗೆಯೋರು
ಹರುಗುಲಕ್ಕೆ ಹಿಟ್ಟು ಹೊರುವೋರು। ಬೆಸ್ತಾರ ಹುಡುಗಿಯ

ಎಲ್ಲೋಗಿ ತಂದ್ಯೋ ಶಿವರಾಯ॥

ಕಾಟಿ ಕಾಯೋರು ರಾಟೆಯ ನೂಲೋರು

ಸತ್ತ ಮಿಾನ ಸತೇಲಿ ಮಾರೋರು। ಬೆಸ್ತರ ಹುಡುಗಿ

ಎಲ್ಲೋಗಿ ತಂದೋ ಶಿವರಾಯ॥

ಆನೆಯ ಮೇಲೋಗೊ ನಿಮ್ಮ ಅಪ್ಪಂದಿರು

ದಾನಕ್ಕೆ ಕೈಯ ನೀಡುತಾರೆ। ಎಲೆಗೌರಿ

ನೀ ಅಚ್ಚೆ ಹಾರೋರ ಮಗಳಲ್ಲೆ॥

ಒಂಟಿ ಮೇಲೋಗೋರ ನಿಮ್ಮ ಅಣ್ಣಂದಿರು

ವಸ್ತ್ರಕ್ಕೆ ಕೈಯೆ ನೀಡೋರು। ಎಲೆ ಗೌರಿ

ನೀ ಕೆಂಪು ಹಾರುವರ ಮಗಳಲ್ಲೆ॥

ನೀ ಅಕ್ಕನಾಗೂ ಹೊತ್ತಿಗೆ ದಕ್ಕಿಸಿದೆ ಈ ಮಾತ

ನೀ ಅಕ್ಕಲ್ಲದೆ ಪರಬಳು। ಆಗಿದ್ದರೆ

ನುಗ್ಗಿಸುವೆ ಮೀನ ಮೊಸಳೆಯ॥

(ಗೌರಿ ತನ್ನ ತವರು ಮನೆಗೆ ಹೊರಡುತ್ತಾಳೆ)

ಗಂಗೆಗೂ ಗೌರಿಗೂ ಜಗಳ ಆರಂಭವಾಗುತ್ತದೆ. ಗಂಗೆಯ ಕುಲವನ್ನು ಗೌರಮ್ಮ ಹಂಗಿಸಿ ಸವತಿ ಎಂದು ಹಾಡುತ್ತಾಳೆ. ಅಂಬಿಗರ ಮಗಳು, ಹರಿಗೋಲನ್ನು ಹಾಕುವರು, ಬಟ್ಟೆಯ ಬಗೆಯೋರು ಗುರುಕುಲಕ್ಕೆ ಹಿಟ್ಟು ಹೊರುವರು. ಇವರು ಬೆಸ್ತರ ಹುಡುಗಿ ಎಲ್ಲಿಂದ ಈಕೆಯನ್ನು ಕರೆತಂದಿರಿ ಎಂದು ಶಿವರಾಯನಿಗೆ ಹೇಳುತ್ತಾಳೆ. ಮುಂದುವರೆದು ಕಾಟಿ ಕಾಯೋರು, ರಾಟೆ ನೂಲೋರು, ಸತ್ತ ಮೀನು ಸಂತೆಯಲ್ಲಿ ಮಾರುವರು, ಬೆಸ್ತರ ಹುಡುಗಿ ಅಂತ ಹಂಗಿಸುತ್ತಾಳೆ. ಅದಕ್ಕೆ ಪ್ರತಿಯಾಗಿ ಗಂಗೆಯು ಆನೆಯ ಮೇಲೆ ಹೋಗುವ ನಿನ್ನ ಅಪ್ಪಂದಿರು ದಾನಕ್ಕೆ ನಮ್ಮ ಹತ್ತಿರ ಕೈ ನೀಡುತ್ತಾರೆ. ಎಲೆ ಗೌರಿ ನೀನು ಅಪ್ಪಟ ಹಾರೊರ(ಶೈವ) ಮನೆ ಮಗಳು. ಒಂಟೆ ಮೇಲೆ ಹೋಗುವ ನಿಮ್ಮ ಅಣ್ಣಂದಿರು ವಸ್ತ್ರಕ್ಕೆ ಕೈ ನೀಡುವವರು. ಏ ಗೌರಿ ನೀನು ಕೆಂಪು ಹಾರೋರ ಮಗಳು ಎಂದು, ನೀನು ಅಕ್ಕನಾಗಿರುವುದರಿಂದ ಇಷ್ಟು ಹೊತ್ತು ನಿನ್ನ ಮಾತನ್ನು ಕೇಳಿದೆನು. ನೀನಲ್ಲದೆ ಬೇರೆ ಯಾರಾದರೂ ಅಗಿದ್ದರೆ ಮೀನು ಮೊಸಳೆಗಳ ಸಹಾಯದಿಂದ ಅವರ ಪ್ರಾಣ ತೆಗೆಸುತ್ತಿದ್ದೆ ಎಂದು ಹೇಳುತ್ತಾಳೆ.

ಸಾಲಿನಾನೊಲ್ಲೆ ಸಣ್ಣ ಮುತ್ತ ನಾನೊಲ್ಲೆ

ಸಣ್ಣ ಮಾಳಿಗಲ ನಾ ಇರಲೊಲ್ಲೆ। ಶಿವರಾಯ

ನಾ ಹೋಗಿ ಬತ್ತೀನಿ ತೌವರಿಗೆ॥

ಹಿಪ್ಪೆ ಹೂವಿನಂಗೆ ಕೆಪ್ಪೆಲ್ಲ ನೆರೆ ಬರಲಿ

ನಮ್ಮಪ್ಪಂದಿರಿರಲಿ ಮುದಕರು। ಶಿವರಾಯ
ನಾನೊಪ್ಪತ್ತು ಇದ್ದು ಬರುತಿತ್ತೇನೆ॥

ಅಂಬಲಿ ಕುಡಿಯೋರು ಕಂಬಳಿಹೊಂದಿಯೋರು
ಕಂಬದ ಸಾಲಲ್ಲಿ ಒರಗೊರು। ಎಲೆ ಗೌರಿ
ನಿನಗ್ಯಾಕೆ ಇನ್ನು ತವರಾಸೆ॥

ಅಂಬಲಿ ಕುಡಿಯಾಲ ಕಂಬಳಿ ಹೊದಿಯಾಲಿ
ಅವರು ಕಂಬದ ಸಾಲಲ್ಲಿ ಬರಗಾಲ। ಶಿವರಾಯ
ನಾ ಅರಗಳಿಗೆ ಹೋಗಿ ಬರತೇನೆ।

ಆಗ ಗೌರಿಯು ಮುನಿಸಿಕೊಂಡು ತನ್ನ ತವರು ಮನೆಗೆ ಹೋಗುತ್ತಾಳೆ. ನನಗೆ ಬಟ್ಟ–ಬರೆಬೇಡ. ಸಣ್ಣ ಮುತ್ತುಗಳು ಬೇಡ ಸಣ್ಣ ಮನೆಯಲ್ಲಿ ನಾನು ಇರುವುದಿಲ್ಲ. ಶಿವರಾಯ ತಾನು ತವರಿಗೆ ಹೋಗಿ ಬರುತ್ತೇನೆ ಎಂದು ಹೊರಡುತ್ತಾಳೆ. ಹೆಣ್ಣು ಮಕ್ಕಳಿಗೆ ಗಂಡನ ಮನೆಯಲ್ಲಿ ಜಗಳ, ಬೇಸರವಾದರೆ ತವರು ಮನೆಯೇ ಆಕೆಗೆ ಆ ಕ್ಷಣ ಸ್ವರ್ಗವಾಗುತ್ತದೆ. ತನ್ನ ಕಷ್ಟ ಸುಖ ದುಃಖ ಹೇಳುವುದು ಮೊದಲು ಅವರಿಗೆ. ಆದ್ದರಿಂದ ಇಲ್ಲಿ ಗೌರಿಯು ತನ್ನ ತವರಿಗೆ ಹೊರಟಿದ್ದಾಳೆ. ಹಿಪ್ಪೆ ಹೂವಿನಂಗೆ ಕೆಪ್ಪೆಲ್ಲ ನೆರೆ ಬಂದು ನಮ್ಮ ಅಪ್ಪ ಮುದುಕನೇ ಆಗಿರಲಿ, ಅವರು ಯಾವ ಸ್ಥಿತಿಯಲ್ಲೇ ಇರಲಿ ತಾನು ಒಂದು ದಿನದ ಮಟ್ಟಿಗಾದರೂ ತೌರಿಗೆ ಹೋಗಿ ಬರುತ್ತೇನೆ ಎಂದು ಹೊರಡುತ್ತಾಳೆ. ಆಗ ಶಿವನು ಹಣ್ಣೆ ಹೂವಿನಂಗೆ ಕೆನ್ನೆಲ್ಲ ನೆರೆ ಬಂದು ನಿಮ್ಮ ಅಣ್ಣಂದಿರು ಮುದುಕರಾಗಿದ್ದಾರೆ. ಆದರೂ ನಿನಗೆ ತವರು ಮನೆಯ ಆಸೆಯೇ ಎಂದು ಎಂದು ಪ್ರಶ್ನಿಸುತ್ತಾನೆ ಹಣ್ಣೆ ಹೂವಿನಂಗೆ ಕನ್ನೆಲ್ಲಾ ನೆರೆ ಬರಲಿ ನಮ್ಮಣ್ಣಂದಿರೆಲ್ಲ ಮುದುಕರಾಗಲಿ ನಾನು ತವರಿಗೆ ಹೋಗಿ ಒಂದು ಕ್ಷಣವಾದರೂ ಇದ್ದು ಬರುತ್ತೇನೆ ಎನ್ನುತ್ತಾಳೆ. ನಿನ್ನ ತವರು ಮನೆಯವರು ಸ್ಥಿತಿವಂತರಲ್ಲ ಅಂಬಲಿ ಕುಡಿಯುವವರು, ಕಂಬಳಿ ಹೊದ್ದಿರುವವರು ಕಾಯಿಲೆಯಿಂದ ನರಳುತ್ತಿದ್ದಾರೆ. ಕಂಬಕ್ಕೆ ಒರಗಿ ಮಲಗಿದ್ದಾರೆ. ನಿನಗ್ಯಾಕೆ ಅಂತ ತವರಿನ ಮೇಲೆ ಆಸೆ ಎಂದು ಶಿವ ಕೇಳುತ್ತಾನೆ. ಗೌರಿಯು ಅದಕ್ಕೆ ತನ್ನ ತವರು ಮನೆಯವರು ಯಾವ ಸ್ಥಿತಿಯಲ್ಲೆ ಇರಲಿ ತಾನು ಒಂದು ಅರಗಳಿಗೆಯಾದರೂ ಅಲ್ಲಿಗೆ ಹೋಗಿ ಬರುತ್ತೇನೆ ಎಂದು ಹೊರಟು ಹೋಗುತ್ತಾಳೆ.

ಗೌರಿ ಸುತುಗನಾಗಿ ಎರಡು ಮೂರು ದಿನವಾದೋ
ಹೋಗಿ ಗಂಗಮ್ಮ ಔತವಳೆ। ಶಿವರಾಯ
ಹೋಗಿ ಗಂಗಮ್ಮನ ಕರೆತನ್ನಿ॥

ಹಾಲಿನಡ್ಡೆ ಕಳುಹುವೆ ಸೂತುಗ ಕಳಿಗೌರಿ
ಹಾಲಲ್ಲಿ ಸೂತಗ ಕಳಿನಿಲ್ಲ। ಶಿವರಾಯ
ಹೋಗಿ ಗಂಗಮ್ಮನ ಕರೆತನ್ನಿ॥

ತುಪ್ಪದಂಡೆ ಕಳುಹೆನು ಸೂತಗ ಕಳಿ ಗೌರಿ
ತುಪ್ಪದಲ್ಲಿ ಸೂತುಗ ಕಳಿಲಿಲ್ಲಿ। ಶಿವರಾಯ
ಹೋಗಿ ಗಂಗಮ್ಮನ ಕರೆತನ್ನಿ॥

ಎಳೆ ನೀರಿನಡ್ಡೆ ಕಳುಹೇನು ಎಲೆ ಗೌರಿ
ಎಳಿ ನೀರಿನಲ್ಲಿ ಸೂತುಗ ಕಳಿಲಿಲ್ಲಿ। ಶಿವರಾಯ
ನೀವೋಗಿ ಗಂಗಮ್ಮನ ಕರೆ ತನ್ನಿ॥

ಗೌರಿಯು ಸೂತುಗದವಳಾಗಿ ಎರಡು ಮೂರು ದಿನಗಳು ಕಳೆಯುತ್ತದೆ. ಆಗ ಗಂಗೆಯ ಅವಶ್ಯಕತೆ ಬೇಕೆನಿಸುತ್ತದೆ. ಗಂಗಮ್ಮನನ್ನು ಹೋಗಿ ಕರೆತನ್ನಿ ಶಿವರಾಯ ಎಂದು ಗೌರಿ ಹೇಳುತ್ತಾಳೆ. ಆಗ ಶಿವನು ಹಾಲಿನ ಅಂಡೆಯನ್ನು ಕಳಿಸುವೆ. ಸೂತುಗ ಕಳೆದುಕೋ ಗೌರಿ ಎನ್ನುತ್ತಾನೆ. ಹಾಲಲ್ಲಿ ಸೂತಗ ಕಳಿಲಿಲ್ಲ ಶಿವರಾಯ ಹೋಗಿ ಗಂಗಮ್ಮನ ಕರೆತನ್ನಿ ಎನ್ನುತ್ತಾಳೆ. ತುಪ್ಪದ ಅಂಡೆ ಕಳಿಸುವೆ ಸೂತಗ ಕಳಿ ಗೌರಿ ಎಂದಾಗ ತುಪ್ಪದಲ್ಲಿ ಸೂತಗ ಕಳೆಯಲಿಲ್ಲ ಶಿವನೇ ಗಂಗೆಯನ್ನು ಕರೆಸು ಎನ್ನುತ್ತಾನೆ. ಎಳನೀರಿನ ಅಂಡೆಯನ್ನು ಕಳೆಸುತ್ತೇನೆ. ಗೌರಿ ಎಳ ನೀರಿನಿಂದ ಸೂತುಗ ಕಳೆದುಕೋ ಎಂದಾಗ ಸಾಧ್ಯವಾಗುವುದಿಲ್ಲ. ಅದರಿಂದಲೂ ಸೂತುಗ ಕಳೆಯಲಿಲ್ಲ, ಹೋಗಿ ಗಂಗೆಯ ಕರೆತನ್ನಿ ಶಿವರಾಯ ಎಂದು ಗೌರಿ ಗೋಗರೆಯುತ್ತಾಳೆ.

ಗಂಗೆ ಕರಿಯಾಕೆ ಅವಳಾಡಿದ್ದಿ ಅಂದಿದ್ದಿ
ನಿನ್ನ ಮಗ ಈರಣ್ಣನ ಕಳುವಂದ॥

ಮಗ ಈರಣ್ಣ, ಬಾರಪ್ಪ ನೀನ್ ಇಲ್ಲಿ
ನೀ ಹೋಗಿ ಚಿಕ್ಕವ್ವನ ಕರೆ ತಾರೋ॥

ಬಿಲ್ಲನ್ನು ಬಿಸುಟನು ಚಂದ್ರಾಯ ಹಿಡಿಕಂಡು
ಹೊಂಟ ಚಿಕ್ಕವ್ವನ ಕರೆಯಾಕೆ॥

ಪೆಟ್ಟಿಗೆಲಿರುವ ಪಟ್ಟೆಯ ಸೀರೆ ತಕ್ಕೊ
ಚೂಜಿ ಮಲ್ಲಿಗೆ ಸರತಕ್ಕೊ। ಈರಣ್ಣ
ಹೋಗಿ ಚಿಕ್ಕವ್ವನ ಕರೆ ತಾರೊ॥

ಸ್ವಾಭಿಮಾನವನ್ನು ಬಿಡದ ಶಿವನು ತಾನು ಹೋಗದೇ ನಿನ್ನ ಮಗ ಈರಣ್ಣನನ್ನು ಕಳುಹಿಸು ಎಂದು ಹೇಳುತ್ತಾನೆ. ಮಗ ಈರಣ್ಣನನ್ನು ಕರೆದು ನೀನು ಹೋಗಿ ನಿನ್ನ ಚಿಕ್ಕವ್ವನನ್ನು ಕರೆ ಎನ್ನುತ್ತಾನೆ. ಆಗ ಈರಣ್ಣ ಬಿಲ್ಲನ್ನು ಬಿಸಾಕಿ ಚಂದ್ರನ ಹಿಡಿದುಕೊಂಡು ಚಿಕ್ಕವ್ವನನ್ನು ಕರೆಯಲು ಹೊರಡುತ್ತಾನೆ. ಆಗ ಶಿವರಾಯನು ಮತ್ತು ಗೌರಿಯು ಪೆಟ್ಟಿಗೆಯಲ್ಲಿರುವ ಸೀರೆ, ಸೂಜಿ ಮಲ್ಲಿಗೆಯ ಸರವನ್ನು ತೆಗೆದುಕೊಂಡು ಹೋಗಿ ಚಿಕ್ಕಮ್ಮನನ್ನು ಕರೆದುಕೊಂಡು ಬಾ ಎಂದು ಹೇಳುವುದೇ ಈ ಪದ್ಯದಲ್ಲಿರುವ ಅಂಶವಾಗಿರುತ್ತದೆ

ಇಂಬಹಣ್ಣಿನಂಗೆ ತುಂಬೆ ಬಾರೆ ಚಿಕ್ಕವ್ವ
ನಾ ಕಂದ ಬಂದೀವಿ ಕರೆಯೋಕೆ॥
ಆಗಿನ ಕಾಲದಿ ನಮ್ಮವ್ವ ಅಂದವಳೆ ಆಡವಳೆ
ಬಾಲ ಬಂದೀವಿ ಕರೆಯೋಕೆ॥
ಬಾಳೆ ಹೆಣ್ಣಿದಂಗೆ ಬಾಗಿ ಬಾರೆ ಚಿಕ್ಕವ್ವ
ನಾನು ಬಾಲ ಬಂದೀವ್ನಿ ಕರೆಯೋಕೆ॥
ಇಂಬಿ ಹಣ್ಣಿನಂತ ತುಂಬಿ ಬಂದಳು ಗಂಗೆ
ಇಂಬಾಗಿ ಬಿಡೌವಳೆ ಪಾಳಿಯ॥

ಈರಣ್ಣನು ಗಂಗೆಯ ಮನೆಗೆ ಹೋಗಿ ಇಂಬಿಹಣ್ಣಿನಂಗೆ ತುಂಬಿಕೊಂಡು ಬಾ ಚಿಕ್ಕವ್ವ ನಾನು ನಿನ್ನ ಕಂದ ಬಂದಿದ್ದೀನಿ ಕರೆಯೋಕೆ. ಆಗಿನ ಕಾಲದಲ್ಲಿ ಗೌರಮ್ಮ ನಿನ್ನನ್ನು ಹಂಗಿಸಿದ್ದಾಳೆ. ಅದನ್ನು ಮನಸ್ಸಲ್ಲಿ ಇಟ್ಟುಕೋ ಬೇಡ. ಬಾಲಕನಾದ ನಾನು ಬಂದಿದ್ದೇನೆ. ಬಾಳೆಯ ಹಣ್ಣಿನಂತೆ ಬಾಗಿ ಬಾರೆ ಚಿಕ್ಕವ್ವ ನಾನು ನಿನ್ನ ಮಗ ಬಂದಿರುವೆನು ಕರೆಯೋಕೆ ಎಂದು ಗೋಗರೆಯುತ್ತಾನೆ. ಈರಣ್ಣನ ಮಾತಿಗೆ ಬಾಲಕನ ಮುದ್ದು ಮಾತುಗಳಿಗೆ ಮನಸೋತು ಗಂಗೆಯು ಇಂಬಿ ಹಣ್ಣಿನಂಗೆ ತುಂಬಿ ಬಂದಳು. ಗಂಗೆಯು ಎರಡಾಗಿ ಹರಿಯುತ್ತಾ ಎಲ್ಲಾ ಕಡೆ ಆವರಿಸಿದಳು.

ಗುಡ್ಲು ಹಾಕುವ ಹಾಡು

'ಗುಡ್ಲುಹಾಕುವ ಹಾಡು' ಜನಪದೀಯ ಹಾಡುಗಳಲ್ಲಿ ವಿಶಿಷ್ಟತೆಯುಳ್ಳದ್ದು.

ವಯಸ್ಸಿಗೆ ಬಂದ ಹೆಣ್ಣು 'ಋತುಮತಿ'ಯಾಗುವುದು ಪ್ರಾಕೃತಿಕ ಸಹಜ ಕ್ರಿಯೆ. ಇದನ್ನು ಜನಪದೀಯರು ಒಂದು ಸಂಪ್ರದಾಯವಾಗಿ ಆಚರಿಸಿ, ಆಕೆಯನ್ನು ಲೋಕದ ಕಣ್ಣಿಗೆ ಫಲ ವಂತಿಕೆಯ ಹೆಗ್ಗುರುತಾಗಿ ತೋರಿಸುವ ವಿಶಿಷ್ಟ ಆಚರಣೆ. ಮೈನೆರೆ (ಋತುಮತಿ)ದಾಗ ಮನೆಯಿಂದ ಆಚೆ ಗುಡ್ಲು ಹಾಕಿ ಇರಿಸಲಾಗುತ್ತದೆ. ಆ ಸಂದರ್ಭದಲ್ಲಿ 'ಗುಡ್ಲು ಹಾಕುವ ಹಾಡನ್ನು ಸಾಮೂಹಿಕವಾಗಿ ಜನಪದೀಯರು ಹಾಡುತ್ತಾರೆ.

ಈ ಗೀತೆಯಲ್ಲಿ ಜನಪದೀಯ ಪದಗಳನ್ನು ಸಹಜವಾಗಿ ಬಳಸಿದೆ. (ದೋಸರ-ಜೋಯಿಸರ) ಒಂದು ಹೆಣ್ಣು ಋತುಮತಿಯಾದಾಗ ಆ ಮನೆಯ ವಾತಾವರಣ, ಸಂಬಂಧಿಕರ ನಡಾವಳಿಕೆಗಳನ್ನು ಚಿತ್ರಿಸಲಾಗಿದೆ. ಈ ಹಾಡಿನಲ್ಲಿ ಪ್ರಕೃತಿಯೊಂದಿಗೆ ಆಕೆಯನ್ನು ವರ್ಣಿಸುತ್ತಾ, ಹೋಲಿಸುತ್ತಾ ಅರ್ಥಗರ್ಭಿತವಾಗಿ ಗೀತೆ ಮೂಡಿದೆ. ಇಲ್ಲಿಯ ಹಾಡು ಸಹಜ ಲಯಗಾರಿಕೆಯಿಂದ ಚಲಿಸುತ್ತದೆ.

ಬಾಲೆ ಮೈ ನೆರೆದು ಬಾಗಿಲಲಿ ನಿಂದವಳೆ
ಬ್ಯಾಗನೆ ದೋಸರ ಕರಿಸ್ಯಾರೆ
ಬ್ಯಾಗನೆ ದೋಸರ ಕರಿಸಿ ಕೇಳ್ತಾರಲ್ಲೆ

ಬಾಲೆ ಮೈ ನೆರೆದ ಗಳಿಗೆಯ

ಮೈ ನೆರೆದಾಗ ಜೋಯಿಸರ ಕರೆಗೆ ಗಳಿಗೆ ಕೇಳುವುದು, ಸೊಪ್ಪಿನ ಗುಡಾರವೇ ಆದರೂ ಅದು ಮುತ್ತಿನ ಗುಡಾರದಿಂದ ಕಟ್ಟಿದ್ದಾರೆ ಎಂದು ವರ್ಣಿಸುವುದು. ಅತ್ತಿಯ ಮತ್ತು ಮಾವಿನ ಮರ ಹತ್ತಿದ ಜಾಣ ಮಾವನ ಮಗ. ಇಲ್ಲಿ ಎಲ್ಲಿ ಕ್ರಿಮಿಗಳನ್ನು ಮಾವನ ಮಗನೆ ಮಾಡಿಕೊಡಬೇಕು. ಆಕೆಗೆ ನೀರು ಹಾಕಲು ಎಂಬುದು ಅಭಿವ್ಯಕ್ತವಾಗುತ್ತದೆ. ಮೈನೆರೆದ ವ್ಯಕ್ತಿಗೆ ಊಟ ಉಪಚಾರ ವಿಶೇಷದ್ದಾಗಿರಬೇಕು. ಹಾಲು, ಬಾನ, ತುಪ್ಪದ ಬಾನದ ಊಟ,ಉಪಚಾರ, ಒಡವೆಗಳ ಸಿಂಗಾರ ರನ್ನ–ಚಿನ್ನ ಎಂದು ತಾಯಿಯ ಮುದ್ದು ಮಾತುಗಳು ಅಕ್ಕಿ, ರಾಗಿ ಎಲ್ಲವನ್ನು ಮಾಡಿಸಿದ್ದಾರೆ ಸೀರೆ, ಚಟ್ಟೆ, ಪುಟ್ಟಿ ಮುತ್ತು ಎಲ್ಲವು ಧರಿಸಿದ್ದಾಳೆ. ಆದರೆ ಹಾಡಿನ ಕೊನೆಗೆ ಹಾಸ್ಯವೋ ಅಥವಾ ನೈಜಸ್ಥಿತಿಯೋ ಎಂಬಂತೆ.

ಬಾಳೆಯ ಮರದಡಿ ಬಾಲೆಯು ಮೈ ನೆರೆದು
ಬಾಳೆಯ ಮರದ ಗಿಣಿ ಕಂಡೊ। ನಮ್ಮನೆ
ಬಾಲೆ ಮೈ ಗೆರೆದ ಗಳಿಗೆಯ॥

ಇಲ್ಲಿ ಮರದಡಿ ಬಾಲೆ ಮತ್ತು ಮರದ ಗಿಣಿ ಈ ಎರಡು ಪದಗಳುಬಹು ಔಚಿತ್ಯಪೂರ್ಣವಾಗಿ ಬಂದಿವೆ. ಕಲ್ಪನೆಯಲ್ಲಿ ಸೊಗಸುಗಾರಿಕೆಯನ್ನು ಈ ಪದ್ಯದಲ್ಲಿ ಕಾಣಬಹುದಾಗಿದೆ . ಈ ಬಾಲೆಯನ್ನು ಗಿಣಿ ಕಚ್ಚಿ ತಿನ್ನಬಹುದು. ಇಲ್ಲವೇ ಹೆಣ್ಣನ್ನು ಕದ್ದು ಹೊಯ್ಯಬಹುದು.

ಹೂವ ತಂದರು ತಟ್ಟೆಲಿರಿಸಿ
ರಾಜ ರುಕ್ಮಿಣ ಸೀತೆಯ। ತುರುಬಗೆ
ಧರಿಸಿರಿ ಹೂವ ಬಾಲೇರು॥

ರುಕ್ಮಿಣಿ ಮತ್ತು ಸೀತೆ ಎಂಬ ಎರಡು ಪ್ರತಿಮೆಗಳು ಆಕೆಯ ಪಾವಿತ್ರ್ಯದ ಸಂಕೇತವಾಗಿ ಮೂಡಿ ಬಂದಿದೆ. ಕೊನೆಯ ಪದ್ಯದಲ್ಲಿ

ಕಡಲೇ ಕೊಬ್ಬರಿ ತಟ್ಟೇಲಿರಿಸಿರಿ
ಕೋಮಲಾಂಗಿ ಸೀತೆ ದೇವಿಗೆ, ಮಡಲ ದುಂಬಿರಿ–
ಹಣ್ಣ ತಟ್ಟೇಲಿರಿಸಿ।

ಸೀತೆಯಂತೆ ಕೋಮಲಾಂಗಿಯು ಈ ಬಾಲೆ ಎಂದು ಮುಕ್ತಾಯವಾಗುವಲ್ಲಿ ಏಕಪತ್ನಿ ವ್ರತಸ್ಥ ರಾಮ ಮತ್ತು ಸೀತೆಯ ಕಲ್ಪನೆಯಲ್ಲಿ ಮುಕ್ತಾಯವಾಗುತ್ತದೆ. ವಿನಃ ರುಕ್ಮಿಣಿ ಕೃಷ್ಣನ ಕಲ್ಪನೆಯಲ್ಲಿ ಅಲ್ಲ.

ಬಿತ್ತನೆ ಹಾಡು

ಅದ್ರಿ ಪುನರಸಿ ಅರವೆಯ ಮಳೆಗಾಲ
ನಾದಿನಿರೆಲ್ಲ ನವಲು ಪವಲು। ಬಣ್ಣವನಟ್ಟು

ಬೀಜದ ಹೆಡಿಗೆ ಹೊರ ಬನ್ನಿ

ಬೀಜದ ಹೆಡಿಗೆ ಬಂದೋ ಬಿತ್ತೊ ಕೂರಿಗೆ ಬಂದೋ
ಜಾಣ ಮಾಯ್ಯನ ವೀಣೆ ಬಂದೋ। ಅಣ್ಣಯ್ಯ
ಸಹದೇವ ಸಾಲ ಹೊಡಿ ಬಾರೋ॥

ಅಣ್ಣ ಹೊಡದವರೆ ಸಾಲು ತಮ್ಮ ಹೊಡೆದ ತೊಗರಿ ಸಾಲು
ಚೆನ್ನಿಗಣ್ಣಯ್ಯ ಹಲುಬೆಯ। ತಿರುವ್ಯಾರೆ
ಕನ್ನೇರು ಬಗುತ್ತಲೆ ತೆಗದಂತೆ॥

ಬ್ಯಾಗ್ಯವುಳ್ಳರ ಮಗಳೆ ಬ್ಯಾಗನೆ ರಾಗಿ ಮಾಡೆ
ಕೂರಿಗೆ ನಿಂದ್ಯಾವೆ ಹೊಲದಲ್ಲಿ। ಅಣ್ಣಯ್ಯನ
ಆರಂಭದೆತ್ತು ಹಸಿದಾವೆ॥

ಹತ್ತಾರು ಒಂದು ಹಟೀಲಿ ನಿಂದಾವೆ
ಬಿತ್ತಾರಿ ಹೊಯ್ವ ಹಿರಿಯಕ್ಕ ಅಣ್ಣಯ್ಯನ
ಪಟ್ಟೆ ಹಚ್ಚಡದ ಸೆರಗಿಗೆ॥

ಆದ್ರಿಯಲ್ಲಿ ಮಳೆಗಾಲ ಆರಂಭವಾಗುತ್ತಿದ್ದಂತೆ ಮನೆ–ಮಂದಿಯೆಲ್ಲ ಮನೆಗೆ ಬಂದ ನಾದಿನಿಯರೂ ಸಹ ಬಣ್ಣ–ಬಣ್ಣದ ಬಟ್ಟೆ ತೊಟ್ಟು ಬಿತ್ತಲು ಬೀಜದ ಹೆಡಿಗೆ ಹೊತ್ತು ಹೊಲಕ್ಕೆ ಹೊರಡುತ್ತಾರೆ. ಒತ್ತಲು ಹೆಡಿಗೆ, ಕೂರಿಗೆ ಬಂತು, ಜಾಣ ಮಾವಯ್ಯ ಮಿಣೆ ತಂದನು. ಅಣ್ಣಯ್ಯನು ಸಹ ಸಾಲು ಹೊಡಿಯಲು ಹೊರಡಲು ನಿಂತಿದ್ದಾರೆ. ಅಣ್ಣ ಅವರೆಯ ಸಾಲು, ತಮ್ಮ ತೊಗರಿಯ ಸಾಲು ಹೊಡೆಯುತ್ತಿದ್ದರೆ. ಚೆನ್ನಿಗರಾಯ್ಯನು ಹಲುಬೆಯನ್ನು ಹಿಡಿದು ತಿರುಗಿಸುತ್ತಿದ್ದಾನೆ. ಕನ್ಯಾಮಣಿಗಳು ಬೀಗುತ್ತಾ ಕೆಲಸದಲ್ಲಿ ತೊಡಗಿರುವರು. ಮನೆಗೆ ಬಂದಿರುವ ಸೊಸೆಯು ಭಾಗ್ಯವಂತಳು. ಸೊಸೆಯು ಬೇಗ–ಬೇಗ ರಾಗಿ ಮುದ್ದೆಯನ್ನು ಮಧ್ಯಾಹ್ನದ ಊಟಕ್ಕೆ ತಯಾರಿಸಿದ್ದಾಳೆ. ಕೂರಿಗೆಯ ಮತ್ತು ನೊಗ ಹೊತ್ತು ಹೊಲದಲ್ಲಿ ಎತ್ತುಗಳು ನಿಂತಿವೆ. ಅಣ್ಣಯ್ಯನ ಆರಂಭದ ಬೇಸಾಯವನ್ನು ಮಾಡಲು ಎತ್ತುಗಳು ಹಸಿದಿವೆ. ಹತ್ತಾರು ಬಂದು ಹಟ್ಟಿಯಲಿ ನಿಂತಿವೆ. ಬಿತ್ತಲು ಹಿರಿಯಕ್ಕಳೂ ತಯಾರಾಗಿದ್ದಾಳೆ.

ಹರಗೋರ ಹಲ್ ಚೆಂದ ಬಿತ್ತೋರ ಬೆನ್ನು ಚೆಂದ
ಮೇಟಿ ಕೂರಿಗೆ ಹೊಡಿಯೋರ। ಅಣ್ಣಯ್ಯನ
ದಟ್ಟಿಯ ಸುತ್ತಿನ ನಡುಚಂದ॥

ಬಿತ್ತೇರೋ ಭೀಮಣ್ಣ ಎತ್ತೆರಡು ನಾರಾಯಣ
ಸಡ್ಡೆಯ ಹೆಸರು ಸರಸೋರೆ। ಅಣ್ಣಯ್ಯನ
ಅರಗೋಲಿನ ಹೆಸರು ಗಿಣಿರಾಮ॥

ಬಿತೊದ ಕಲಿಸಾರೆ ಬಿತ್ತರದ ಮಡದಿಗೆ

ಸೆವೂರ ಕೂರಿಗೆ ಹುಟ್ಟೀಲಿ। ಪೂಜ್ಯಾದೋ

ತುಪ್ಪ ಬಾನವೆ ಎಡಿಯಾದೋ॥

ರೈತ ಮಕ್ಕಳನ್ನು ಕವಿ ಕಂಡರಿತಿರುವ ರೀತಿ ಮನಮೋಹಕವಾಗಿದೆ. ಹೊಲದಲ್ಲಿ ಬೇಸಾಯ ಮಾಡುವವರನ್ನು ನೋಡಲು ಬಂದ ಅವರು ಸೊಂಟಕ್ಕೆ ಚೌಕವನ್ನು ಕಟ್ಟಿರುತ್ತಾರೆ. ಅದು ಕೂಡ ಚೆಂದ. ಮೇಟಿ ಕೂರಿಗೆ ಹೊಡೆಯೋರ ಅಂದ ಚೆಂದವಾಗಿರುತ್ತದೆ. ಭಿತ್ತೋರು ಭೀಮನಂತೆ ಧೃಡಕಾಯನಾಗಿರುತ್ತಾನೆ. ಎತ್ತುಗಳನ್ನು ನಾರಾಯಣ ಎಂದ ಕರೆಯವುದು ವಾಡಿಕೆ. ಅಂತೆಯೇ ಸಡ್ಡೆಗೂ ಕೂಡ ಸರಸೋರೆ ಎಂಬ ಹೆಸರನ್ನು ಇಡಲಾಗಿದೆ. ಬಾರೆಕೋಲಿಗೆ ಗಿಣಿರಾಮ ಎಂದು ಒಂದೊಂದಕ್ಕೂ ಒಂದೊಂದು ಹೆಸರು ಇಡಲಾಗಿದೆ. ಮನೆಗೆ ಬಂದ ಸೊಸೆಗೆ /ಹೆಂಡತಿಗೆ ಬಿತ್ತುವುದನ್ನು, ಕೂರಿಗೆ ಹಿಡಿಯುವುದನ್ನು ಕಲಿಸಿದ್ದಾರೆ. ಮೊದಲ ಪೂಜೆಗೆ ಎಡೆಯನ್ನು ತುಪ್ಪದ ಬಾನವನ್ನು ಇಡುವರು.

ತುಪ್ಪ ಬಾನವನುಂಡು ಪುತ್ರ ಕೂರಿಗೆ ಹೊತ್ತು

ಪುತ್ರಣ್ಣರವ್ವ ಒಳಗಿದ್ದು। ಎಂದಾಳು

ಕಂಡಿಗೆ ಖಂಡಾಗ ಬೆಳೆಯಾಲಿ॥

ಬಾಲರ ಕೂರಿಗೆಗೆ ಬಾಗಲಲ್ಲಿ ಪೂಜ್ಯಾದೋ

ಹಾಲು ಬಾನವೆ ಎಡೆಯಾದೋ। ಅದನುಂಡು

ಬಾಲಣ್ಣ ಹೊತ್ತು ಕೂರೀಗೆಯ॥

ಬಾಲಣ್ಣ ರೌವ್ವ ಒಳಗಿದ್ದೇನೆಂದಾಳು

ಸಾಲಿಗೆ ಸಾವರ ಬೆಳೆಯಲಿ। ಮನೆತುಂಬ

ಕಾಳುಕಡ್ಡಿಯ ತುಂಬಲಿ॥

ಒತ್ತು ಲುಂದೆತ್ತಿಗೆ ಹೊಟ್ಟಿಕ್ಕಿರಣ್ಣಯ್ಯ

ಪಟಿಯ ಹಾಸಿ ಶರಣೆನ್ನು॥

ಹರಗಿ ಬಂದೆತ್ತಿಗೆ ಹುಲ್ಲಾ ಕಿರಣ್ಣಯ್ಯ

ನಿನ್ ಸಾಲಿಯ ಹಾಸಿ ಶರಣೆನ್ನು॥

ತುಪ್ಪದ ಬಾನವನ್ನು ಉಂಡು ಪುತ್ರರು ಕೂರಿಗೆಯನ್ನು ಹೊತ್ತು ಹೊಲಕ್ಕೆ ಹೊರಟಿರುವರು. ಆತನ ತಾಯಿ ಮಕ್ಕಳಿಗೆ ಕಂಡಿಗೆ ಬೆಳೆಯನ್ನು ಬೆಳೆಯುವಂತಾಗಲಿ ಎಂದು ಒಳಗಿನಿಂದ ಕೂಗಿ ಹರಸುತ್ತಾಳೆ. ಸಣ್ಣ ಮಕ್ಕಳು ಕೂಡ ಕೂರಿಗೆ ಬೇಸಾಯದ ಇತರ ವಸ್ತುಗಳನ್ನು ಹೊತ್ತು ಹೊರಟಿದ್ದಾರೆ. ಹಾಲು ಬಾನವನ್ನು ಅವರು ಉಂಡು ತಯಾರಾಗಿದ್ದಾರೆ. ಬಾಲಕನ ತಾಯಿ ಒಳಗಿನಿಂದ ಕೂಗಿ ಸಾಲಿಗೆ ಸಾವಿರ ಬೆಳೆ ಬೆಳೆಯಲಿ, ಮನೆ ತುಂಬ ಕಾಳು ಕಡ್ಡಿಯು ತುಂಬಲಿ ಎಂದು ಹರಸುತ್ತಾಳೆ.

ಎತ್ತು ದಣಿದಿದೆ. ಅದರ ಹೊಟ್ಟೆಗೆ ಪಚ್ಚೆ ಹಸಿರನ್ನು ಕೊಡಲಾಗಿದೆ. ಹರಗಿ ಬಂದಿರುವ ಎತ್ತಿಗೆ ಹುಲ್ಲನ್ನು ಕರಿಣ್ಣಯ್ಯ ಹಾಕಿ ಸಲುಹುತ್ತಿದ್ದಾನೆ.

ಉತ್ತು ಬಂದಣ್ಣ ಮುತ್ತಿನ ಗೂಡೊರಗಿ
ನಾ ಉತ್ತು ಬಂದೇನು ಮೂಡಲು ಮಳೆಯಲ್ಲಿ
ಮುತ್ತಿನ ಸ್ವಾತ್ಯಾಗಿ ಸುರಿದಾವು॥

ಹರಿಗಿ ಬಂದಣ್ಣ ಹವಳದ ಗೋಡೊರಗಿ
ನಾನ್ ಹರಗಿ ಬಂದೇನು ಮೂಡಲು। ಮಳೆಯಲ್ಲಿ
ಸ್ವಾನೆ ಮಳೆಯಾಗಿ ಸುರಿದಾವು॥

ಅಂಬಾರದಲ್ಲಿ ಹಾರಾಡುವವನ್ಯಾರೆ
ಗೊಂಬೆ ಹಚ್ಚಡದ ಮಳೆರಾಯ॥ ನಿಲ್ಲಯ್ಯ
ಹೊಂಬಾಳೆ ಬಾಯ ಬಿಡುತ್ತಾವೆ॥

ಅಂಬಾರದಲ್ಲಿ ನಿಂದಿರುವವನ್ಯಾರೆ
ಪಟ್ಟಿಹಚ್ಚಡದ ಮಳೆರಾಯ। ನೀನಿಲ್ಲೆ
ಕ್ಯಾಸಕ್ಕಿ ಬಾಯಿ ಬಿಡುತ್ತಾವೆ॥

ಸ್ವಾತೀಯ ಮಳಹೊದು ಸಮುದ್ರ ಕೆರೆತುಂಬಿ
ಜ್ಯೋತಿ ಮುತ್ತೆಲ್ಲ ಹರದಾವು।
ಜ್ಯೋತಿ ಮತ್ತೆಲ್ಲ ಹರದಾವು ಅಣ್ಣಯ್ಯ
ನೀತಿವುಳ್ಳರ ಕಿವಿತುಂಬ॥

ಅಡ್ಡ ಮಳೆ ಹೂದು ದೊಡ್ಡನೆ ಕೆರೆ ತುಂಬಿ
ಬಗ್ಗಿದ ಬಾಳೆ ಚಿಗುರಾಲಿ। ತೌರೂರು
ದೊಡ್ಡೆಕ್ಕಲಾಗಿ ಬದಕಲೀ

ಬಡಗಲ ಮಳೆ ಹೂದು ಬಾಗ್ಯಾಮಣ್ಣನ ಹೊಲ
ತೆನೆ ಹೋಗಿ ತೊಗರಿಗೆ ಒರಿಗ್ಯಾವೆ । ಅಣ್ಣಯ್ಯ
ನಿನ್ನ ಮಡೆಗ್ಹೋಗಿನಗಳು ಕುಣಿತ್ಯಾವೆ॥

ಬೇಸಾಯ ಮಾಡಿ ಮೂಡಲದ ಮಳೆಯಲ್ಲಿ ದುಡಿದು, ಮನೆಯಲ್ಲಿ ಗೊಡೆಗೆ ಬಂದು ವರಗಿ ಕೂತ್ತಿದ್ದಾನೆ. ಸ್ವಾತಿ ಮುತ್ತಿನ ಮಳೆಯು ಮುತ್ತಾಗಿ ಸ್ವಾತ್ತಗಿ ಸುರಿದಿದ್ದಾವೆ. ಹರಗಿ ಬಂದಣ್ಣ ಆಯಾಸವಾಗಿ ಬಂದು ಕುಳಿತಿದ್ದಾನೆ. ಆಕಾಶದಲ್ಲಿ ಹರಿದಾಡಿದೆ ಗೊಂಬೆಯಂತ ಮೋಡಗಳು. ಇನ್ನೇನು ಮಳೆಯಾಗಿ ಅದು ಬರಬೇಕಾಗಿದೆ. ಹೊಂಬಾಳೆಗಳು ಬಾಯಿ ಬಿಡುತ್ತಾ ಮಳೆಗಾಗಿ ಕಾದು ಕುಳಿತಿವೆ. ಅಂಬರದಲ್ಲಿ ಗಾಳಿಯು ಬೀಸುತ್ತಿದೆ. ಮೊದಲ ಮಳೆಗಾಗಿ ಭೂಮಿ ಕಾದಿದೆ.

ಸ್ವಾತಿಯ ಮಳೆ ಬಂದು ಸಮುದ್ರ ಕೆರೆ ತುಂಬಿದೆ. ಜ್ಯೋತಿಯಂತೆ ಮಳೆ ಬಂದು ಮುತ್ತಿನ ಕಾಳುಗಳು ಹೊಲದಲ್ಲಿ ಹರಿದಾಡಿವೆ. ಹೀಗೆ ಬಂದ ಮಳೆಯಿಂದಾದ ಆತಂಕವು ನೀತಿವಂತರ ಕಿವಿಗೆ ಬಿದ್ದಿದೆ ಅಡ್ಡ ಮಳೆ ಬಂದು ದೊಡ್ಡ ಕೆರೆ ತುಂಬಿದೆ. ಬಾಗಿದ ಬಾಳೆಯ ಗಿಡಗಳು ಚಿಗುರಲಿ, ತೌರು ಮನೆಯಲ್ಲಿ ದೊಡ್ಡೊಕ್ಕಲಾಗಿ ಬದುಕಲಿ ಎಂದು ಹೆಣ್ಣು ಮಕ್ಕಳು ತವರು ಮನೆಯ ಕಡೆಗೆ ಗಮನ ಹರಿಸಿದ್ದಾರೆ. ಬಡಗಲ ಮಳೆ ಬಂದು ಭಾಗ್ಯವೇ ಬಂದಂತಾಗಿದೆ ಮಣ್ಣಿನ ಹೊಲ ತೆನೆಯಿಂದ ತೂಗಿದೆ. ತೆನೆಗಳು ತೊಗರಿಗೆ ಒರಗಿವೆ. ಅಣ್ಣಯ್ಯನು ಈ ಮಳೆಯನ್ನು ಕಂಡು ಹರ್ಷವನ್ನು ವ್ಯಕ್ತಿ ಪಡಿಸಿದ್ದಾನೆ.

ನಾವ್ ಬಂದ ಹಾದಿಲಿ ಏನೇನು ಬೆಳೆದೆಯಾ
ಕಾರೆಳ್ಳು ಕಡಲೆ ಲಹಲಸುಂದಿ। ಬೆಳೆಗಳ
ನೂರೆಂಟ ಬೆಳೆದೆ ಕಿರುದಾಗಿ॥

ಬಸಿರಿಭೂಮಿ ತಾಯಿ ಬಯಸ್ಯಾಳೆ ಹಸಿರುಗ್ಗಿ
ತರುವೇಳಿ ಈ ಹೊಲದ ಗೌಡನ। ಅಣ್ಣಯ್ಯ
ಹೆಸರು ಬಾನ ಎಡೆಯಾದೋ॥

ಬಾಣಟಿ ಭೂಮಿ ತಾಯಿ ಬಯಸ್ಯಾಳೆ ಹಾಲು ಬಾನ
ತರುವೇಳಿ ಹೊಲದ ಗೌಡನ। ಅಣ್ಣಯ್ಯ
ಹಾಲು ಬಾನವೆ ಎಡೆಯೊದೋ॥

ಒಕ್ಕಲಿಗಣ್ಣಯ್ಯ ಒಕ್ಕಾರೆ ತೂರ್‍ಸಾಕೆ
ಕಕ್ಕೆಯ ಮೇಟಿ ಕಣದಲ್ಲಿ। ಅಣ್ಣಯ್ಯ
ಅವರೊಕ್ಸಾರೆ ಕೆಂಬತ್ತಿ ಕಣಜ॥

ದಾರಿಯ ಆಚೆ ಈಚೆಯಲ್ಲಿ ಏನೇನು ಬೆಳಗಳು ಬೆಳೆದಿದೆ ಎಂಬ ವಿವರವಿದೆ. ಅಲ್ಲಿ ಎಳ್ಳು, ಕಡಲೆ, ಹಲಸಂದಿ, ಬೆಳೆಗಳು ನೂರಾರು ತರಹದ ಬೆಳೆಗಳನ್ನು ಆ ದಾರಿಯಲ್ಲಿ ಬೆಳೆಯಲಾಗಿದೆ. ಭೂಮಿ ತಾಯಿ ಈಗ ಬಸುರಿಯಾಗಿದ್ದಾಳೆ. ಈಗ ತಾನೆ ತೆನೆ ತುಂಬಿ ನಿಂತಿದ್ದಾಳೆ. ಆ ತಾಯಿಗೆ ಹೆಸರುಗ್ಗಿಯನ್ನು ಮಾಡಿಸಿದ್ದಾನೆ ಊರ ಗೌಡ ಅಣ್ಣಯ್ಯನು ಹೆಸರು ಬಾನವನ್ನು ಎಡೆಯಾಗಿ ಮಾಡಿದ್ದಾರೆ. ಬಾಣತಿ ಭೂಮಿತಾಯಿ ಹಾಲು ಬಾನವನ್ನು ಬಯಸಿದ್ದಾಳೆ. ಗೌಡರು ಮತ್ತು ಹೊಲದ ಅಣ್ಣಯ್ಯ ಹಾಲು ಬಾನವನ್ನು ಮಾಡಿಸಿದ್ದಾರೆ. ಒಕ್ಕಲಿಗ ಅಣ್ಣಯ್ಯ ತೂರಿಸುವುದಕ್ಕೆ ಕೇರುವುದಕ್ಕೆ ಕಕ್ಕೆಯ ಮೇಟಿ ಕಣದಲ್ಲಿ ಸಜ್ಜುಗೊಳಿಸಲಾಗಿದೆ. ಅಣ್ಣಯ್ಯನು ಕಣವನ್ನು ಅತ್ತಕಡೆ ಸ್ವಚ್ಛಗೊಳಿಸಿ ಸಜ್ಜುಮಾಡಿದ್ದಾನೆ. ಈ ಸಂಗ್ರಹದಲ್ಲಿ ಯಾವ ತ್ರಿಪದಿಯನ್ನು ಓದಿದರೂ ಅದರಲ್ಲೊಂದು ಹೊಸ ಸೊಗಸು, ರೈತ, ಭೂಮಿ, ಕಾಯಕ, ಒಕ್ಕಲುತನ, ಇವುಗಳ ಮನಮೋಹಕ ಚಿತ್ರ ನಮ್ಮ ಮನಸ್ಸಿನಲ್ಲಿ ಅಚ್ಚೊತ್ತಿ ನಿಲ್ಲುತ್ತದೆ.

ಅರೆತ್ತಿನ ದಾವಣಿ ಹವಳದ ಮೇಟಿಕಂಬ
ರಾಯ ಅಣ್ಣಯ್ಯನ ಕಣದಲ್ಲಿ। ಕುಣಿಯುವ
ರನ್ನದ ಪಾದದ ಬಸವಯ್ಯ

ಹತ್ತಿಯ ದಾವಣಿ ಮುತ್ತಿನ ಮೇಟಿಕಂಬ
ಸೆಟ್ಟಿಯ ಅಣ್ಣಯ್ಯನ ಕಣದಲ್ಲಿ। ಮೇಟಿಕಂಬ
ಮುತ್ತಿನ ಪಾದದ ಬಸವಯ್ಯ॥

ನಮ್ಮ ನಾಡಿನ ನಿಜವಾದ ಏಳಿಗೆ ಅಡಗಿರುವುದು ರನ್ನದ ಪಾದದ ಬಸವಯ್ಯ, ಹೊನ್ನ ಮೇಟಿಕಂಬ, ಹನ್ನೆರಡೆತ್ತಿನ ದಾವಣಿ, ಭಾರತದ ಹಳ್ಳಿಗಳ ಉದ್ಧಾರ ಇದರಿಂದಲೇ. ಯಾಂತ್ರೀಕರಣದ ಅತಿ ಹುಚ್ಚಿನಿಂದ ನಮ್ಮ ವ್ಯವಸಾಯವೂ ಹಳ್ಳಿಗಳ ಜೀವನವೂ ಹದಗೆಡುತ್ತಿದೆ. ನಮ್ಮ ಜಾನಪದ ಸಂಸ್ಕೃತಿಯ ಪುನರುಜ್ಜೀವನದಿಂದ ಮಾತ್ರವೇ ನಾವು ಇದನ್ನು ತಪ್ಪಿಸಬಲ್ಲೆವು.

ರಾಗಿ ರಾಶಿ ಮಾಡಿನೀರು ಮುದ್ರೆ ಮಾಡಿ
ತುಂಬೆ ಹೂವಿನಲ್ಲಿ ತಳ ಪೂಜೆ। ಮಾಡಿ
ರಾಶಿ ಹೊತ್ತಾರೆ ಹಿರಿಯಣ್ಣ॥

ಎತ್ತು ಕಟ್ಟೋದು ಕಣಿ ಮತ್ತೆ ತುಂಬೋದು ಭರಣಿ
ಅಚ್ಚೆಳ್ಳಿನ ಕಣಜ ನಡುಮಲ್ಲ। ಅಣ್ಣಯ್ಯ
ಹೆಚ್ಚೊಕ್ಕಲಾಗಿ ಬದಕಯ್ಯ॥

ಹಾರಿಕಣದಲ್ಲಿ ಹಾಡೇಳುವವನ್ಯಾರೊ
ಹಾರ ಭಿತ್ತಿ ಹಡದ ಹಿರಿಯಣ್ಣ। ಇದ್ದರೆ
ಅವರ ಹಾಡಿಕೊಂಡು ಬತ್ತ ಬಡಿದಾರೆ॥

ಈರುಳ್ಳಿ ದಾನ ನೀರು ಮಜ್ಜಿಗೆ ದಾನ
ಅಂಬಲ ದಾನ ಅನ್ನದಾನ। ಅಣ್ಣಯ್ಯನ
ಉಂಬಳಿ ಹೊಲದ ತೆನೆದಾನ॥

ಬೆಳೆದಂತ ಬೆಳೆಯನ್ನು ರಾಶಿ ಮಾಡಿ ಪೂಜೆ ಮಾಡಿದ್ದಾರೆ. ಅದಕ್ಕೂ ಮುನ್ನ ಕಣವನ್ನು ತುಂಬೆ ಹೂವಿನಿಂದ ನೆಲವನ್ನು ಪೂಜೆ ಮಾಡಿದ್ದಾರೆ. ಆ ನಂತರವೇ ರಾಶಿಯನ್ನು ಚೀಲಕ್ಕೆ ತುಂಬುತ್ತಾರೆ. ಎತ್ತುಗಳನ್ನು ಮತ್ತೆ ಕಟ್ಟುವುದು ಬೇಸಾಯದ ನೇಗಿಲಿನಿಂದ ಗಾಡಿಯ ನೇಗಿಲಿಗೆ, ಚೀಲದಲ್ಲಿ ತುಂಬಿದ ಬೆಳೆಯನ್ನ ಭರಣಿಯಲ್ಲಿ ಅಂದರೆ ಭೂಮಿಯ ಆಗೇವು ಅಲ್ಲಿ ಕಣಜದಲ್ಲಿ ತುಂಬಿದ್ದಾರೆ. ಅಲ್ಲಿ ಕಾಳುಗಳು ಹಾಳಾಗದಂತೆ ರಕ್ಷಣೆ ಪಡೆಯುತ್ತದೆ. ಭತ್ತವನ್ನು ಹಾದಿಗೆ ಹಾಕಿಕೊಂಡು ಕೆಲವರು ಹಾಡು ಹಾಡುತ್ತ ಬಡಿಯುತ್ತಿದ್ದಾರೆ. ಕೆಲವರು ಎತ್ತು ಹಾಗೂ ಉರುಳುವ ಕಲ್ಲಿನ ಮೂಲಕ ತುಳಿಸುತ್ತಿರುವರು. ಅದಾದ ನಂತರದಲ್ಲಿ ಬೆಳೆದ ಬೆಳೆಗಳಾದ ಈರುಳ್ಳಿಯನ್ನು ಕೆಲವರಿಗೆ

ದಾನವಾಗಿ ಕೊಡಲಾಗುತ್ತದೆ. ಇನ್ನು ಕೆಲವರಿಗೆ ಅಂಬಲಿಯನ್ನು ದಾನ ಮಾಡಲಾಗುವುದು. ಮತ್ತೆ ಕೆಲವರಿಗೆ ಅಣ್ಣಯ್ಯನ ಹೊಲದಲ್ಲಿ ಬೆಳೆದ ಬೆಳೆಯನ್ನು ದಾನವಾಗಿ ನೀಡುತ್ತಾನೆ.

ಬೈರವನ ಹಾಡು

ನಂಜಯ್ಯ ಬೆಳೆದವನೆ ನಂಜುಬಟ್ಟಲ ಹೂವ್ವ
ಮಲ್ಲಯ್ಯ ಬೆಳದವನೆ ಮರುಗಾನ। ಮೇಲುಗೋಟೆ
ಚೆಲುವಯ್ಯ ಬೆಳೆದವನೆ ತೊಳಸೀಯ॥

ಚೆಲುವಯ್ಯ ಬೆಳೆದವನೆ ತೊಳಸೀ ಅನ್ನಿಕೆರೆಯ
ಈರಯ್ಯ ಬೆಳೆದವನೆ ಶ್ರೀಗಂಧ। ಚುಂಚನಗಿರಿಯ
ಬೈರವ ಬೆಳೆದವನೆ ಮಲ್ಲಿಗೆಯ॥

ಭೈರವನ ಹಾಡು ಇದು ಕಬ್ಬತ್ತಿ ರಂಗನಾಥಸ್ವಾಮಿಯಂತೆಯೇ ಭಕ್ತಿ ಪ್ರಧಾನವಾದ ಗೀತೆಯಾಗಿದೆ. ಭೈರವ ಎಂಬ ಹೆಸರು ಉಗ್ರವಾಗಿದ್ದರೂ ಕೂಡ ಆತ ಮೃದುತನವನ್ನು ಹೊಂದಿದವನು ಹೂವಿನಷ್ಟೆ ಮೃದು ಎಂದು ಈ ಗೀತೆಯಲ್ಲಿ ಹೇಳಲಾಗಿದೆ.

ನಂಜಯ್ಯ, ಮಲ್ಲಯ್ಯ, ಚೆಲುವಯ್ಯ, ಈರಯ್ಯ, ಭೈರವ ಹೀಗೆ ಹಲವಾರು ಹೆಸರುಗಳಿಂದ ಈ ಸ್ವಾಮಿಯನ್ನು ಕರೆಯಲಾಗಿದೆ.

ಈ ಮೇಲಿನ ಹೆಸರುಗಳನ್ನು ತಮ್ಮ ಹೆಸರುಗಳನ್ನಾಗಿ ಇರಿಸಿಕೊಂಡಿರುವ ಭಕ್ತರು ನಂಜಯ್ಯ ನಂಜುಬಟ್ಟಲು ಹೂ, ಮಲ್ಲಯ್ಯ ಮರುಗ, ಮೇಲುಕೋಟೆಯ ಚೆಲುವಯ್ಯ ಅನ್ನಿಕೆರೆಯ ಈರಯ್ಯ ಶ್ರೀಗಂಧ, ಚುಂಚನಗಿರಿಯ ಭೈರವ ಮಲ್ಲಿಗೆಯನ್ನು ಬೆಳೆದು ಭೈರವ ಮಲ್ಲಿಗೆಯನ್ನು ಬೆಳೆದು ಭೈರವನಿಗೆ ಆತನ ಪಾದಕ್ಕೆ ಭಕ್ತಿಪೂರ್ವಕವಾಗಿ ಅರ್ಪಿಸಿದ್ದಾರೆ.

ಸಣ್ಣನಾಮದಯ್ಯ ಸಾದಿನ ಬಟ್ಟಿನಯ್ಯ ನಿಮ್
ಮತ್ತೊಂದುಗಳಿಗೆ ನೆನೆದೇವು॥ ಬೈರುವ
ಅರಿಶಿಣ ಕುಂಕುಮ ಬೇಡೇವು॥

ಯಾರ ನೆನೆದವೇನು ದೇವರ ನೆನೆಯದ ಮೇಲೆ
ಯಾರ ನೆನೆದರೆ ಪಲವೇನು। ಚುಂಚನಗಿರಿಯ
ದಾರಿ ನಡೆದರೆ ದಣಿವಿಲ್ಲ॥

ಚುಂಚನಗಿರಿಯಲ್ಲಿ ಕಂಚು ಮುಖದ ಕಲ್ಲುಬಾವಿ
ಕಂಚು ಮುಖದಯ್ಯ ಮುಖ ತೊಳೆದು। ಬರುವಾಗ
ಕೆಂಪಿನ ಸೂಲಿಂದ್ರ ಮುಖವಾದ॥

ಸಣ್ಣ ನಾಮವನ್ನು ಹಚ್ಚಿರುವ ದೇವನ ನೆನೆಯುತ್ತ ಆತನಲ್ಲಿ ಅರಿಶಿನ ಕುಂಕುಮವನ್ನು ಬೇಡುತ್ತಿದ್ದಾರೆ. ಯಾರನ್ನು ನೆನೆಯಬೇಕು. ಯಾರನ್ನು ನೆನೆಯಬಾರದು, ಯಾರನ್ನು ನೆನೆದರೆ

ಫಲ ಸಿಗುತ್ತದೆ, ಆದ್ದರಿಂದ ಚುಂಚನಗಿರಿಯಲ್ಲಿರುವ ನಿನ್ನ ನೆನೆದು ಗಿರಿಯನ್ನು ಹತ್ತಿದರೆ ಯಾವ ರೀತಿಯ ಧಣಿವೂ ಕೂಡ ಆಗದು. ಚುಂಚನಗಿರಿಯಲ್ಲಿನ ಸ್ವಾಮಿಯು ಕಂಚಿನ ಮುಖದವನು ಆತನನ್ನು ಮೆರವಣಿಗೆಗೆ ತರುವ ಮೊದಲು ಅಲ್ಲಿಯೇ ಇರುವ ಕಂಚಿನ ಕಲ್ಲು ಬಾವಿಯಲ್ಲಿ ಆತನ ಮುಖ ತೊರೆದಾಗ ಆತ ಕೆಂಪಾಗಿ ಕಾಣುತ್ತಾನೆ.

ಚುಂಚನಗಿರಿಯ ಬೈರವನ ಬೆಟ್ಟದ ಮೇಲೆ
ಪಂಚ ಪಾಂಡವರ ಮಠಗಳ। ಕಟ್ಟಿಸ್ಯವರೆ
ಪಂಚಾಂಗ ಓದೋ ಗುರುಗಳಿಗೆ॥

ಸ್ವಾಮಿಗಿರಿ ಮೇಲೆ ಏನೇನು ಆಡಿಗ್ಯಾದೋ
ರಾಗಿರಬ್ಬಳಿಗೆ ಕೈತಾಳ। ಕಂಚಿನ ಕುದುರೆ
ಕಂಚಿನ ತಾಳೆ ನುಡಿದಾವು॥

ಬೈರುವನ ಗಿರಿ ಮೇಲೆ ಮತ್ತೇನು ಆಡಿಗ್ಯಾಯ್ತು
ಅಕ್ಕಿ ರಬ್ಬಳಿಗೆ ಕೈತಾಳೆ। ಕಂಚಿನ ಕುದುರೆ
ಕಂಚಿನ ತಾಳೆ ನುಡಿದಾವು॥

ಚುಂಚನ ಗಿರಿಯ ಭೈರವನ ಬೆಟ್ಟದ ಮೇಲೆ ಪಾಂಡವರು ವನವಾಸಕ್ಕೆ ಹೋಗಿ ಬಂದ ನೆನಪಿಗೆ ಮಠಗಳನ್ನು ಕಟ್ಟಲಾಗಿದೆ. ಅಲ್ಲಿ ಪಂಚಾಂಗವನ್ನು ಓದುವ ಗುರುಗಳು ನೆಲೆಸಿದ್ದಾರೆ. ಸ್ವಾಮಿಯ ಗಿರಿಯಲ್ಲಿ ರಹಸ್ಯಗಳು ಅನೇಕ ಇವೆ. ರಾಗಿ ಗುಡ್ಡವಿದೆ, ಅಕ್ಕಿ ಗುಡ್ಡವಿದೆ, ಪಾಂಡವರ ಮಠವಿದೆ, ಕಂಚಿನ ಕುದುರೆ ಮುಂತಾದವು ಇವೆ. ಅಲ್ಲಿ ಕಂಚಿನ ತಾಳೆಯನ್ನು ಪೂಜಾ ಸಂದರ್ಭದಲ್ಲಿ ನುಡಿಸಲಾಗುತ್ತದೆ.

ಇಟ್ಟರೆ ವಿಭೂತಿಯ ತೊಟ್ಟಿದೆ ರುದ್ರಾಕ್ಷಿಯ
ಪುಟ್ಟ ತಿರಿಸೂಲ ಬಲಗೈಲಿ। ಹಿಡಕೊಂಡು
ಬೆಟ್ಟಲ್ಲಿ ವಿಭೂತಿ ದರಿಸ್ಯಾರು

ಹಾದಿಲಿ ಗುರುವ ಕಂಡೆ ಪಾದಕ್ಕೆರುವುದ ಮರೆತೆ
ನಾವು ಹಾದಿಕಲ್ಲಾಗಿ ಕರಗಿದ್ಯೋ। ನಮ ಗುರುವೆ
ಬೆಟ್ಟಿನ ದೂಳುತದ ದಯಮಾಡಿ॥

ಈತನ ಭಕ್ತರ ವೇಷಭೂಷಣವೆಂದರೆ ರುದ್ರಾಕ್ಷಿ, ತ್ರಿಶೂಲ, ಮತ್ತು ವಿಭೂತಿ, ಜಂಗಮರು ಇವುಗಳನ್ನು ಧರಿಸಿಕೊಂಡು ಗಿರಿಗೆ ಹೊರಟಿದ್ದಾರೆ. ಇಂತಹ ಗುರುಗಳನ್ನು ಕಂಡು ಅವರ ಪಾದಕ್ಕೆ ಎರಗಿ ಆಶೀರ್ವಾದ ಪಡೆಯುವುದನ್ನು ಮರೆತಿರುವೆ ಕ್ಷಮಿಸು, ನಮ್ಮನ್ನು ದಾರಿಯಲ್ಲಿ ಕಲ್ಲಾಗುವಂತೆ, ಇಲ್ಲವೆ, ನಿಮ್ಮ ಪಾದದ ಧೂಳಾಗುವಂತೆ ದಯಪಾಲಿಸು ಎಂದು ಕ್ಷಮೆಯನ್ನು ಯಾಚಿಸಲಾಗಿದೆ.

ಗುರುವು ಬಂದಾರೆ ಗುರುಗಂಜಿ ಮೈಯ್ಯೋರು
ಹಣ್ಣು ತಂದೀವಿ ಹಲಸೀನ। ಎಮ್ಮೆಯ
ಗಿಣ್ಣ ತಂದೀವಿ ಸಲಹಯ್ಯ॥

ಕೆರಿಯ ಕಡಿನಲ್ಲಿ ಕೆಣಕಿದೋ ಕೆಂದೂಳು
ಮಡಿವಾಳರ್ಹೆಣ್ಣೆ ವಡಿಯತ್ತೆ। ಚುಂಚನಗಿರಿಯ
ಹೊಸಕುದುರೆ ನೀರ ಕುಡಿದಾವು॥

ಅಗಸರ ಕಡಿನಲ್ಲಿ ಮಿಸುಗೀತು ಕೆಂದೂಳು
ಅಗಸಾರ ಹೆಣ್ಣೆ ಮಡಿಯೆತ್ತ। ಚುಂಚನಗಿರಿಯ
ಇಡಿಗುದುರೆ ನೀರ ಕುಡಿದಾವು॥

ಮನೆಗೆ ಬಂದ ಗುರುಗಳಿಗೆ ಗಂಜಿಯನ್ನು ನೀಡದೆ ಅವರಿಗೆ ಹಣ್ಣು ನೀಡುತ್ತೇವೆ. ಎಮ್ಮೆಯ ಗಿಣ್ಣ ಕೊಡುತ್ತೇವೆ. ನಮ್ಮನ್ನು ಸಲಹು ಸ್ವಾಮಿ ಎಂದು ಭಕ್ತರು ಬೇಡುತ್ತಿದ್ದಾರೆ. ಕೆರೆಯ ಕಡೆಯಿಂದ ಮತ್ತು ಅಗಸರ ಬೀದಿ ಕಡೆಯಿಂದ ಸ್ವಾಮಿಯ ಕುದುರೆಗಳ ಆಗಮನವಾಗುತ್ತದೆ. ಆ ವೇಳೆಗೆ ಆ ಕುದುರೆಗಳಿಗೆ ದಣಿವಾರಿಸಲು ನೀರು ಕುಡಿಯಲು ಅವಕಾಶಮಾಡಿಕೊಡುವುದಾಗಿ ಸ್ವಾಮಿಯಲ್ಲಿ ಹರಿಕೆ ಮಾಡುತ್ತಾರೆ ಭಕ್ತರು.

ಅಪ್ಪ ಮರೆದವನೆ ತುಪ್ಪ ಗರುಡನ ಮೇಲೆ
ಇಪ್ಪತ್ತೆ ಬೀದಿ ಒಳಗೆಲ್ಲ ಬೈನುವನ
ಗೊಂಬೆಯ ತೇರು ಹರಿದಾವು

ಅಣ್ಣ ಮೆರೆದವನೆ ಹಣ್ಣು ಗರುಡನ ಮೇಲೆ
ಹನ್ನೆರಡು ಬೀದಿ ಒಳಗೆಲ್ಲ। ಬೈರುವನ
ಶೃಂಗಾರದ ತೇರು ಹರಿದಾವು

ತುಪ್ಪ ಕಾಯಿಸಿದ್ದೆ ಬಟ್ಟಲ ಬೆಳಗಿದ್ದೆ
ಪುಟ್ಟ ಮಾಳಿಗೆ ಒಳಗಿದ್ದೆ। ನಮ ಗುರುವೆ
ಗುರುವು ಬರುವುದ ಅರಿಯದೆ

ಹಾಲು ಕಾಯಿಸಿದ್ದೆ ಹರಿವಾಣ ಬೆಳಗಿದ್ದೆ
ಬಾಳೆಯ ಹಣ್ಣ ಸುರಿದಿದ್ದೆ। ನಮ್ಮ ಗುರುವೆ
ಬಾಯಾರಿ ಬರುವ ಗುರುವೀಗೆ॥

ನಿನ್ನ ನೈವೇದ್ಯಕ್ಕೆ ತುಪ್ಪ ಹಣ್ಣುಗಳೇ ಮುಖ್ಯ. ಆದರೆ ತುಪ್ಪ, ಹಣ್ಣುಗಳಲ್ಲಿಯೇ ಮೆರೆದ ಅಪ್ಪ, ಅಣ್ಣಂದಿರು ನಿನ್ನ ನೈವೇದ್ಯಕ್ಕೆ ಇವುಗಳನ್ನು ಒಪ್ಪಿಸಿಲ್ಲ. ನಿನ್ನ ತೇರು ಅವರಲ್ಲಿಗೆ ಅವರತ್ತ ಹರಿದಿದೆ. ನೀನು ಎಷ್ಟು ಮೃದುವೆಂಬುದು ಇದರಿಂದ ಅರಿವಾಗುತ್ತದೆ.

ಮೆರವಣಿಗೆ ಬರುವ ಸ್ವಾಮಿಗೆ ಬಟ್ಟಲು ಬೆಳಗಿ ತುಪ್ಪ ಅದರಲ್ಲಿ ಸುರಿದು ಕಾಯಿಸಿ ಸಣ್ಣ ಮನೆಯಲ್ಲಿ ಇದ್ದೆ. ಇದೇ ಸಂತೋಷದಲ್ಲಿ ಸ್ವಾಮಿ ಬಂದಿರುವುದನ್ನು ಮರೆತೆ ಕ್ಷಮಿಸು. ಹಾಗೆಯೇ ಸ್ವಾಮಿಗೆ ಹರಿವಾಣ ಬೆಳಗಿ ಅದರ ತುಂಬ ಸುಲಿದ ಬಾಳೆ ಹಣ್ಣುಗಳನ್ನು ಹಸಿದು ಬರುವ ಗುರುಗೆ (ಸ್ವಾಮಿಗೆ) ಇಟ್ಟಿರುವೆ ಬಂದು ಸ್ವೀಕರಿಸು ಸ್ವಾಮಿ ಎಂದು ವಿಧವಿಧವಾಗಿ ಬೇಡುತ್ತಿದ್ದಾರೆ.

ಎದ್ದು ಬಾರೆಯ ಮೇಲೆ ಹದ್ದು ಮೊಟ್ಟೆಯನಿಕ್ಕಿ
ಭದ್ರೆ ನೀನೆಂಬೋ ಹಸುಬಂದು। ಬೈರುವನ
ಸಿದ್ದರಿಗೆ ಹಾಲ ಕರಿದಾವು॥

ಮೂಡು ಬಾರೆಯ ಮೇಲೆ ಹಾವು ಮಟ್ಟೆಯನಿಕ್ಕಿ
ಹಾವೇರಿಯೆಂಬ ಹಸುಬಂದು। ಬೈರುವನ
ಸ್ವಾಮಿಗಳಿಗೆ ಹಾಲಕರಿದಾವು॥

ಕಡುವೆ ಕಾಡೆಮ್ಮೆ ಕರಿದಾವುನೊರೆ ಹಾಲು
ಸ್ವಾಮಿ ಬೈರುವನ ಗಿರಿ ಮೇಲೆ। ಗುಡಿಬಾಗಿಲ
ಮುಂದೆ ಹುಲಿ ಬಂದು ಹಾಲಕರಿದಾವು॥

ಸ್ವಾಮಿಯ ಭಕ್ತರು ಧ್ಯಾನ ನಿರತರಾಗಿದ್ದಾರೆ. ಅದರ ಮೇಲೆ ಹುತ್ತ, ಗಿಡ ಬೆಳೆದಿದೆ. ಹದ್ದು ಗೂಡಲ್ಲಿ ಮೊಟ್ಟೆ ಇಟ್ಟಿದೆ. ಹಾವು ಹುತ್ತದಲ್ಲಿ ಮೊಟ್ಟೆ ಇಟ್ಟಿದೆ. ಭಕ್ತಿ, ಕಾವೇರಿ ಎಂಬ ಹಸುಗಳು ಈ ಸಿದ್ಧರಿಗೆ, ಸ್ವಾಮಿಗಳಿಗೆ ಹುತ್ತದ ಮೇಲೆ ನಿಂತು ಹಾಲು ಕರೆಯುತ್ತಿದೆ. ಹಸಿದವರಿಗೆ ಹಸುವಿನ ಮೂಲಕ ನೀನು ಹಾಲು ಕೊಡಿಸಿದೆ. ನೀನು ದಯಾಮಯಿ ಅಂತೆಯೇ ಜಿಂಕೆ, ಕಾಡೆಮ್ಮೆ ಹೂ ನಿನ್ನ ಬೆಟ್ಟದ ಮೇಲಿರುವ ಗುಡಿಗೆ, ನೊರೆ ಹಾಲನ್ನು ನೀಡುತ್ತಿವೆ. ನಿನ್ನ ಮಹಾತ್ಮೆಯನ್ನು ಎಷ್ಟು ಹೊಗಳಿದರೂ ಸಾಲದು ಸ್ವಾಮಿ ಭೈರವನೆ.

ಲೇಖನಗಳ ಅವಲೋಕನ

ತತ್ವಪಾಲನೆ: ನುಡಿದಂತೆ ನಡೆ

ತತ್ವವು ಎಷ್ಟೇ ಉದಾತ್ತವಾಗಿರಲಿ, ಅದು ಕೃತಿಯ ರೂಪವನ್ನು ತಾಳದೇ ಇದ್ದರೆ ಅಪ್ರಯೋಜಕವು ನಿಸ್ಸತ್ವವೂ ಆಗುತ್ತದೆ. ಜಗತ್ತಿನಲ್ಲಿ ಧರ್ಮ ಸಂಸ್ಥಾಪಕರು ಉದ್ಭವಿಸಿದ್ದಾರೆ. ಅನೇಕ ಸಮಾಜ ಸುಧಾರಕರು ಜನಿಸಿದ್ದಾರೆ. ತಮ್ಮ ಜೀವಿತದ ಸರ್ವಸ್ವವನ್ನು ಮಾನವ ಕೋಟೆಯ ಕಲ್ಯಾಣಕ್ಕಾಗಿ ಅರ್ಪಿಸಿದ್ದಾರೆ. ಅಹರ್ನಿಶೆಯೂ ಅವಿಶ್ರಾಂತರಾಗಿ ಮಾನವರ ಅಭ್ಯುದಯಕ್ಕಾಗಿ ಶ್ರಮಿಸಿದ್ದಾರೆ. ಇಷ್ಟಾದರೂ ಮಾನವರ ನೀತಿಯ ಮಟ್ಟವೇಕೆ ಉನ್ನತವಾಗಲಿಲ್ಲ? ಅವರ ಜೀವನವೇಕೆ ಧರ್ಮ ಮಾರ್ಗಾವಲಂಬಿಯಾಗಲಿಲ್ಲ? ಅವರಿಗೆ ಅವರ ಜೀವಿತದ ಪರಮೋದ್ದೇಶ ಯಾವುದೆಂಬುದರ ಅರಿವೇಕೆ ಉಂಟಾಗಲಿಲ್ಲ? ಇದರ

ಪ್ರಬಲ ಕಾರಣವೇನು? ಮಾನವನು ಸ್ವಾಭಾವಿಕವಾಗಿಯೇ ಕಷ್ಟ ಸಹಿಷ್ಣುವಲ್ಲ. ನೀತಿಪಾಲಕನಲ್ಲ. ಶಿಸ್ತಿನ ಜೀವನಕ್ಕೆ ಒಳಪಡುವವನಲ್ಲ. ಆತನ ಅಂಗರಚನೆಯು ಮಳೆ, ಗಾಳಿ, ಬಿಸಿಲು, ಚಳಿ ಇವುಗಳನ್ನು ಸಹಿಸುವ ಪರಿಸ್ಥಿತಿಯಲ್ಲಿರುವುದಿಲ್ಲ. ಆತನು ಸದಾ ಸುಖಾಭಿಲಾಷೆ ಉಳ್ಳವನಾಗಿರುತ್ತಾನೆ. ಹಗಲಿರುಳೂ ಸುಖದ ನಾಮ ಮಂತ್ರವನ್ನೇ ಜಪಿಸುತ್ತಿರುತ್ತಾನೆ. ಸಂದರ್ಭ ಒದಗಿ ಬಂದಂತೆ ಸುಖೋಪಜೀವಿಯಾಗಲು ಪ್ರಯತ್ನಿಸುತ್ತಿರುತ್ತಾನೆ. ಆದ್ದರಿಂದಲೇ ದೇಹ ದಂಡನೆ, ತ್ಯಾಗ ಕಷ್ಟ ಸಹಿಷ್ಣುತೆ ಆತನಿಗೆ ಅಷ್ಟಾಗಿ ರುಚಿಸುವುದಿಲ್ಲ. ಕಾರಣ ಉದಾತ್ತ ತತ್ವಪಾಲನೆಯ ವಿಚಾರದಲ್ಲಿ ಆತನು ನೇರ ಭಿನ್ನನಾಗಿರುತ್ತಾನೆ. ಈ ಕಾರಣಗಳಿಂದಲೇ ಪ್ರಾಚೀನ ಹಾಗೂ ಅರ್ವಾಚೀನ ತತ್ವಗಳು ಎಷ್ಟೇ ಸಮಂಜಸವಾಗಿದ್ದರೂ ಫಲ ಪ್ರಾಪ್ತಿಯನ್ನೂ ಕಾಣುವುದಿಲ್ಲ. ಎಲ್ಲಿಯವರೆಗೆ ಸೂರ್ಯ ಚಂದ್ರರಲ್ಲಿ ಕಿರಣಗಳಿರುವುದಿಲ್ಲವೋ ಅಲ್ಲಿಯವರೆಗೆ ಅವುಗಳ ಪ್ರಕಾರವು ಸರ್ವತ್ರ ವ್ಯಾಪ್ತವಾಗದು. ಎಲ್ಲಿಯವರೆಗೆ ಗಾಳಿಯಲ್ಲಿ ಚಲನೆ ಇರುವುದಿಲ್ಲವೋ ಅಲ್ಲಿಯವರೆಗೂ ಪುಷ್ಪದ ಸೌರಭವೂ ಹೊರಹೊಮ್ಮಲಾರದು. ಎಲ್ಲಿಯವರೆಗೆ ಶಿಷ್ಯರಿರುವುದಿಲ್ಲವೋ ಅಲ್ಲಿಯವರೆಗೆ ಗುರುವಿನ ಪ್ರಭಾವವು ಪ್ರಸಿದ್ಧವಾಗಲಾರದು, ಹಾಗೆಯೇ ಪರಿಶ್ರಮಗಳೂ, ತ್ಯಾಗಿಗಳೂ, ನಿಸ್ವಾರ್ಥಿಗಳೂ, ಆದ ಶ್ರೇಷ್ಠ ಜೀವಿಗಳು ಇರುವುದಿಲ್ಲವೋ ಅಲ್ಲಿಯವರೆಗೂ ಲೋಕಪ್ರಿಯ ಉದಾತ್ತ ತತ್ವಗಳು ಪರಿಪಾಲಿಸಲ್ಪಡಲಾರವು.

ಆದ್ದರಿಂದ ನಾವು ನಮ್ಮ ರಾಷ್ಟ್ರದ ಕೀರ್ತಿ ಗೌರವವನ್ನು ಸಾರ ಬೇಕಾದರೆ ನಮ್ಮ ಪೂರ್ವೀಕರ ಅನುಕರಣಿಯ ಯೋಗ್ಯಜೀವನ ವಿಧಾನವನ್ನು ಬೆಳಗಬೇಕಾದರೆ, ಅಜ್ಞಾನ ಅಂಧಕಾರಮಯ ಪ್ರಪಂಚದಲ್ಲಿ ಜ್ಞಾನದ ಸೊಡರನ್ನು ಹಿಡಿದು ಪಥ ಭ್ರಷ್ಟ ಜನತೆಗೆ ಸನ್ಮಾರ್ಗವನ್ನು ತೋರಿಸಬೇಕಾದರೆ ಶಿಸ್ತು, ಸಂಯಮ, ಪರಹಿತ ಚಿಂತನೆಯ ಪ್ರತಿರೂಪದಂತೆ ನಮ್ಮನ್ನು ರೂಢಿಸಿಕೊಳ್ಳಬೇಕಾಗುತ್ತದೆ. "ನುಡಿಯಷ್ಟು ನಡೆಯು ಸುಲಭವಲ್ಲ" ನುಡಿಗೆ ತಕ್ಕ ನಡೆಯಾದರೇನೇ ನಾವು ಜನತೆಯ ಎದುರಿನಲ್ಲಿ ನಿದರ್ಶನ ರೂಪವಾಗಿ ಬೆಳಗ ಬಲ್ಲೆವು. ಈ ವಿಚಾರಗಳನ್ನು ಮಥನ ಮಾಡಿ ವಿದ್ಯಾರ್ಥಿಗಳು ನುಡಿದಂತೆ ನಡೆಯುವ ಜೀವನವನ್ನು ಅನುಷ್ಠಾನಕ್ಕೆ ತರಲು ಯತ್ನಿಸಬೇಕು. ಅದರಿಂದಲೇ ಉದಾತ್ತಾ ತತ್ವ ಪರಿಪಾಲಿಸಲ್ಪಡುವುದು. ವಿಶ್ವದ ಕಲ್ಯಾಣವು ಕರುಣಿಸಲ್ಪಡುವುದು. ಭಗವಂತನ ಆಸೆಯು ಪೂರ್ಣಗೊಳಿಸಲ್ಪಡುವುದು. ಮರ್ತ್ಯವು ಸ್ವರ್ಗವೆನಿಸುವುದು.

ಬಸವನ ತತ್ವಗಳು:

೧. ಸರ್ವಸ್ವತಂತ್ರ ಸಮಾನತೆಯ ಸಮಾಜದ ರಚನೆಗಾಗಿ ಧರ್ಮ ಅತ್ಯವಶ್ಯ.

೨. ಸಾಮಾಜಿಕ ರಾಜಕೀಯಾರ್ಥಿಕಾದಿ ಮಾನವನ ಸಕಲ ವ್ಯವಹಾರ ಮತ್ತು

ಕಾರ್ಯಕ್ಷೇತ್ರಗಳಲ್ಲಿ ಧರ್ಮವೇ ಅಡಿಗಲ್ಲಾಗಿರಬೇಕು. ಬದುಕೇ ಧರ್ಮವಾಗಿ, ಧರ್ಮವೇ ಅವನ ಬದುಕಾಗಿರಬೇಕು.

೩. ಲಿಂಗಾಂಗ ಸಾಮರಸ್ಯವೇ ಧರ್ಮದ ಹಾಗೂ ಬದುಕಿನ ಅಂತಿಮಗುರಿಯಾಗಿರಬೇಕು.

೪. ವಿವಿಧ ಜಾಡ್ಯಗಳಿಂದ ಜಡ್ಡುಗಟ್ಟಿರುವ ಸಮಾಜದ ಪ್ರಗತಿಗೆ ಸಮಗ್ರ ಕ್ರಾಂತಿ ಅನಿವಾರ್ಯ, ಧರ್ಮ ಆ ಕ್ರಾಂತಿಯ ಚಾಲಕ ಶಕ್ತಿಯಾಗಿರಬೇಕು. ಜಗತ್ತಿನ ಪುನಃ ನಿರ್ಮಾಣ ಧರ್ಮದ ಗುರಿಯಾಗಿರಬೇಕು.

೫. ನಿಜವಾದ ಧರ್ಮ ಮಾನವನ ಅಂತಃಕರಣದಲ್ಲಿರುತ್ತದೆಯೇ ಹೊರತು, ಶಾಸ್ತ್ರಗಳಲ್ಲಿಲ್ಲ, ವೇದ ಪುರಾಣಗಳಲ್ಲಿಲ್ಲ.

೬. ದಯೆಯೇ ಧರ್ಮದ ಮೂಲವಾಗಬೇಕು. ಕಳ್ಳತನ, ಕೊಲೆ, ಸುಲಿಗೆ, ಸುಳ್ಳು, ತಟವಟ, ಹಾದರ, ಭೋಗಲಾಲಸೆ, ಪರಧನಾಪಹಾರ, ಪರವಂಚನೆ, ಕೋಪ, ಮದಮಾತ್ಸರ್ಯಾದಿ ಅರಿಷಡ್ವರ್ಗಗಳಿಂದ ಮುಕ್ತಗೊಂಡ ವ್ಯಕ್ತಿಯಲ್ಲಿ ಧರ್ಮ ಬೇರು ಬಿಡುತ್ತದೆ. ಧರ್ಮವೆಂದೂ ನೀತಿ ಬಾಹಿರವಾದದ್ದಲ್ಲ.

೭. ಸ್ತ್ರೀ ಮೊದಲುಗೊಂಡು ಪ್ರತಿಯೊಬ್ಬ ವ್ಯಕ್ತಿಗೂ ಜ್ಞಾನ ಪ್ರಾಪ್ತಿಯ ಮತ್ತು ಆಧ್ಯಾತ್ಮ ಸಾಧನೆಯ ಅವಕಾಶವಿರಬೇಕು. ಶೀಲವಿಲ್ಲದ ಜ್ಞಾನ ನಿಷ್ಪ್ರಯೋಜಕ ಸರ್ವ ಸ್ವಾತಂತ್ರ್ಯಕ್ಕೆ ಪುರುಷನಂತೆ ಸ್ತ್ರೀಯೂ ಹಕ್ಕುದಾರಳು.

೮. ಜಾತಿವರ್ಣಗಳ ಭೇದ ನಿರ್ನಾಮವಾಗಬೇಕು. ಅಸ್ಪೃಶ್ಯತೆ ತೊಲಗಬೇಕು. ಉಚ್ಚ ಆದರ್ಶ ಮತ್ತು ಮೌಲ್ಯಗಳಿಗೆ ಮಹತ್ವವಿರಬೇಕೇ ಹೊರತು ಉಚ್ಚ ಜಾತಿಗಳಲ್ಲ.

೯. ಕಾಯಕ, ದಾಸೋಹಿಗಳೇ ಸಾಮಾಜಿಕಾರ್ಥಿಕ ಪ್ರಗತಿಗೆ ಮೂಲ ಕಾಯಕರಿಂದ ಉತ್ಪತ್ತಿ ಹೆಚ್ಚಿ ಬಡತನ ನಿವಾರಣೆಯಾಗುತ್ತದೆ. ದಾಸೋಹದಿಂದ ಧನ ಸಂಗ್ರಹ ಹತೋಟಿಗೊಳಗಾಗಿ ಉತ್ಪತ್ತಿ ಸಮಾನವಾಗಿ ಹಂಚಿಕೆಯಾಗುತ್ತದೆ. ಜಂಗಮತತ್ವಕ್ಕೂ ದಾಸೋಹಕ್ಕೂ ಹೊಕ್ಕುಳ ಬಳ್ಳಿಯ ನಂಟು ಕಾಯಕ ದಾಸೋಹಗಳು ಧರ್ಮದ ರಥವನ್ನೆಳೆಯುವ ವಾಜಿಗಳು, ಸಿರಿವಂತಿಕೆ ಕೆಟ್ಟದ್ದು. ಶೋಷಣೆ ಮಹಾಪಾಪ, ದುಡಿಮೆಯಿಲ್ಲದೆ ಜೀವಿಕೆ ಸಾಗಿಸುವುದು ಚೋರತನ.

೧೦. ಮರ್ತ್ಯ ಲೋಕವೆಂಬುದು ಕರ್ತಾರನ ಕಮ್ಮಟ, ದೇವಲೋಕ ಮರ್ತ್ಯಲೋಕವೆಂಬುದು ಬೇರಿಲ್ಲ. ಸತಿವಿಡಿದು ನಿರ್ವಾಣ ಕಾಣಬೇಕು.

೧೧. ಸನ್ಯಾಸಿ ಮೇಲಲ್ಲ. ಸಂಸಾರ ಕೀಳಲ್ಲ, ಯಾಚನೆಯಾಗಲಿ ಧನ ಸಂಗ್ರಹವಾಗಲಿ ಮಹಾಪರಾಧ, ಇಂದ್ರಿಯ ನಿಗ್ರಹವ ಮಾಡಿದರೆ ದೋಷಗಳು ಹೊಂದುತ್ತವೆ.

೧೨. ಕಾಯಕವೇ ಕೈಲಾಸ, ದೇಹವೇ ದೇವಾಲಯ, ದೇಹದೊಳಗೆ ದೇವರಿರುವಾಗ, ಸ್ಥಾವರಲಿಂಗಕ್ಕೆ ಬದಲಾಗಿ ಇಷ್ಟ ಲಿಂಗವಿರುವಾಗ, ದೇವಾಲಯ ನಿರ್ಮಾಣ ಕೂಡದು ಪುರೋಹಿತಶಾಹಿ ಮಣ್ಣು ಗೂಡಬೇಕು.

೧೩. ದೇವನೊಬ್ಬ ನಾಮ ಹಲವು. ಲಿಂಗಪೂಜಕರಲ್ಲಿ ಬೇಧ ಸಲ್ಲದು, ಅಧ್ಯಾತ್ಮ ಸಿದ್ಧಿಗೆ ಆತ್ಮಶೋಧನೆ ಮೊದಲು ಷಟ್ಸ್ಥಲ ಸಾಧನೆ ಅನಿವಾರ್ಯ ತನ್ನನ್ನು ತಾನರಿಯುವುದೆ ಆಧ್ಯಾತ್ಮ ಸಾಧನೆಯ ಗುರಿ.

೧೪. ಹಾಲನೇಮಕ್ಕಿಂತ ಅಂಬಲಿಯ ನೇಮವನ್ನು ಪುರಸ್ಕರಿಸುವ, ಬೇಕೆಂಬಹುದನ್ನು ಮರೆತು ಸಾಕೆಂಬ ತತ್ವವನ್ನು ಪರಿಪಾಲಿಸುವ ಇದ್ದುದನ್ನು ಇತರರೊಡನೆ ಹಂಚಿಕೊಳ್ಳುವ ಪರಿಯೇ ಸಮಾಜವಾದ.

೧೫. ಕಾಯಕದ ಮೂಲಕ ಗಳಿಸುವ ಜ್ಞಾನವೇ ಶಿಕ್ಷಣದ ಗುರಿಯಾಗಬೇಕು.

೧೬. ಶ್ರೀಸಾಮಾನ್ಯನ ಮನವನ್ನು ಮುಟ್ಟುವಲ್ಲಿ, ಸಮಾಜದ ಉದ್ಧಾರಕ್ಕೆ ಸಾಧನವಾಗುವಲ್ಲಿ, ಜೀವನದ ಔನತ್ಯವನ್ನು ಸಾಧಿಸುವಲ್ಲಿ ಸಾಹಿತ್ಯ ಸಾರ್ಥಕತೆಯಿದೆ.

೧೭. ಒಡಲೊಡವೆ ಹಡೆದರ್ಥ ಶಿವನ ಸೊಮ್ಮು

೧೮. ಪ್ರಜಾಪ್ರಭುತ್ವ ರಾಜಕೀಯಾರ್ಥಿಕ ನೀತಿಯೆ ಗುರಿಯಾಗಬೇಕು.

ಜಾನಪದ ಕಾರ್ಯಕ್ರಮಗಳ ನೇತೃತ್ವದ ಹಿನ್ನೆಲೆ

ಶ್ರೀಯುತರು ರೈತ ಕುಟುಂಬದಲ್ಲಿ ಜನಿಸಿದವರು, ಆದರಿಂದಲೇ ಅವರಿಗೆ ಜಾನಪದದ ಬಗ್ಗೆ ಕಾಳಜಿ ಹೆಚ್ಚು. ಸರಳವಾದ ಜೀವನವನ್ನು ನಡೆಸುವ ವ್ಯಕ್ತಿಯವರು. ೧೯೫೫ ರಿಂದಲೇ ಕರಿಂಖಾನ್ ಎಸ್.ಕೆ. ಅವರ ಸಂಪರ್ಕ ಇವರಿಗೆ ಇತ್ತು. ಇದರಿಂದಾಗಿ ಜಾನಪದ ಸಾಹಿತ್ಯದಲ್ಲಿ ಇನ್ನು ಹೆಚ್ಚಿನ ಆಸಕ್ತಿಯನ್ನು ಅವರು ವಹಿಸಿದರು.

೧೯೫೬-೫೭ರಲ್ಲಿ ಮುತ್ತಿಗೆ ಹಿರೇಹಳ್ಳಿಯ ಸುತ್ತು ಮುತ್ತಲಿನ ಹಳ್ಳಿಯ ಕಲಾವಿದರನ್ನು ಸೇರಿಸಿ ಜಡೆಕೋಲಾಟ ಮತ್ತು ಇತರೆ ಕಲೆಗಳನ್ನು ಒಳಗೊಂಡ ಪ್ರದರ್ಶನವನ್ನು ಎರಡು ದಿನಗಳು ಏರ್ಪಡಿಸಿದರು. ೧೯೬೦ರಲ್ಲಿ ಕಬ್ಬತ್ತಿ ಗ್ರಾಮದಲ್ಲಿ ಕಟ್ಟಾಯ ಹೋಬಳಿ ಮಟ್ಟದ ಯುವಕರನ್ನು ಸೇರಿಸಿ ಜನಪದ ಗೀತಾಗಾಯನ ಸ್ಪರ್ಧೆ ಕೋಲಾಟ ಹಾಗೂ ಸೋಬಾನೆ ಪದಗಳ ಪ್ರದರ್ಶನವನ್ನು ಏರ್ಪಡಿಸಿದರು. ೧೯೬೦ರಲ್ಲಿ ಮೈಸೂರಿನಲ್ಲಿ ವ್ಯಾಸಂಗ ಮಾಡುತ್ತಿದ್ದ ಹಾಸನ ಜಿಲ್ಲಾ ವಿದ್ಯಾರ್ಥಿಗಳನ್ನೆಲ್ಲಾ ಒಟ್ಟು ಸೇರಿಸಿ ಹಾಸನ ಜಿಲ್ಲಾ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ಜನಪದ ಗೀತಾ ಗಾಯನ ಸ್ಪರ್ಧೆ ಮತ್ತು ಕೋಲಾಟ ಪ್ರದರ್ಶನವನ್ನು ಏರ್ಪಡಿಸಿ ಜನಪದ ಕಲೆ ಮತ್ತು ಸಾಹಿತ್ಯದ ಬಗ್ಗೆ ಯುವ ಜನಾಂಗದಲ್ಲಿ ಆಸಕ್ತಿ ಮೂಡಿಸಿದರು. ಈ ಎಲ್ಲಾ ಆಸಕ್ತಿಯಿಂದ ೧೯೭೬ರಲ್ಲಿ ಆಯ್ದ ಜನಪದ ಗೀತೆಗಳ ಕಬ್ಬತ್ತಿರಂಗ ಎಂಬ

ಜನಪದ ಗೀತೆಗಳ ಸಂಗ್ರಹವನ್ನು ಪ್ರಕಟಿಸಿದರು. ಡಾ. ವೀರೇಂದ್ರ ಹೆಗಡೆಯವರು ಈ ಕೃತಿ ಬಿಡುಗಡೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಸನ್ಮಾನ್ಯ ಶ್ರೀ ಗೊರೂರು ರಾಮಸ್ವಾಮಿ ಆಯ್ಯಂಗಾರ್‌ರವರು ಹಾರೈಕೆಯ ನುಡಿಗಳನ್ನಾಡಿದರು. ಈ ಮೂಲಕ ಸುಶೀಲೇಗೌಡರ ಮನದಲ್ಲಿನ ಜನಪದ ಸಾಹಿತ್ಯದ ತುಡಿತವನ್ನು ಪ್ರಶಂಸಿದರು. ೧೯೮೪ರಲ್ಲಿ ಅರಕಲಗೂಡು ತಾಲ್ಲೂಕು ಮಲ್ಲಿಪಟ್ಟಣ ಹೋಬಳಿಯಲ್ಲಿ ಗ್ರಾಮೀಣ ಯುವಕ ಯುವತಿಯರನ್ನು ಸಂಘಟಿಸಿ ಸ್ಥಳೀಯ ಮಹಿಳಾ ಕಲಾವಿದರಿಂದ "ರಾಗಿಕಲ್ಲು ಬೀಸುವ ಹಾಡಿನ ಸ್ಪರ್ಧೆ" ಯನ್ನು ಏರ್ಪಾಟುಮಾಡಿದರು. ೧೯೮೫ರಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಾರ್ತಾ ಮತ್ತು ಪ್ರಚಾರ ಇಲಾಖೆ ಮತ್ತು ಕ್ಷೇತ್ರ ಪ್ರಚಾರ ಇಲಾಖೆ ಹಾಗೂ ನೆಹರು ಯುವ ಕೇಂದ್ರ ಇವರ ಸಂಯುಕ್ತಾ ಆಶ್ರಯದಲ್ಲಿ ಸಂತ ಫಿಲೋಮಿನಾ ಬಯಲು ರಂಗಮಂದಿರ ಹಾಸನದಲ್ಲಿ ಹಾಸನ ಜಿಲ್ಲಾ ಕಲಾವಿದರನ್ನು ಸೇರಿಸಿ ವೀರಗಾಸೆ ಕುಣಿತ ಹಾಗೂ ನಂದಿಕೋಲು ಪ್ರದರ್ಶನ ಮೇಳವನ್ನು ಏರ್ಪಡಿಸಿದರು. ೧೯೮೬-೮೭ರಲ್ಲಿ ಹಾಸನ ಸೀತಾರಾಮಾಂಜನೇಯ ದೇವಸ್ಥಾನದಲ್ಲಿ ನಾಡಿನ ಪ್ರಸಿದ್ಧ ಜನಪದ ಹಾಡುಗಾರರಾದ ಶ್ರೀ ಕೆ.ಆರ್. ಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಜನಪದ ಸಮ್ಮೇಳನ ನಡೆದಾಗ ಸಂಘಟಕರಾಗಿ ಕ್ರೀಯಾಶೀಲವಾಗಿ ತೊಡಗಿದ್ದರು. ಸ್ನಾತಕೋತ್ತರ ಕೇಂದ್ರ ಹೇಮಗಂಗೋತ್ರಿ ಹಾಗೂ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಆಶ್ರಯದಲ್ಲಿ ಅಂದಿನ ಅಧ್ಯಕ್ಷರಾದ ಡಾ. ಹೆಚ್.ಜೆ. ಲಕ್ಕಪ್ಪಗೌಡರ ಅಧ್ಯಕ್ಷತೆಯಲ್ಲಿ ನಡೆದ ಜನಪದ ಕಮ್ಮಟದಲ್ಲಿ 'ಹಾಸನ ಜಿಲ್ಲೆಯ ಜಾತ್ರೆಗಳು' ಎಂಬ ವಿಷಯದ ಮೇಲೆ ಪ್ರಬಂಧ ಮಂಡನೆಯನ್ನು ಮಾಡಿದರು. ಹಾಸನ ಜಿಲ್ಲೆ ದುದ್ದ ಹೋಬಳಿ ಕೇಂದ್ರದಲ್ಲಿ ನೆಹರು ಯುವ ಕೇಂದ್ರದ ಆಶ್ರಯದಲ್ಲಿ ಅಂದಿನ ಜನಪದ ಮತ್ತು ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರಾಗಿದ್ದ ಶ್ರೀ ಹೆಚ್.ಎಲ್. ನಾಗೇಗೌಡರ ಹಾಗೂ ಅಂದಿನ ಸ್ಥಳೀಯ ವಿಧಾನ ಸಭಾ ಸದಸ್ಯರಾದ ಶ್ರೀ ನಂಜೇಗೌಡರ ಸಮಕ್ಷಮದಲ್ಲಿ ಹಾಸನ ಜಿಲ್ಲಾ ಜನಪದ ಮೇಳ, ರಾಗಿ ಕಲ್ಲು ಬೀಸುವ ಪದ, ಮದುವೆಯ ಸಂದರ್ಭದಲ್ಲಿ ಬೀಗ ಬೀಗತಿಯರನ್ನು ಅಣಕಿಸುವ ಹಾಗೂ ಹೆಣ್ಣು ಗಂಡರನ್ನು ಹಸೆಮಣೆಗೆ ಕರೆಯುವ, ಜನಪದ ಗಾಯನ ಸ್ಪರ್ಧೆ ಹಾಗೂ ಗ್ರಾಮಾಂತರ ಪ್ರದೇಶದ ಯುವಜನ ಮೇಳವನ್ನು ಮೂರು ದಿನಗಳ ಕಾಲ ಏರ್ಪಡಿಸಿದರು.

೧೯೮೪ರಲ್ಲಿ ಕರ್ನಾಟಕ ರಾಜ್ಯದ ಪರವಾಗಿ ರಾಜಸ್ಥಾನದ ಬರ್‌ಮಾರ್‌ನಲ್ಲಿ ನಡೆದ 'ರಾಷ್ಟ್ರೀಯ ಭಾವೈಕ್ಯತೆ' ಶಿಬಿರದಲ್ಲಿ ಹಾಸನ ಜಿಲ್ಲೆಯ ೮ ಮಹಿಳಾ ಜನಪದ ಕಲಾವಿದರು ೮ ಜನ ಪುರುಷ ಜನಪದ ಕಲಾವಿದರು ಒಟ್ಟು ೧೬ ಜನರನ್ನು ಭಾಗವಹಿಸುವಂತೆ ಜೊತೆಯಲ್ಲಿ ಕರೆದುಕೊಂಡು ಹೋಗಿ ಪ್ರಶಸ್ತಿಯನ್ನು ಪಡೆದು ಬರುವಂತೆ ಮಾಡಿದರು.

ಆಗಿನ ಕೇಂದ್ರ ಸರ್ಕಾರದ ಸಚಿವರಾಗಿದ್ದ ಅಶೋಕ ಗೆಲೇಟ್ ಅಧ್ಯಕ್ಷತೆಯಲ್ಲಿ ಈ ಕಾರ್ಯಕ್ರಮ ಮೂರು ದಿನಗಳ ಕಾಲ ನಡೆಯಿತು. ೧೯೯೦ರಲ್ಲಿ ಬೇಲೂರಿನಲ್ಲಿ ಏರ್ಪಡಿಸಿದ್ದ ಜನಪದ ಕಲಾಮೇಳದಲ್ಲಿ ಹಾಸನ ಜಿಲ್ಲೆ ನುಗ್ಗೇಹಳ್ಳಿಯಲ್ಲಿ ಜನಿಸಿ ಅಪ್ರತಿಮ ದೇಶಭಕ್ತಿಕರೆನಿಸಿದ ಭಾರತದ ಭೂ ಸೇನೆಯಲ್ಲಿ ಲೆಫ್ಟಿನೆಂಟ್ ಜನರಲ್ ಆಗಿ ಸೇವೆ ಸಲ್ಲಿಸಿದ್ದ ಶ್ರೀ ನರಹರಿಯವರಿಗೂ ಆಕಾಶವಾಣಿ ಕಲಾವಿದರಾದ ಹೆಚ್.ವಿ. ನಾರಾಯಣ್ ಅವರಿಗೂ ಜನಪದ ಜಂಗಮ ಎಸ್.ಕೆ. ಕರೀಂಖಾನ್ ಹಾಗೂ ಹೆಚ್.ಜೆ. ಲಕ್ಕಪ್ಪಗೌಡ ಅವರಿಗೆ ಅಂದಿನ ಲೋಕಸಭಾ ಸದಸ್ಯರಾಗಿದ್ದ ಹೆಚ್.ಸಿ. ಶ್ರೀಕಂಠಯ್ಯವರ ಅಧ್ಯಕ್ಷತೆಯಲ್ಲಿ ಜನಪದ ಕಲಾಮೇಳದಲ್ಲಿ ಸನ್ಮಾನಿಸಿದ್ದು ಈ ಕಾರ್ಯಕ್ರಮದ ಸಂಘಟಕರಾಗಿ ಕಾರ್ಯನಿರ್ವಹಿಸಿ ಅತ್ಯುತ್ತಮ ಕಲಾ ಮೇಳವೆಂದು ಜನರಿಂದ ಮತ್ತು ಅತಿಥಿಗಳಿಂದ ಪ್ರಶಂಸೆಗೆ ಪಾತ್ರರಾಗಿದ್ದಾರೆ.

ಹೀಗೆ ಜನಪದ ಸಾಹಿತ್ಯ ಮತ್ತು ಕಲೆಗಳ ಉಳಿವು ಮತ್ತು ಏಳಿಗೆಗಾಗಿ ಹಲವಾರು ವರ್ಷಗಳ ಕಾಲ ಕಾರ್ಯನಿರ್ವಹಿಸುತ್ತಾ ಬಂದಿರುವುದು ಹಾಗೂ ನಾಡಿನ ಹಲವು ಪತ್ರಿಕೆಗಳಲ್ಲಿ ಜನಪದ ಸಾಹಿತ್ಯದ ಬಗ್ಗೆ ಲೇಖನಗಳನ್ನು ಪ್ರಕಟಿಸಿದ್ದಾರೆ. ಸೋಬಾನೆ ಪದಗಳ ಸ್ಪರ್ಧೆಯನ್ನು ಏರ್ಪಡಿಸಿ ಅತ್ಯುತ್ತಮವಾಗಿ ಹಾಡಿದವರಿಗೆ ಬಹುಮಾನಗಳನ್ನು ವಿತರಿಸಿದರು.

ಅಧ್ಯಾಯ - ನಾಲ್ಕು

ಪ್ರೊ. ಕೆ.ಆರ್. ಸುಶೀಲೇಗೌಡರವರ ಸಮಾಜ ಸೇವೆ

ಪ್ರೊ. ಕೆ.ಆರ್. ಸುಶೀಲೇಗೌಡರು ಬಾಲ್ಯದಿಂದಲೂ ಗಾಂಧೀಜಿಯವರ ತತ್ವಗಳನ್ನು ಮೈಗೂಡಿಸಿಕೊಂಡು ತಮ್ಮನ್ನು ತಾವು ಸಮಾಜಸೇವೆಗೆ ಅರ್ಪಣೆ ಮಾಡಿಕೊಂಡಿದ್ದಾರೆ. ಇದು ಕೇವಲ ಹೊಗಳಿಕೆಯ ಮಾತಲ್ಲ. ಕೇವಲ ನಾಮ ಮಾತ್ರವೆನಿಸಿಕೊಂಡಿದ್ದ ಹಾಸನ ನೆಹರೂ ಕೇಂದ್ರ ಶ್ರೀಯುತರು ಯುವ ಸಮನ್ವಯಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡಾಗಿನಿಂದ ಜಿಲ್ಲೆಯ ಉದ್ದಗಲಕ್ಕೂ ತನ್ನ ವಿಶಿಷ್ಟವಾದ ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಳ್ಳುವುದರ ಮೂಲಕ ಯುವಜನರ ಚೈತನ್ಯದ ಚಿಲುಮೆಯಾಗಿ ಹಲವಾರು ಪ್ರಯೋಜನಕಾರಿ ಕೆಲಸಗಳನ್ನು ಸಮರ್ಥವಾಗಿ ನಿರ್ವಹಿಸಿದ್ದಾರೆ. ಕೇವಲ ಆಟೋಟ, ಸ್ಪರ್ಧೆಗಳಲ್ಲಿ ಶ್ರಮಧಾನ ಶಿಬಿರಗಳು, ಯುವಕ ಯುವತಿ ಮಹಿಳಾ ಮಂಡಳಿ, ನೇತಾರ ಶಿಬಿರಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು, ಜನಪದ ಮೇಳ ಹಾಗೂ ಜಿಲ್ಲಾ ಯುವಜನೋತ್ಸವ ಹೀಗೆ ಅನೇಕ ಕಾರ್ಯ ಚಟುವಟಿಕೆಗಳ ಮೂಲಕ ಕರ್ನಾಟಕದಲ್ಲಿಯೇ ಅಗ್ರಸ್ಥಾನದಲ್ಲಿದೆ. ಇದರ ಮೂಲ ನೆಲೆ ಕೆ.ಆರ್. ಸುಶೀಲೇಗೌಡರೆಂದು ಎಲ್ಲರೂ ಬಲ್ಲರು.

ಶ್ರೀಯುತರು ಕಾರ್ಯಸಾಧನೆಯಲ್ಲಿ ಉಕ್ಕಿನ ಮನುಷ್ಯ. ಒರಟು ಮನುಷ್ಯರೂ ಹೌದು. ಸಮಾಜದ ಬಗ್ಗೆ ದೀನದಲಿತರ ಬಗ್ಗೆ, ಯುವಜನ ವಿದ್ಯಾರ್ಥಿಗಳ ಬಗ್ಗೆ ಅವರಿಗಿರುವ ಕಾಳಜಿಯು ಎಂಥವರನ್ನು ಮೂಕ ವಿಸ್ಮಿತರನ್ನಾಗಿಸುತ್ತದೆ. ಯಾವುದೇ ಕೆಲಸವನ್ನು ಬೆನ್ನತ್ತಿದ ಬೇತಾಳದಂತೆ ಬಿಡದೇ ಮಾಡುತ್ತಾರೆ. ಅವರ ಆತ್ಮಸ್ಥೈರ್ಯ ಮುನ್ನುಗ್ಗುವ ಮನೋಭಾವ, ಛಲ ಇವೆಲ್ಲವನ್ನು ಸಾಧಿಸಿ ಮೈಗೂಡಿಸಿಕೊಂಡಿದ್ದಾರೆ. ಅನುಕರಣೀಯವಾದ ಸ್ವಭಾವಗಳು ಅವರ ಶಿಸ್ತುಕಾರ್ಯದಕ್ಷತೆ, ಸೇವಾ ತತ್ಪರತೆ ಇವೆಲ್ಲವೂ ಅವರ ಅನುಭವದ ಹಿನ್ನೆಲೆಯನ್ನು ಗಮನಿಸಿದವರಿಗೆ ಒಬ್ಬ ವ್ಯಕ್ತಿಯ ಸ್ವಪ್ರಯತ್ನದಿಂದ ಏನೆಲ್ಲ ಸಾಧಿಸಬಹುದು ಎಂದು ಸಮಾಜಕ್ಕೆ ಮಾದರಿಯಾಗಿ ತೋರಿಸಿದ್ದಾರೆ. ಇದರಿಂದ ಸಮಾಜಕ್ಕೆ ಮಾರ್ಗದರ್ಶಿಯಾಗಬಹುದು ಎಂಬುದಕ್ಕೆ ಬುನಾದಿಯಾಗುತ್ತದೆ.

೧೯೫೨ರಿಂದಲೂ ಭಾರತ ಸೇವಾದಳದ ಸ್ವಯಂ ಸೇವಕರಾಗಿ ಸೇರಿ ಸೇವಾದಳದ ತತ್ವಗಳ ಸಾರಸರ್ವಸ್ವವನ್ನು ಹೀರಿ ಹಂತಹಂತವಾಗಿ ಮೇಲೇರಿದರು. ನಂತರ ಕರ್ನಾಟಕ ಭಾರತ ಸೇವಾದಳದ ಕಾರ್ಯಕಾರಿ ಸಮಿತಿ ಸದಸ್ಯರೂ ಆದರು. ಶಿಕ್ಷಣ ಸಮಿತಿಯ ಅಧ್ಯಕ್ಷರೂ ಆಗಿ ಗೌಡರು ಕಾರ್ಯನಿರ್ವಹಿಸಿದ್ದಾರೆ. ತುಮಕೂರು ಜಿಲ್ಲೆಯ ಬೆಳ್ಳಾವೆ, ತೋಡುಬಾವಿ ಊರ್ಡುಗೆರೆ, ಶ್ರೀಸಿದ್ದಗಂಗಾ ಕ್ಷೇತ್ರಗಳಲ್ಲಿ ಸೇವಾ ಶಿಬಿರಗಳನ್ನು ನಡೆಸಿ ಅಪಾರ ಜನರ ಮೆಚ್ಚುಗೆಗೆ ಪಾತ್ರರಾದರು. ಅಲ್ಲದೆ ಸಿದ್ದಗಂಗಾ ಚಿತ್ರದುರ್ಗ ಜಿಲ್ಲೆ ಮತ್ತು ಮಂಗಳೂರು ಜಿಲ್ಲೆಯ ನಾನಾ ಕಡೆಗಳಲ್ಲಿಯೂ ಇಂತಹ ಸೇವಾ ಶಿಬಿರಗಳನ್ನು ನಡೆಸಿ ಸಾವಿರಾರು

ಸ್ವಯಂ ಸೇವಕರನ್ನು ತಯಾರು ಮಾಡಿ, ದೇಶಾಭಿಮಾನ, ಸೇವಾ ಮನೋಭಾವನೆಯನ್ನು ತರುಣರಲ್ಲಿ ಮೂಡಿಸಲು ನಿರಂತರವಾಗಿ ಶ್ರಮಿಸಿದ್ದಾರೆ.

೧೯೭೦ರಲ್ಲಿ ಧಾರವಾಡದಲ್ಲಿ ನಡೆದ ಅಂತರರಾಜ್ಯ ಭಾರತ ಸೇವಾದಳದ ರ್‍ಯಾಲಿಯಲ್ಲಿ ಉತ್ತಮ ಸೇವಾಕರ್ತರೆಂದು ಸನ್ಮಾನಿತರಾಗಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ ಪಾನನಿರೋಧ ಸಂಸ್ಥೆಯ ಸಂಚಾಲಕರೂ ಗಾಂಧಿ ಶಾಂತಿ ಪ್ರತಿಷ್ಠಾನದ ನಿರ್ದೇಶಕ ಮಂಡಳಿಯ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದಾರೆ. ಗಾಂಧಿ ಸೇವಾಶ್ರಮದ ಪರವಾಗಿ ನಾಗಲ್ಯಾಂಡಿನ ಮೇರ್ಜ್ಹಿಫೇಮಾದಲ್ಲಿ ನಡೆದ ರಾಷ್ಟ್ರೀಯ ಭಾವೈಕ್ಯ ಶಿಬಿರದಲ್ಲಿ ಭಾಗವಹಿಸಿ ಉತ್ತಮ ಕಾರ್ಯಕರ್ತರೆಂದು ಪ್ರಶಸ್ತಿ ಪಡೆದಿದ್ದಾರೆ.

ಕ್ರೀಡೆಯಲ್ಲಿಯೂ ಇವರು ಪರಿಣಿತರು ಎನ್.ಎ.ಎಸ್. ಪಾಟಿಯಾಲದಲ್ಲಿ ಜೆಮ್ನಾಸ್ಟಿಕ್ ತರಬೇತಿ ಶಿಕ್ಷಣ ಪಡೆದು ಕೆಲವು ಕಾಲ ದೈಹಿಕರಾಗಿಯೂ ಸೇವೆ ಸಲ್ಲಿಸಿದ್ದಾರೆ. ಆ ಕಾಲದಲ್ಲಿ ತುಮಕೂರು ಮತ್ತು ಚಿತ್ರದುರ್ಗ ಜಿಲ್ಲಾ ಕೇಂದ್ರಗಳಲ್ಲಿ ಪ್ರಪ್ರಥಮವಾಗಿ ಜೆಮ್ನಾಸ್ಟಿಕ್ ತರಗತಿಗಳನ್ನು ಪ್ರಾರಂಭಿಸಿ ಕ್ರೀಡಾ ಕಾರ್ಯದರ್ಶಿಯಾಗಿ ಹಲವಾರು ಉತ್ತಮ ಕ್ರೀಡಾಪಟುಗಳನ್ನು ತಯಾರು ಮಾಡಿದ್ದಾರೆ.

ಪ್ರೊ. ಕೆ.ಆರ್.ಸುಶೀಲೇಗೌಡ ಅವರು ಕನ್ನಡ ಮತ್ತು ಸಂಸ್ಕೃತ ಭಾಷೆಗಳಲ್ಲಿ ಹೆಚ್ಚು ಪರಿಶ್ರಮ ಪಡೆದಿರುವುದರ ಜೊತೆಗೆ ಹಿಂದಿ ಭಾಷಾ ವಿದ್ವಾಂಸರೂ ಹೌದು ಸುಮಾರು ೨೦ ವರ್ಷಗಳ ಕಾಲ ಮುಂಬೈನ ಭಾರತೀಯ ವಿದ್ಯಾಭವನದವರು ನಡೆಸುತ್ತಿದ್ದ ಸಂಸ್ಕೃತ ಸಂಸ್ಕೃತಿ ಪ್ರಚಾರ ಕಾರ್ಯವನ್ನು ಯಶಸ್ವಿಗೊಳಿಸಿದರು. ಭಾರತೀಯ ವಿದ್ಯಾಭವನ ಮಂಗಳೂರು ವಿಭಾಗದ ಸಂಸ್ಕೃತ ಪ್ರಚಾರದ ಗೌರವ ನಿರ್ದೇಶಕರಾಗಿ ದುಡಿದಿದ್ದಾರೆ.

ಹಿಂದೀ ಭಾಷಾ ಪ್ರಚಾರ ಕಾರ್ಯದಲ್ಲೂ ಇವರು ಹಿಂದೆ ಬಿದ್ದಿಲ್ಲ, ದಕ್ಷಿಣ ಬಾರತ ಹಿಂದೀ ಪ್ರಚಾರವನ್ನು ಸದ್ದಿಲ್ಲದೆ ಕೈಗೊಂಡು ಸಾವಿರಾರು ಜನರಿಗೆ ಭಾಷಾ ಕಲಿಕೆಯ ಜೊತೆಗೆ ದೇಶಾಭಿಮಾನವನ್ನು ಮೂಡಿಸಿದ್ದಾರೆ. ಹಿಂದಿ ಸಾಹಿತ್ಯ ಸಮ್ಮೇಳನ ಪ್ರಯಾಗ ಇದರ ಕೇಂದ್ರ ವ್ಯವಸ್ಥಾಪಕರಾಗಿ ಪರೀಕ್ಷಾ ಮಂಡಳಿಯ ಸದಸ್ಯರಾಗಿ ಪರೀಕ್ಷಾ ಮಂಡಳಿಯ ಸದಸ್ಯರಾಗಿ ತಮ್ಮ ವ್ಯಾಪಕ ಅನುಭವದಿಂದ ಮಾರ್ಗದರ್ಶನ ಮಾಡಿ ಸಂಸ್ಥೆಯ ಮುನ್ನಡೆಗೆ ಕಾರಣರಾಗಿದ್ದಾರೆ. ೧೯೬೯ರಲ್ಲಿ ತುಮಕೂರಿನಲ್ಲಿ ನಡೆದ ಹಿಂದಿ ಪ್ರಚಾರ ಸಮಿತಿಯ ರಜತೋತ್ಸವದಲ್ಲಿ ಇವರನ್ನು ಸನ್ಮಾನಿಸಿ ಗೌರವಿಸಲಾಗಿದೆ.

ಹಿಂದಿ ಮತ್ತು ಕನ್ನಡದಲ್ಲಿ ಹಲವಾರು ಲೇಖನಗಳನ್ನು ಬರೆದಿರುವ ಶ್ರೀಯುತರು ತುಮಕೂರಿನಲ್ಲಿ ಪ್ರಕಟಗೊಂಡ ಹಿಂದಿ, ಕನ್ನಡ ಪತ್ರಪುಷ್ಪ ಪತ್ರಿಕೆಯ ಸ್ಥಾಪಕರು ಹಾಗೂ ಸಂಪಾದಕರಾಗಿಯೂ ಮೈಸೂರು ಸರ್ಕಾರಿ ಮಹಾವಿದ್ಯಾಲಯದ ಕನ್ನಡ ಸಂಘದ

ಆಶ್ರಯದಲ್ಲಿ ಪ್ರಕಟಗೊಳ್ಳುತ್ತಿದ್ದ 'ಸಾಹಿತ್ಯ ನಂದನ' ಪತ್ರಿಕೆಯ ಸಂಪಾದಕರಾಗಿ ಸಾಹಿತ್ಯ ಕೃಷಿ ನಡೆಸಿದ್ದಾರೆ. ಅಲ್ಲದೆ 'ಕಬ್ಬತ್ತಿ ರಂಗ' ಎಂಬ ಜನಪದ ಗೀತೆಗಳ ಸಂಗ್ರಹವನ್ನು ಪ್ರಕಟಿಸಿದ್ದಾರೆ.

ಶ್ರೀ ಗೌಡರಿಗೆ ಅಸಾಧ್ಯವಾದ ಕೆಲಸವೆಂಬುದಿಲ್ಲ ಮತ್ತು ಇಂತಹದ್ದೇ ಕಾರ್ಯವಾಗಬೇಕೆಂಬುದು ಇಲ್ಲ. ದೇವಸ್ಥಾನದ ನಿರ್ಮಾಣ ಕೆಲಸದಲ್ಲಿ ಸಹಕರಿಸುವಷ್ಟೇ ಶ್ರದ್ಧೆಯಿಂದ ಅಥವಾ ಅದಕ್ಕೂ ಹೆಚ್ಚು ಶ್ರದ್ಧೆಯಿಂದ ಹರಿಜನ, ಗಿರಿಜನ ಸೇವಾ ಕಾರ್ಯಗಳಲ್ಲಿ ಪ್ರಮಾಣಿಕತೆಯಿಂದ ಸಹಕರಿಸಿ ದುಡಿಯುತ್ತಾರೆ. ಮಂಗಳೂರನ್ನು ಬಿಟ್ಟು ಬಹುದಿನಗಳಾದ ನಂತರವೂ ಕೂಡ ಮಂಗಳೂರಿನ ಹರಿಜನ, ಗಿರಿಜನ ಸೇವಾ ಟ್ರಸ್ಟಿನ ಉಪಾಧ್ಯಕ್ಷ ಹಾಗೂ ವಿಶ್ವಸ್ಥ ಮಂಡಳಿ ಸದಸ್ಯರಾಗಿ ಮುಂದುವರೆದಿದ್ದು ಇದಕ್ಕೆ ನಿದರ್ಶನ.

ಅಧ್ಯಾಪಕರಾಗಿ ಕಾರ್ಯ ವೃತ್ತಿಯಾದರೂ ಸಾಮಾಜಿಕ ಸೇವಾ ಕಾರ್ಯವನ್ನು ಪ್ರವೃತ್ತಿಯನ್ನಾಗಿ ಬೆಳೆಸಿಕೊಂಡಿರುವ ಶ್ರೀ ಗೌಡರು ಮಂಗಳೂರು ಸರ್ಕಾರಿ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ಯೋಜನಾಧಿಕಾರಿಯಾಗಿ ಅನೇಕ ಉತ್ತಮ ಕಾರ್ಯ ಚಟುವಟಿಕೆಗಳ ಮೂಲಕ ಶಿಬಿರಗಳನ್ನು ಏರ್ಪಡಿಸಿ ಸುತ್ತಮುತ್ತಲ ಗ್ರಾಮೀಣ ಜನರಿಗೆ ಪ್ರಯೋಜನಕಾರಿಯಾದ ಕಾರ್ಯಗಳನ್ನು ಮಾಡಿಕೊಟ್ಟು ಜನಪ್ರಿಯ ಸೇವಾ ಸನ್ಮಾನಿತರಾಗಿದ್ದಾರೆ.

ಇಷ್ಟೆಲ್ಲಾ ಅಪಾರ ಅನುಭವದ ಹಿನ್ನೆಲೆ ಇರುವ ಗೌಡರು ಹಾಸನದ ನೆಹರು ಯುವಕ ಕೇಂದ್ರದ ಯುವ ಸಮನ್ವಯಾಧಿಕಾರಿಯಾಗಿ ಹೋದಾಗ ಹೊಸ ಕಳೆಯನ್ನು ಮೂಡಿಸಿದರು. ಗೌಡರು ಮಿತ್ರರ ನೀರಿಕ್ಷೆಯನ್ನು ಮೀರಿದ ಗುರಿ ಸಾಧಿಸಿ ಜಿಲ್ಲಾ ಯುವ ಜನತೆಯ ಸನ್ಮಿತ್ರರಾಗಿದ್ದಾರೆ.

ವಾರ, ಪಾಕ್ಷಿಕ, ಮಾಸಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ನಡೆಸುವುದರ ಜೊತೆಗೆ ಆಲೂರು ತಾಲ್ಲೂಕು ನಲ್ಲೂರು ಮತ್ತು ಅರಕಲಗೂಡು ಹುಲ್ಲಂಗಾಲದಲ್ಲಿ ನಡೆದ ವಿಶೇಷ ಶ್ರಮದಾನ ಶಿಬಿರಗಳು ಜಿಲ್ಲೆಯ ಹಲವಾರು ಯುವಜನರಿಗೆ ತಮ್ಮ ಪ್ರತಿಭಾ ಪ್ರದರ್ಶನದ ನೆಲೆಗಟ್ಟಾದವು. ರಾಜಸ್ಥಾನದ ಬಾಟವೇರ್‌ನಲ್ಲಿ ನಡೆದ ರಾಷ್ಟ್ರೀಯ ಭಾವೈಕ್ಯ ಶಿಬಿರಕ್ಕೆ ಕರ್ನಾಟಕ ತಂಡದ ನೇತೃತ್ವವಹಿಸಿ ಕರ್ನಾಟಕ ಯುವಜನತೆಯ ಕಲಾ ಪ್ರತಿಭೆಯನ್ನು ಉತ್ತಮ ಸೇವಾ ಪ್ರಶಸ್ತಿಯನ್ನು ಗಳಿಸಿಕೊಟ್ಟಿದ್ದಾರೆ.

ಶ್ರೀಯುತರು ಭಾರತ ಸೇವಾದಳದ ಕಾರ್ಯ ಚಟುವಟಿಕೆಯ ಜೊತೆಗೆ ವಯಸ್ಕರ ಶಿಕ್ಷಣ ಪ್ರಕಾರ ಕಾರ್ಯದಲ್ಲಿಯೂ ಸಕ್ರೀಯವಾಗಿ ಭಾಗವಹಿಸಿದ್ದು ಅಖಿಲ ಭಾರತ ಮಟ್ಟದ ಖ್ಯಾತಿಯನ್ನು ಪಡೆದಿದ್ದಾರೆ. ೧೯೭೭ರಲ್ಲಿ ಸಾಕ್ಷರತಾ ಕ್ರಾಂತಿಯಲ್ಲಿ ಭಾಗವಹಿಸಿ ಅಖಿಲ ಭಾರತ ವಯಸ್ಕರ ಶಿಕ್ಷಣ ಸಮಿತಿಯ ಸಹ ಕಾರ್ಯದರ್ಶಿಯಾಗಿ ದಕ್ಷಿಣ ಭಾರತ ಪ್ರಾದೇಶಿಕ

ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದಾರೆ.

ಕೆ.ಆರ್. ಸುಶೀಲೇಗೌಡರ ಸೇವಾ ಮನೋಭಾವಕ್ಕೆ ಅವರು ಪಡೆದಿರುವ ಪ್ರಶಸ್ತಿ ಪತ್ರ, ಸನ್ಮಾನ ತಾನಾಗಿ ಆರಿಸಿಕೊಂಡು ಬಂದದ್ದು ಎಂಬುದನ್ನು ಸೂಚಿಸುವ ತೋರ್ಬೆರಳು ಮಾತ್ರವಷ್ಟೆ.

ಇಟ್ಟ ಹೆಜ್ಜೆಯನ್ನು ಹಿಂತೆಗೆಯದೆ, ಜಗ್ಗದೆಯೇ, ಕುಗ್ಗದೆಯೇ, ಮುನ್ನಡೆಸುವ ಗೌಡರು ನೂರಾರು, ಸಾವಿರಾರು ಯುವಕ ಯುವತಿಯರು ನಾಚುವಂತೆ ಕಾರ್ಯ ಪ್ರವೃತರಾಗುವರು.

ಭಾರತ ಸೇವಾದಳದ ಮಾಧ್ಯಮಿಕ ಶಿಕ್ಷಣದ ಹೆಚ್. ಹನುಮಂತಪ್ಪ ಅವರು ಶಿಬಿರಾಧಿಪತಿಗಳಾಗಿದ್ದಾಗ ೧೯೫೩ರಲ್ಲಿ ಇ.ಪಿ.ಎಸ್. (ಎಸ್.ಎಸ್.ಎಲ್.ಸಿ.ಗೆ ಸಮ) ದೊಡ್ಡ ಬಳ್ಳಾಪುರ ಪಬ್ಲಿಕ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. ಮುಂದೆ ೧೯೫೩–೫೪ರಲ್ಲಿ ಭಾರತ ಸೇವಾದಳದ ಅತ್ಯುನ್ನತವಾದ ಕೇಂದ್ರನಾಯಕ ಶಿಕ್ಷಣವನ್ನು ಪಡೆದರು. ಹಾಸನ ಜಿಲ್ಲೆ ಹಳೇಬೀಡಿನಿಂದ ಹಗರೆಗೆ ಸುಮಾರು ೯ ಕಿ.ಮೀ. ರಸ್ತೆಯನ್ನು ನಿರ್ಮಾಣ ಮಾಡಲು ೫೦೦ ಭಾರತ ಸೇವಾದಳದ ಯುವಕರನ್ನು ಸೇವಾ ಶಿಬಿರವನ್ನು ಏರ್ಪಡಿಸಲು ನಿಯುಕ್ತಿ ಪಡೆದರು. ೧೦ ದಿವಸಗಳ ಕಾಲ ಭಾರತ ಸೇವದಳದಿಂದ ಶ್ರಮದಾನ ಮಾಡಿಸಿ, ಮಣ್ಣು ರಸ್ತೆಯನ್ನು ನಿರ್ಮಾಣ ಮಾಡಿಸಲು ಕಾರ್ಯಕ್ರಮ ಏರ್ಪಡಿಸಲಾಯಿತು. ನಂತರದ ಜಿಮ್ನಾಷಿಂ ಶಾಲೆಗೆ ವರ್ಗಾವಣೆ ಹೊಂದಿದರು. ೧೯೭೪ರಲ್ಲಿ ಧಾರವಾಡದಲ್ಲಿ ಜರುಗಿದ ಅಖಿಲ ಭಾರತ ಸೇವಾದಳ ಯುವ ಜನೋತ್ಸವದಲ್ಲಿ ಉತ್ತಮ ಕಾರ್ಯಕರ್ತನೆಂದು ಸನ್ಮಾನ ಪಡೆದರು. ಈ ಸನ್ಮಾನ ಶಾಲು ಮತ್ತು ಪದಕವನ್ನೊಳಗೊಂಡಿತು. ಕರ್ನಾಟಕ ಭಾರತ ಸೇವಾದಳದ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ತುಮಕೂರು, ಮಂಗಳೂರು, ಜಿಲ್ಲೆಗಳಲ್ಲಿ ಸಂಚರಿಸಿ ತರುಣರಲ್ಲಿ ಹೊಸ ಕಹಳೆ ಮೊಳಗಿಸಿದ ವೀರರು ಇವರಾಗಿದ್ದಾರೆ. ನಾಗಾಲ್ಯಾಂಡಿನ ಮಡ್ಡಿಫೇಮಾದಲ್ಲಿ ನಡೆದ ರಾಷ್ಟ್ರೀಯ ಭಾವೈಕ್ಯ ಶಿಬಿರದಲ್ಲಿ ಉತ್ತಮ ಕಾರ್ಯಕರ್ತರೆಂದು ಪ್ರಶಸ್ತಿಯನ್ನು ಪಡೆದಿದ್ದಾರೆ.

ಸ್ವಯಂ ಸೇವಕನ ಅರ್ಹತೆ: ಯೋಗ್ಯತೆ, ಸಾಮರ್ಥ್ಯ

ಪ್ರತಿಯೊಬ್ಬ ಯುವಕನೂ ದೈಹಿಕ ಕವಾಯತ್ ಶಿಕ್ಷಣ ಪಡೆದಿರಬೇಕು ಶಿಕ್ಷಣ ಪಡೆದ ಸಿಪಾಯಿಗಳು ಎಲ್ಲ ರೀತಿಯಲ್ಲೂ ಒಂದೇ ಸಮನಾಗಿ ಹೆಜ್ಜೆಹಾಕಿ ನಡೆಯುವುದರಲ್ಲಿ ಅವರೊಡನೆ ಪೈಪೋಟಿ ನಡೆಯುವಂತಿರಬೇಕು. ಬಗೆಬಗೆಯ ಕವಾಯತ್ ಕಲಿತಿರಬೇಕು. ಜನರ ಗುಂಪನ್ನು ಹತೋಟಿಗೆ ತರಲು ಕಲಿತಿರಬೇಕು ಪ್ರಥಮ ಚಿಕಿತ್ಸೆಯ ಶಿಕ್ಷಣ ಪಡೆದಿರಬೇಕು ಇವುಗಳಲ್ಲದೆ

ಸತ್ಯವಂತನೂ, ಯೋಗ್ಯನೂ, ಅಹಿಂಸಾವಾದಿಯೂ ಆಗಿರಬೇಕು.

ಶಿಸ್ತಿನ ಸಿಪಾಯಿ ಆಗಿರಬೇಕು ಮೇಲಾಧಿಕಾರಿಗಳ ಆಜ್ಞಾಧಾರಿಯಾಗಿರಬೇಕು.

ತನ್ನ ಅತ್ಯಂತ ಕನಿಷ್ಟ ದೇಶ ಭಾಂಧವರೊಡನೆ ಸ್ನೇಹ ಮತ್ತು ಜವಾಬ್ದಾರಿಯಿಂದ ವರ್ತಿಸಬೇಕು.

ಹಿಂದಿ ಮಾತನಾಡುವವನಾಗಿರಬೇಕು

ಬತ್ತಿ ಸ್ವತಃ ತಂಯಾರಿಸಿ ಪ್ರತಿ ತಿಂಗಳೂ ೨೦೦೦ ಗಜ ಅಡಿ ತಯಾರಿಸುವಂತಿರಬೇಕು.

ಸ್ವತಃ ಅಡುಗೆ ಮಾಡಿಕೊಳ್ಳುವಂತಿರಬೇಕು.

ಅಸ್ಪೃಶ್ಯತೆಯ ಕಳಂಕದಿಂದ ಹೊರತಾಗಿರಬೇಕು

ಹಿಂದೂ, ಮುಸ್ಲಿಂ, ಐಕ್ಯತೆಯಲ್ಲಿ ಪೂರ್ಣವಿಶ್ವಾಸ ತಳೆದಿರಬೇಕು.

ಕಾಯ, ವಾಚಾ, ಮನಸ್ಸಾ, ಅಹಿಂಸಾವಾದಿಯಾಗಿರಬೇಕು

ಕೈಯಿಂದ ನೂತ, ಕೈಯಿಂದ ನೇಯ್ದ ವಸ್ತ್ರದ ಸತತ ಖಾದಿಧಾರಿಯಾಗಿರಬೇಕು.

ಸ್ವದೇಶಿಗೆ ಸಕಲ ವಿಧದ ಪ್ರೋತ್ಸಾಹ ನೀಡಬೇಕು

ಹಿಂದೂ ಆಗಿದ್ದಲ್ಲಿ ಅಸ್ಪೃಶ್ಯತೆ ಹೋಗಲಾಡಿಸುವ ಪಣತೊಡಬೇಕು

ನನ್ನ ಧರ್ಮ ಮತ್ತು ನನ್ನ ದೇಶಕ್ಕಾಗಿ ಕಿಂಚಿತ್ತು ಅಳುಕದೆ ವ್ಯತಿರಿಕ್ತ ವ್ಯಕ್ತ ಪಡಿಸದೆ ಜೈಲು, ಪೆಟ್ಟು, ಕಡೆಗೆ ಮರಣಕ್ಕೂ ಸಿದ್ದರಾಗಿರಬೇಕು

ಬಂಧಿತನಾಗಿ ಸೆರಮನೆ ಸೇರಿದರೆ, ನನ್ನ ಕುಟುಂಬ ಅಥವಾ ನನ್ನ ಆಶ್ರಿತರಿಗಾಗಿ ಕಾಂಗ್ರೇಸ್ ಇಂದ ಯಾವ ಬಗೆಯ ಸಹಾಯವನ್ನು ಅಪೇಕ್ಷಿಸುವಂತಿಲ್ಲ.

ಭಾರತ ಸೇವಾದಳ

"ಸೇವಾಯಿಪರಮೋಧರ್ಮ" (ಸೇವೆ ಮಾಡುವುದೇ ಪರಮೇತೃಷ್ಟವಾದ ಧರ್ಮ) ಎಂಬ ಆರ್ಯೋಕ್ತಿಯಂತೆ ಪ್ರತಿ ಮಾನವನ ಗುರಿ ಸೇವೆ ಯಾವಾಗ ಸಮಾಜದಲ್ಲಿ ಶಾಂತಿ ನೆಮ್ಮದಿ ನೆಲೆಸುವುದು ಸಹಜ, ಸೇವೆ ಎಂಬ ಪದಕ್ಕೆ ವಿಶಾಲವಾದ ಅರ್ಥವಿದೆ. ಅರ್ಪಣ ಮನೋಭಾವದಿಂದ ಮಾಡುವ ಸೇವೆ ಸಮಾಜವನ್ನು ಒಂದುಗೂಡಿಸಿ ಸಧೃಡಗೊಳಿಸುವುದೆಷ್ಟೇ ಅಲ್ಲ ಸಾಂಸ್ಕೃತಿಕವಾಗಿಯೂ ಸಮರ್ಪಿತವಾಗುತ್ತದೆ. ಆದ್ದರಿಂದ ಸೇವೆ ಒಂದು ಸಂಸ್ಕೃತಿ ಎಂದು ಕರೆದರೂ ತಪ್ಪಾಗಲಾರದು.

ಸೇವೆಯಲ್ಲಿ ಸ್ವಾರ್ಥ ಮತ್ತು ನಿಸ್ವಾರ್ಥ ಸೇವೆಗಳೆಂಬ ಎರಡು ಬಗೆಗಳುಂಟು. ಸ್ವಾರ್ಥಪರವಾದ ಸೇವೆ ವೆಷ್ಟಿಯ ಪರಧಿಯಲ್ಲಿ ಕ್ರಿಯಾ ಶೀಲವಾದರೆ, ನಿಸ್ವಾರ್ಥ ಸೇವೆ ಸಮಷ್ಠಿಯ ಕ್ಷೇಮಾಭ್ಯುದಯದ ಹೆಬ್ಬಯಕೆಯನ್ನು ಉಳ್ಳದ್ದು. ಸ್ವಾರ್ಥಸೇವೆ ಭೋಗವನ್ನು

ಬಯಸಿದರೆ ನಿಸ್ವಾರ್ಥ ಸೇವೆ ತ್ಯಾಗವನ್ನು ಬಯಸುತ್ತದೆ. "ಯತ್‌ಪರಾರ್ಥಂ ಇದಂ ಶರೀರಂ" ಎಂಬ ಉದಾತ್ತ ಧ್ಯೇಯದೊಂದಿಗೆ ನಿತ್ಯ ಜೀವಂತವಾಗಿ ಉಳಿವುದೇ ನಿಸ್ವಾರ್ಥ ಸೇವೆಯ ವೈಶಿಷ್ಟಂ.

ನಿಸ್ವಾರ್ಥ ಸೇವಕರು "ವಸುದೈವ ಕುಟುಂಬಕಂ" ಪ್ರತಿಪಾದಕರು, ಆ ಕೌಟುಂಬಿಕ ಸಮಾಜದ ಸರ್ವರ ಸುಖ ಶಾಂತಿ ನೆಮ್ಮದಿಗಾಗಿ ಹಗಲು ಇರುಳು ತಮ್ಮನ್ನು ಅರ್ಪಿಸಿಕೊಂಡವರು. ಮನುಕುಲದ ಅಜ್ಞಾನ ಅಂದಕಾರವನ್ನು ತೊಡೆದು ಹಾಕಿ ಸುಜ್ಞಾನದ ಬೆಳಕಿನಕಡೆ ಸಮಾಜವನ್ನು ದೇಶವನ್ನು ಆ ಮೂಲಕ ಪ್ರಪಂಚವನ್ನು ಕೊಂಡೊಯ್ಯುವುದೇ ಇವರ ಜೀವನಾದರ್ಶವಾಗಿದೆ. ಮನುಸ್ಸು ದೊಡ್ಡದು ಕನಸು ದೊಡ್ಡದು, ತಮ್ಮ ಲೋಕ ಕಲ್ಯಾಣದ ಕಾರ್ಯದಲ್ಲಿ ಎಷ್ಟೇ ಅಡ್ಡಿ ಆತಂಕ ಎದುರಾದರೂ ಧೈರ್ಯಗೆಡರು, ತ್ಯಾಗ ಬಲಿದಾನಕ್ಕೂ ಅಂಜರು. ಗೌತಮಬುದ್ಧ, ಬಸವೇಶ್ವರ ಮಹಾತ್ಮಗಾಂಧೀಜಿ, ಮದರ್‌ಥೆರೆಸ್ಸಾ ಮತ್ತು ಡಾ. ಬಿ.ಆರ್. ಅಂಬೇಡ್ಕರ್ ಮುಂತಾದವರು ನಿಸ್ವಾರ್ಥವಾದ ಸೇವೆಯಿಂದಲೇ ಸಾರ್ಥಕರಾದರು ಮುಂದಿನ ಮನುಕುಲದ ಪೀಳಿಗೆಗೆ ದಾರಿ ದೀಪವಾದವರು.

ವರ್ತಮಾನದಲ್ಲಿ ಬದುಕುತ್ತಿರುವ ನಮ್ಮ ಭಾರತೀಯ ಯುವಕ ಯುವತಿಯರ ಅಂತರಂಗದಲ್ಲಿ ಇಂತಹ ಮಹಾನೀಯರ ವಿಚಾರಧಾರೆಯನ್ನು ಸ್ಮರಿಸುತ್ತಾ ದೇಶ ಸೇವೆಗೆ ಸಜ್ಜುಗೊಳಿಸುವ ಕಾರ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸುವುದೇ ಭಾರತ ಸೇವಾದಳದ ಬಹು ಮುಖ್ಯ ಗುರಿ.

ಸೇವಾದಳ ಎಂಬುದು ಸೇವೆ ಮಾಡುವವರ ಒಂದು ಸಂಘಟನೆ ಸೇವಾದಳದಂತೆ, ಸ್ವಾತಂತ್ರ್ಯ ಭಾರತದಲ್ಲಿ ಅನೇಕ ಸ್ವಯಂ ಸೇವಾ ಸಂಸ್ಥೆಗಳು ಜನ್ಮ ತಾಳಿ ವಿದ್ಯಾರ್ಥಿಗಳಲ್ಲಿ ಹಾಗೂ ಯುವಕರಲ್ಲಿ ಶಿಸ್ತು ಶಾಂತಿ ಮತ್ತು ಸನ್ಮಾರ್ಗದಲ್ಲಿ ನಡೆದು ಸಮಾಜಕ್ಕೆ ಮಾದರಿಯಾಗುವಂತೆ ಬದುಕುವುದನ್ನು ಕಲಿಸುವ ಸಂಸ್ಥೆಗಳಲ್ಲಿ ಎನ್.ಸಿ.ಸಿ. ಗೃಹ ರಕ್ಷಕದಳ, ಬಾಲ ಚಮ್ಮುಥಳ (ಸ್ಕೌಟ್) ಭಾರತ ಸೇವಕ ಸಮಾಜ ಇತ್ಯಾದಿಗಳು ಕೆಲಸ ಮಾಡುತ್ತಿವೆ. ತಮ್ಮದೇ ಆದ ಧ್ಯೇಯಾದರ್ಶದೊಂದಿಗೆ ದೇಶದಾದ್ಯಂತ ಈ ಸಂಸ್ಥೆಗಳು ಕಾರ್ಯತತ್ಪರವಾಗಿವೆ. ಎನ್.ಸಿ.ಸಿ. ಯುವಕರಲ್ಲಿ ಶೈಕ್ಷಣಿಕವಾಗಿ ಶಿಸ್ತು ಮೂಡಿಸಿದರೆ ಬಾಲ ಚಮ್ಮುಥಳವು ಜನಗಳ ಸೇವೆಯನ್ನು ಮಾಡುತ್ತ ಅಂತರಾಷ್ಟ್ರೀಯ ಸಂಸ್ಥೆಯಾಗಿ ಖ್ಯಾತಿಗಳಿಸಿದೆ. ಹಾಗೆಯೇ ಭಾರತ ಸೇವಾದಳವು ಕರ್ನಾಟಕ ಪ್ರಾಂತದಲ್ಲಿ ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಂಡು ಕ್ರಿಯಾಶೀಲವಾಗಿದೆ.

ರಾಜಕೀಯ ಸ್ವಾತಂತ್ರ್ಯದ ನಂತರ ಸೇವಾದಳದ ಸ್ವರೂಪವು ಬದಲಾಗಬೇಕೆಂದು ನಾಯಕರು ಬಯಸಿದರು. ಸೀತಾ ಮಾತೆಯನ್ನು ಬಂಧನದಿಂದ ಶ್ರೀರಾಮನು ಬಿಡಿಸಿಕೊಂಡು

ಬರಲು, ಕಿಷ್ಕಿಂದೆಯ ಸುಗ್ರೀವ ಹನುಮಂತರ ನೆರವನ್ನು ಪಡೆದಂತೆ, ಮಹಾತ್ಮರು ಭಾರತ ಮಾತೆಯನ್ನು ಬಂಧನದಿಂದ ಬಿಡಿಸಲು ಹಿಂದೂಸ್ಥಾನೀ ಸೇವಾದಳದ ಸಹಾಯವನ್ನು ಪಡೆದು, ದೇಶವನ್ನು ಬಂಧನ ವಿಮುಕ್ತವಾಗಿ ಮಾಡಿದರು. ಹಿಂದೂಸ್ಥಾನಿ ಸೇವಾದಳ ರಾಷ್ಟ್ರೀಯ ಸೇವಾದಳ ಮತ್ತು ಭಾರತ ಸೇವಾದಳ ಎಂಬ ಹೆಸರುಗಳಿಂದ ಕರೆಯಲ್ಪಡುವ ಸೇವಾದಳದ ಚಳವಳಿಯು ನಿರ್ದಿಷ್ಟ ಸ್ವರೂಪವನ್ನು ಹೊಂದಿದ್ದು ೨೮.೧೨.೧೯೨೩ರಂದು. ಆಂಧ್ರ ಪ್ರಾಂತ್ಯದ ಕಾಕಿನಾಡ ಕಾಂಗ್ರೆಸ್ ಅಧಿವೇಶನದಲ್ಲಿ ಭಾರತರತ್ನ ಶ್ರೀ ಜವಹರಲಾಲ್ ನೆಹರೂರವರು ಹಿಂದೂಸ್ಥಾನಿ ಸೇವಾದಳದ ಅಧ್ಯಕ್ಷರಾಗಿದ್ದರು. ಡಾ.ನಾ.ಸು. ಹರ್ಡಿಕರ್ ಅವರು ಸೇವಾದಳದ ಜನಕರಾಗಿ ಮಹಾತ್ಮ ಗಾಂಧೀಜಿಯವರ ಅಹಿಂಸಾತ್ಮಕ ಹೋರಾಟಕ್ಕೆ ಶಾಂತಿಯ ಹಾದಿಯಲ್ಲಿ ಯಶಸ್ವಿಯಾಗಲು ಸೇವಾದಳದ ಮೂಲಕ ಭಾರತದ ಯುವಜನ ಶಕ್ತಿಯನ್ನು ಸಂಘಟಿಸಿದರು.

ಭಾರತಕ್ಕೆ ರಾಜಕೀಯ ಸ್ವಾತಂತ್ರ್ಯ ದೊರೆತದ್ದು ಅಹಿಂಸಾತ್ಮಕ, ಚಳವಳಿಯಿಂದ ಇಂದು ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಸ್ವಾತಂತ್ರ್ಯಗಳಿಸಲು ನಾವು ಸಾಮೂಹಿಕ ಚಳವಳಿ ಮೂಲಕ ದೇಶದ್ಯಾಂತ ಗಾಂಧಿ ತತ್ವದಲ್ಲಿ ಶ್ರದ್ಧೆ ಇರುವ ಶಿಸ್ತಿನ ಶಾಂತಿ ಪಡೆಗಳನ್ನು ಸಂಘಟಿಸಬೇಕು. ಈ ಗುರಿಯನ್ನು ಸಾಧಿಸಲು ಭಾರತ ಸೇವಾದಳವು ಸತತವಾಗಿ ಶ್ರಮಿಸುತ್ತಿದೆ.

ಗಾಂಧೀಜಿಯವರ ಸಲಹೆಯಂತೆ ಸ್ವತಂತ್ರ ಸಂಸ್ಥೆಯಾಗಿದ್ದ ಹಿಂದೂಸ್ಥಾನಿ ಸೇವಾದಳವು ೧೯೩೯ರ ಅಂತ್ಯದಲ್ಲಿ ಕಾಂಗ್ರೆಸ್ ಅಂಗ ಸಂಸ್ಥೆಯಾಯಿತು. ೧೯೨೩ರಿಂದ ೧೪೩೧ರವರೆಗೆ ಡಾ. ಹರ್ಡಿಕರ್ ಅವರು ಹಿಂದೂಸ್ಥಾನಿ ಸೇವಾದಳದ ಮಹಾನಾಯಕರಾಗಿ ಮಾರ್ಗದರ್ಶನ ಮಾಡಿಕೊಂಡು ಬಂದರು ಗಾಂಧೀಜಿ ಅವರ ಅಧ್ಯಕ್ಷತೆಯನ್ನು ಮುಂಬಾಯಿಯಲ್ಲಿ ಸೇರಿದ ಹಿಂದೂಸ್ಥಾನಿ ಸೇವಾದಳದ ಕಾರ್ಯಕರ್ತರ ತೀರ್ಮಾನದಂತೆ ಸೇವಾದಳವು ಕಾಂಗ್ರೆಸ್ ಮಹಾ ಸಂಸ್ಥೆಯ ಅಂಗ ಸಂಸ್ಥೆಯಾಯಿತು. ದಿವಂಗತ ಪಂಡಿತ್ ಜವಹರಲಾಲ್ ನೆಹರು ಅವರು ಮತ್ತು ಡಾ. ಹರ್ಡೀಕರ್ ಅವರು ಸೇವಾದಳದ ಮಹಾ ನಾಯಕರಾಗಿ ಮುಂದುವರಿದರು. ಇಂದು ಸಹ ಡಾ. ಹರ್ಡೀಕರ್ ಅವರು ಸೇವಾದಳದ ಜೀವನಾಡಿಯಂತಿದ್ದಾರೆ.

ಸೇವಾದಳವು ನಾನಾ ಹೆಸರುಗಳನ್ನು ಹೊಂದಿ ದೇಶದಲ್ಲಿ ಸೇವೆ ಸಲ್ಲಿಸುತ್ತ ಬಂದಿದೆ. ಮೈಸೂರಿನ ಮಹಾ ನಾಯಕರು ಒಟ್ಟುಗೂಡಿ ಪಕ್ಷಾತೀತವಾದ ಹಾಗೂ ಜಾತ್ಯಾತೀತವಾದ ಒಂದು ಸವಯಂ ಸೇವಕ ಸಂಸ್ಥೆಯನ್ನು ರಚಿಸಬೇಕೆಂದು ತೀರ್ಮಾನಿಸಿದರು. ಕಲೆಯ ತವರೂರಾದ ಸುಪ್ರಸಿದ್ಧ ಬೇಲೂರು ಕ್ಷೇತ್ರದಲ್ಲಿ ಮಾಜಿ ವಿದ್ಯಾಮಂತ್ರಿಗಳಾದ ಶ್ರೀ ಟಿ. ಸಿದ್ದಲಿಂಗಯ್ಯ ಅವರ ಅಧ್ಯಕ್ಷತೆಯಲ್ಲಿ ಮೈಸೂರು ಭಾರತ

ಸೇವಾದಳವು ೧೨.೦೩.೧೯೫೦ರಲ್ಲಿ ಸ್ಥಾಪಿತವಾಯಿತು. ಮಾಜಿ ಮುಖ್ಯ ಮಂತ್ರಿಗಳಾಗಿದ್ದ ಶ್ರೀ ಕೆ. ಹನುಮಂತಯ್ಯ ಅವರ ಪ್ರೋತ್ಸಾಹದಿಂದ ಭಾರತ ಸೇವಾದಳವು ಹೆಚ್ಚು ಅಭಿವೃದ್ಧಿಯನ್ನು ಹೊಂದಿದೆ. ಇದೇ ರೀತಿಯಲ್ಲಿ ಮೈಸೂರಿನ ಮಹಾ ನಾಯಕರ ಸತತ ಪ್ರಯತ್ನದ ಫಲವಾಗಿ ಸೇವಾದಳವು ಅಭಿವೃದ್ಧಿಯನ್ನು ಪಡೆಯುತ್ತ ಬಂದಿರುತ್ತವೆ.

ಸೇವಾದಳದ ಉದ್ದೇಶಗಳು:

೧. ಮಹಾತ್ಮ ಗಾಂಧೀಜಿ ಅವರ ತತ್ವ ಮತ್ತು ಕಾರ್ಯಕ್ರಮಗಳಿಗೆ ಅನುಸಾರವಾಗಿ ಯುವಕರನ್ನು ಸಂಘಟಿಸುವುದು. ಅವರು ರಾಷ್ಟ್ರ ಸೇವಕರಾಗಲು ಬೇಕಾದ ಯೋಗ್ಯ ಶಿಕ್ಷಣವನ್ನು ಕೊಡುವುದು.

೨. ಯುವಕರಲ್ಲಿ ಧೈರ್ಯ, ಸ್ವಾರ್ಥ ತ್ಯಾಗ, ಸಹನೆ, ಸಂಯಮ, ಸಾಂಘಿಕ ಮತ್ತು ವೈಯಕ್ತಿಕ ಸದ್ಗುಣಗಳನ್ನು ವಿಕಾಸಗೊಳಿಸಿ ಅವರನ್ನು ಸ್ವತಂತ್ರ ಭಾರತದ ಆದರ್ಶ ಪೌರರನ್ನಾಗಿ ಮಾಡುವುದು.

೩.ಜನರ ಆರೋಗ್ಯ ಮತ್ತು ಶರೀರ ಧಾರ್ಢ್ಯವನ್ನು ವ್ಯಾಯಾಮ ಮತ್ತು ಶಿಕ್ಷಣದ ಮೂಲಕ ಉತ್ತಮ ಪಡಿಸುವುದು.

೪. ಯಾವ ಜಾತಿ ಭೇದ ಅಥವಾ ಪಂಥವು ಇಲ್ಲದೆ ಸಕಲರ ಸೇವೆಯನ್ನು ಮಾಡುವುದರ ಮೂಲಕಕ ರಾಷ್ಟ್ರದ ಐಕ್ಯತೆಯನ್ನು ಸಾಧಿಸವುದು.

೫. ಶಾಂತಿ ರಕ್ಷಣೆ ಮತ್ತು ಅಪತ್ತ್ಕಾಲಗಳಲ್ಲಿ ಪರಿಹಾರ ಕಾರ್ಯವನ್ನು ಕೈಕೊಳ್ಳುವುದು ಮೊದಲಾದವುಗಳು.

೬. ಭಾರತ ಸೇವಾದಳವು ಸ್ವಯಂ ಸೇವಕರಲ್ಲಿ ರಾಷ್ಟ್ರಧ್ವಜದ ಇತಿಹಾಸ ಮತ್ತು ರಾಷ್ಟ್ರಗೀತೆಗಳ ಮಹತ್ವವನ್ನು ಅರಿವು ಮಾಡಿಕೊಡುವುದು. ಸ್ವಯಂ ಸೇವಕರನ್ನು ಈ ಮೂಲಕ ದೇಶಪ್ರೇಮಿಗಳನ್ನಾಗಿ ಮಾಡುವುದು.

ಭಾರತದ ಸೇವಾದಳದ ತಾತ್ವಿಕ ಸ್ಮೃತಿಗಳನ್ನು ಲೋಕದೃಷ್ಟಿಯಲ್ಲಿ ಸಾರ್ವತ್ರಿಕಗೊಳಿಸಿ ಸಕಲರ ಸೇವೆಯನ್ನು ಮಾಡುವುದರ ಮೂಲಕ ರಾಷ್ಟ್ರದ ಐಕ್ಯತೆಯನ್ನು ಸಾಧಿಸುವುದೇ ಇದರ ಮುಖ್ಯ ಗುರಿ. "ಸೇವಾಹಿ ಪರಮೋಧರ್ಮ" ಎಂಬ ಮಂತ್ರವೇ ಸೇವಾದಳದ ಸ್ವಯಂ ಸೇವಕರ ದಿವ್ಯ ಮಂತ್ರವಾಗಿದೆ. ಈ ಪಥ್ಯವನ್ನು ಅನುಸರಿಸಿ ಸೇವಾದಳವು ಸೇವಾ ಶಿಬಿರಗಳನ್ನು ನಡೆಸಿ ಯಶಸ್ವಿಯಾಗಿದೆ. ಸ್ವಾವಲಂಬನೆಯ ಅಡಿಪಾಯದ ಮೇಲೆಯೇ ಸೇವಾದಳ ನಿಂತಿದೆ. ಸಾಂಘಿಕ, ಸಾಮುದಾಯಕ ಈ ವ್ಯವಸ್ಥಿತ ಕಾರ್ಯ ಕ್ರಮಗಳಿಂದ ಸಂಸ್ಥೆಯ ಸೇವಾ ಕ್ಷೇತ್ರವು ಬೆಳೆಯುತ್ತಿದೆ. ಇದಕ್ಕೆ ಪ್ರೋತ್ಸಾಹದಾಯಕವಾಗಿ ಸಂಸ್ಥೆಯ ಅಧ್ಯಕ್ಷರಾದ ನೇತ್ರಾದಾನಿ ಪದ್ಮಶ್ರೀ ಡಾ. ಎಂ.ಸಿ. ಮೋದಿ ಅವರು ದಳಪತಿ ಐ.ಎನ್.ಎ.

ರಾಮರಾವ್ ಹಾಗೂ ಪ್ರದಾನ ಕಾರ್ಯದರ್ಶಿಗಳಾದ ಶ್ರೀ ಕೆ.ಟಿ. ಚನ್ನಬಸವೇಗೌಡರ ಸತತ ಪರಿಶ್ರಮದ ಫಲವಾಗಿ ಸೇವಾದಳವು ನವಚೈತನ್ಯವನ್ನು ಪಡೆದಿದೆ.

ಭಾರತ ಹಳ್ಳಿಗಳ ಬೀಡು, ಪ್ರತಿ ಹಳ್ಳಿಗಳಲ್ಲಿಯೂ ಸ್ಥಳೀಯ ವಿದ್ಯಾರ್ಥಿಗಳನ್ನೊಳಗೊಂಡ ಯುವಕ ಸೇವಾದಳ ಶಾಖೆಗಳು ಏರ್ಪಡಬೇಕು ಒಂದಿಲ್ಲೊಂದು ದಿನ ದೇಶದಾದ್ಯಂತ ನಡೆಯುತ್ತಿರುವ ಸಮಾಜ. ಇಂತಹ ಸೇವಾ ಸಂಸ್ಥೆಗಳಿಂದಲೇ ನಡೆಯುವಂತಾಗಬೇಕು. ಆಗ ಜನತೆಯ ಹೃದಯಾಂತರಾಳದಲ್ಲಿ ಸೇವಾ ಭಾವನೆಯುಂಟಾಗುತ್ತದೆ. ಈ ಭಾವನೆಯು ವಿದ್ಯಾರ್ಥಿ ಜೀವನದಲ್ಲಿಯೇ ಮೂಡಿದರೆ ಮುಂದೆ ದೊಡ್ಡವರಾ ಮೇಲೂ ಅವರ ಮನಸ್ಸಿನಲ್ಲಿ ಸೇವಾಕಾಂಕ್ಷೆ ಸ್ಥಿರವಾಗಿ ನಿಲ್ಲುತ್ತದೆ. ಭಾರತ ಸೇವಾದಳವು ಶರೀರ ಶ್ರಮದ ದೀಕ್ಷೆಯನ್ನು ವಿದ್ಯಾರ್ಥಿಗಳಲ್ಲಿ ಬೆಳೆಸಲು ೧೯೬೦ರಿಂದಲೇ ಪ್ರಾರಂಭಿಸಿರುತ್ತದೆ. ಸಾಮೂಹಿಕವಾಗಿ ಒಂದು ಗಂಟೆಯ ಕಾಲ ಗ್ರಾಮ ಪ್ಯಾಕೇಜ್ ಕಾರ್ಯವನ್ನು ಮಾಡುತ್ತಾ ಬಂದಲ್ಲಿ ಹಳ್ಳಿಯ ಬಂಧುಗಳ ಮಾನಸಿಕ ಕ್ರಾಂತಿಯಾಗುವುದು ಸುಲಭ ಸಾಧ್ಯ ಭಾರತ ಸೇವಾದಳದ ಶಾಖೆಗಳ ಗ್ರಾಮ ನಿರ್ಮಲೀಕರಣ ದೀಕ್ಷೆ ವಹಿಸಿದರೆ ಸಾಕು. ಕಶ್ಮಲದ ಬೀಡಾದ ಗ್ರಾಮಗಳು ಋಷ್ಯಾಶ್ರಮದಂತೆ ಸ್ವಚ್ಛತೆಯ ಭವ್ಯ ವಾತಾವರಣವನ್ನು ಪಡೆಯುವವು. ಭಾರತ ಸೇವಾದಳವು ಕೇವಲ ಒಂದು ಸಂಸ್ಥೆಯೇ ಅಲ್ಲದೆ ರಾಷ್ಟ್ರ ಪುನರ್ ನಿರ್ಮಾಣ ಸಾಧನೆಯ ಮಹಾ ಚಳವಳಿಯಾಗಿದೆ. ರಾಷ್ಟ್ರವನ್ನು ಪುನಃ ಕಟ್ಟುವ, ಪುನರ್ ಅಭಿವೃದ್ಧಿಗೊಳಿಸುವ ಕೆಲಸ ಆಗಬೇಕಾಗಿದೆ.

ಭಾರತ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಸೇವಾದಳದ ಪಾತ್ರ ಬಹಳ ಪ್ರಾಮುಖ್ಯ ಎಂಬುದನ್ನು ದೇಶದ ಹಿರಿಯ ನಾಯಕರು ಚೆನ್ನಾಗಿ ಮನಗಂಡಿದ್ದಾರೆ. ದೇಶದ ನಾಯಕರುಗಳಾದ ಮಹಾತ್ಮ ಗಾಂಧೀಜಿ ಜವಾಹರಲಾಲ್ ನೆಹರು, ನೇತಾಜಿ ಸುಭಾಷ್ ಚಂದ್ರಭೋಸ್, ಡಾ.ನಾ.ಸು. ಹರ್ಡೀಕರ್ ಅವರ ನೇತೃತ್ವದಲ್ಲಿ ಲಕ್ಷಾಂತರ ಸ್ವಯಂ ಸೇವಕರು ಈ ಸಂಸ್ಥೆಯ ಆಶ್ರಯದಲ್ಲಿ ಬೆಳೆದು ದೇಶಕ್ಕಾಗಿ ತಮ್ಮನ್ನು ತಾವು ಅರ್ಪಿಸಿಕೊಂಡು ಧನ್ಯರಾಗಿದ್ದಾರೆ. ಪರಿಪೂರ್ಣ ವ್ಯಕ್ತಿತ್ವವನ್ನು ಯುವಕರಲ್ಲಿ ಬೆಳೆಸುತ್ತಾ ಪೂರ್ಣ ಸ್ವಾತಂತ್ರ್ಯವನ್ನು ಪಡೆಯುವುದೇ ಈ ಸಂಸ್ಥೆಯ ಸ್ಪಷ್ಟ ಗುರಿಯಾಗಿತ್ತು.

ದೇಶದ ಲಕ್ಷಾಂತರ ಜನರ ತ್ಯಾಗ ಬಲಿದಾನಗಳಿಂದ ನಮ್ಮ ರಾಷ್ಟ್ರ ಸ್ವಾತಂತ್ರ್ಯವಾಯಿತು. ಈ ಸ್ವಾತಂತ್ರ್ಯದ ಫಲ ಎಲ್ಲರಿಗೂ ದೊರೆಯುವಂತೆ ಒಂದು ಆದರ್ಶ ಸಮಾಜ ಅಂದರೆ ಸರ್ವೋದಯ ಸಮೂಹದ ಗುರಿಯನ್ನು ನಾವು ಸಾಧಿಸಬೇಕಾಗಿದೆ. ಇದನ್ನು ಸಾಧಿಸದಿದ್ದರೆ ದೇಶದಲ್ಲಿ ಶಿಸ್ತು, ಶಾಂತಿ ಉಳಿಯಲಾರದು. ಇದನ್ನು ಸಾಧಿಸಲು ಸೇವಾದಳವು ಬಹಳ ಮಹತ್ವವಾದ ಪಾತ್ರವನ್ನು ವಹಿಸಬೇಕಾಗಿದೆ.

ಇಂದಿನ ಪರಿಸ್ಥಿತಿಯಲ್ಲಿ ಭಾರತ ಸೇವಾದಳ ಅತ್ಯಂತ ಅವಶ್ಯಕವಾದ ಸಂಸ್ಥೆಯಾಗಿದೆ. ಇಂದಿನ ಯುವಜನಾಂಗದ ಸ್ಥಿತಿ ಕಳವಳಕಾರಿಯಾಗಿದೆ. ಅವರಲ್ಲಿ ಅಶಿಸ್ತು, ಅಶ್ರದ್ಧೆ, ಮತ್ತು ಆತ್ಮಾನಿರಾಭಿಮಾನಗಳು ತುಂಬಿ ತುಳುಕುತ್ತಿದೆ. ಅವರಿಗೆ ಸರಿಯಾದ ಮಾರ್ಗದರ್ಶನವಿಲ್ಲದ ಕಾರಣ ಹಾದಿ ತಪ್ಪಿ ತಮ್ಮ ಜೀವನವನ್ನು ಹಾಳುಮಾಡಿಕೊಳ್ಳುತ್ತಿದ್ದಾರೆ. ಅನಾರೋಗ್ಯಕರವಾದ ಅಭ್ಯಾಸಕ್ಕೆ ಯುವಕರು ಬಲಿಬೀಳುತ್ತಿದ್ದಾರೆ. ಇವರ ಸಮಸ್ಯೆಗಳ ನಿವಾರಣೆಯೇ ದೇಶಕ್ಕೆ ಬಹುದೊಡ್ಡ ಸವಾಲಾಗಿದೆ.

ಯುವಕರ ನಡತೆಯನ್ನು ತಿದ್ದುವುದರಲ್ಲಿ ತಂದೆ ತಾಯಿ ಹಾಗೂ ಕುಟುಂಬದವರು ಬೆನ್ನೆಲುಬಾಗಿ ನಿಲ್ಲಬೇಕು. ಶಾಲಾ ಕಾಲೇಜುಗಳಲ್ಲಿ ಅಧ್ಯಾಪಕರು ಮಾರ್ಗದರ್ಶಕರಾಗಬೇಕು. ಸ್ವಾರ್ಥ ಪರರಾದ ರಾಜಕಾರಣಿಗಳು ಯುವಕರನ್ನು ದುರುಪಯೋಗಪಡಿಸಿಕೊಳ್ಳಬಾರದು. ಭಾರತ ಸೇವಾದಳದಂತಹ ಸರಳ ಮತ್ತು ಶಿಸ್ತು ಬದ್ಧ ಸ್ವಯಂ ಸೇವಾ ಸಂಘಟನೆಯ ಸಂಪರ್ಕಕ್ಕೆ ಯುವಕರು ಬರುವಂತೆ ಸಮಾಜ ಮತ್ತು ಸರ್ಕಾರ ಗಮನಹರಿಸಬೇಕು. ಆಗ ಮಾತ್ರ ಯುವಕರಲ್ಲಿ ಶಿಸ್ತು ದೇಶ ಪ್ರೇಮ, ಸೇವಾಮನೋಭಾವ ಹಾಗೂ ತ್ಯಾಗಬುದ್ಧಿ ರೂಢಿತವಾಗುತ್ತದೆ.

ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅನೇಕ ಯೋಧರು ತ್ಯಾಗ ಮನೋಭಾವದಿಂದ ಭಾಗವಹಿಸಿ ಪರಕೀಯರ ಆಡಳಿತ ಸಂಕೋಲೆಯನ್ನು ಕಳಚಿ ದೇಶದ ಸ್ವಾತಂತ್ರ್ಯಕ್ಕೆ ಮಹಾನ್ ಸೇವೆ ಸಲ್ಲಿಸಿದ್ದಾರೆ. ದೇಶಭಕ್ತರು ಸ್ವಾತಂತ್ರ್ಯ ವೀರರ ಸತ್ಯಾಗ್ರಹದಲ್ಲಿ ಭಾಗವಹಿಸಿ ಪ್ರಾಣ ತ್ಯಾಗ ಮಾಡಿದ್ದಾರೆ. ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರ ಕರೆಗೆ ಓಗೋಟ್ಟು ಅನೇಕ ಸಂಘ-ಸಂಸ್ಥೆಗಳು ಸ್ವಾತಂತ್ರ್ಯದಲ್ಲಿ ಸಕ್ರೀಯವಾಗಿ ಪಾಲ್ಗೊಂಡಿದ್ದವು.

೧೯೩೨ರಲ್ಲಿ ಹಿಂದೂಸ್ಥಾನ್ ಸೇವಾದಳವು ಅಖಿಲ ಭಾರತ ಕಾಂಗ್ರೆಸ್ ಮಹಾ ಸಂಸ್ಥೆಯಲ್ಲಿ ವಿಲೀನವಾಗಿ ಕಾಂಗ್ರೆಸ್ ಸೇವಾದಳ ಮಾರ್ಪಾಡಾಯಿತು. ಸ್ವಾತಂತ್ರ್ಯ ನಂತರ ರಾಷ್ಟ್ರೀಯ ಸೇವಾದಳವು ರಚನಾತ್ಮಕ ಮಹಾನ್ ಸಂಸ್ಥೆಯಾಗಬೇಕೆಂಬ ಆಸೆ ವ್ಯಕ್ತಪಡಿಸಿದ ಮಹಾತ್ಮ ಗಾಂಧೀಜಿಯ ಅಪೇಕ್ಷೆಯಂತೆ ೧೯೫೦ರ ಮಾರ್ಚ್ ೧೨ರಂದು ಜಗತ್ ಪ್ರಸಿದ್ಧ ಶಿಲ್ಪ ಕಲೆಯ ನಾಡು ಬೇಲೂರಿನಲ್ಲಿ "ಭಾರತ ಸೇವಾದಳ" ಉದಯವಾಯಿತು.

ಮಹಾತ್ಮ ಗಾಂಧೀಜಿ ಅವರ ತತ್ವವನ್ನು ಕಾರ್ಯಗತ ಮಾಡುವುದು ಪಕ್ಷಾತೀತವಾಗಿ, ಜಾತ್ಯಾತೀತವಾಗಿ, ಸರ್ವೋದಯ ಮಾರ್ಗದಲ್ಲಿ ನಡೆಯುವುದು, ದೀನದಲಿತರ ಸೇವೆ ಕೈಕೊಳ್ಳುವುದು ಮಕ್ಕಳು ಮತ್ತು ಯುವ ಜನರಲ್ಲಿ ಶಾರೀರಿಕವಾಗಿ, ಮಾನಸಿಕವಾಗಿ, ಬೌದ್ಧಿಕವಾಗಿ ತರಬೇತಿ ನೀಡುವುದು ರಾಷ್ಟ್ರಪ್ರೇಮ, ದೇಶಭಕ್ತಿ ಮತ್ತು ಶಿಸ್ತು ಬೆಳೆಸುವುದು.

ಸಂಸ್ಥೆಯಿಂದ ಸಮಾಜಕ್ಕೆ, ಸಮಾಜದಿಂದ ರಾಜ್ಯಕ್ಕೆ, ರಾಜ್ಯದಿಂದ ರಾಷ್ಟ್ರಕ್ಕೆ ಕೀರ್ತಿ

ತರುವಂತಹ ಕೆಲಸ ಮಾಡಬೇಕಾದರೆ ಅಲ್ಲಿ ಶಿಸ್ತು ಮುಖ್ಯ. ಶಿಸ್ತಿನಿಂದ ಶಕ್ತಿ ಹೆಚ್ಚುತ್ತದೆ. ಒಗ್ಗಟ್ಟು ಬೆಳೆಯುತ್ತದೆ. ಪ್ರೀತಿ, ಪ್ರೇಮ ಪಲ್ಲವಿಸುತ್ತದೆ. ಪಾಥಮಿಕ ಶಾಲಾ ಮಟ್ಟದಿಂದಲೇ ಈ ಸೇವಾದಳದ ಬಗ್ಗೆ ಮಾಹಿತಿಯನ್ನು ಮನನ ಮಾಡಿಕೊಡುವುದರ ಮೂಲಕ ಪ್ರಾಥಮಿಕ ಶಾಲಾ ಮಟ್ಟದಿಂದಲೇ ಭಾರತ ಸೇವಾದಳದ ನಿಯಮಗಳನ್ನು ನಿಯೋಜಿಸಿದ್ದಾರೆ. ಮಕ್ಕಳು ಮತ್ತು ಯುವಜನರಲ್ಲಿ ರಾಷ್ಟ್ರ ಪ್ರೇಮ ರಕ್ತಗತವಾಗಿ ಬೆಳೆಯುತ್ತದೆ.

೧೯೨೩ ರಾಷ್ಟ್ರೀಯ ಸೇವಾದಳವು ಉದಯವಾಯಿತು. ಯುವಕರಲ್ಲಿ ಶಿಸ್ತು, ಸಂಯಮ, ಪ್ರೀತಿ, ವಿಶ್ವಾಸಗಳನ್ನು ಬೆಳೆಸಿ ಯುವಕರನ್ನು ರಾಷ್ಟ್ರ ಪ್ರೇಮಿಗಳನ್ನಾಗಿ ಮಾಡುವುದೇ ಮುಖ್ಯ ಉದ್ದೇಶವಾಗಿತ್ತು. ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ರಾಷ್ಟ್ರೀಯ ಸೇವಾದಳವು ಅತ್ಯಂತ ಪ್ರಮುಖವಾದ ಪಾತ್ರವನ್ನು ವಹಿಸಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ರಾಷ್ಟ್ರೀಯ ಸೇವಾದಳವು ಸ್ವಾತಂತ್ರ್ಯವನ್ನು ಪಡೆಯಲು ಅತ್ಯಂತ ಪ್ರಮುಖವಾದ ಪಾತ್ರವನ್ನು ವಹಿಸಿತು. ಈ ರಾಷ್ಟ್ರೀಯ ಸೇವಾದಳದ ಬೆಳವಣಿಗೆಗೆ ಲಾಲ ಲಜಪತರಾಯ್ ಮತ್ತು ನಾರಾಯಣರಾವ್, ಸುಬ್ಬರಾವ್, ಹರ್ಡೀಕರ್ ಅವರು ಪ್ರಮುಖರು, ಸ್ವಾತಂತ್ರ್ಯ ಸಂಗ್ರಾಮದ ೧೯೨೩ರಲ್ಲಿ ನಾಗಪುರದಲ್ಲಿ ನಡೆದ ರಾಷ್ಟ್ರೀಯ ಕಾಂಗ್ರೆಸ್ ಸಮಾವೇಶದಲ್ಲಿ ಹಿಂದೂಸ್ಥಾನಿ ಸೇವಾದಳವನ್ನು ೨೮-೧೨-೧೯೨೩ರಲ್ಲಿ ಸ್ಥಾಪಿಸಲಾಯಿತು. ಇದರ ಪ್ರಥಮ ಅಧ್ಯಕ್ಷರು ಪಂಡಿತ್ ಜವಾಹಾರಲಾಲ್ ನೆಹರು ಅವರು ಪ್ರಸ್ತುತದಲ್ಲಿ ಜಾಗತೀಕರಣದ ಜಂಜಾಟ, ಆಧುನೀಕತೆಯ ಅಬ್ಬರ, ಉದಾರೀಕರಣದ ಅಬ್ಬರ, ಹೀಗೆ ಕರಣಗಳ ಕಠೋರತೆಯಿಂದ ಇವತ್ತಿನ ಯುವಕರಲ್ಲಿ ಸಾಮಾಜಿಕ ಒಲವು, ದೇಶಭಕ್ತಿ, ಐಕ್ಯತೆ, ಸಾಂಘಿಕತ್ವ, ಎಲ್ಲೋ ಒಂದು ಕಡೆ ಚದುರುತ್ತಾ ಸಮಾಜದ ವಿಸಂಘಟನೆಯಾಗುತ್ತಿದೆಯೇನೋ ಅನ್ನಿಸುತ್ತದೆ. ಆದ್ದರಿಂದ ಈ ಮೇಲೆ ಉಲ್ಲೇಖಿಸಲಾದ ಗಾಂಧಿ, ಅಂಬೇಡ್ಕರ್, ಹರ್ಡೀಕರ್, ನೇತಾಜಿ, ಸುಭಾಷ್ ಚಂದ್ರ ಭೋಸ್, ಶ್ರೀನಿವಾಸ ಅಯ್ಯಂಗಾರ್, ಪಂಡಿತ್ ಜವಹಾರ್ ಲಾಲ್ ನೆಹರು ಇನ್ನು ಅನೇಕರ ತತ್ವ ಸಿದ್ಧಾಂತಗಳನ್ನು ಪುನರ್ ನೆನಪು ಮಾಡಿಕೊಂಡು ಅವರ ತಾತ್ವಿಕ ಆಲೋಚನೆಗಳಿಗೆ ಇಂದಿನ ಸಮಾಜವು ಮುಖಾಮುಖಿಯಾಗಿ ಕ್ರಮಿಸುವಂತೆ ಮಾಡುವ ಕೆಲಸ ನಮ್ಮ ಸಮಾಜದ ಮುಂದೆ ಇದೆ. ಆ ಕೆಲಸವನ್ನು ಇಂತಹ ಸೇವಾದಳಗಳು ನಿರ್ವಹಿಸಬೇಕಾಗಿದೆ. ದೇಶದ ಯುವಕರನ್ನು ಜಾಗೃತರಾಗುವಂತೆ ಪ್ರೇರೇಪಿಸುವುದೇ ಭಾರತ ಸೇವಾದಳದ ಜೀವ ಮಂತ್ರ.

"ಅಜಾದ್ ಹಿಂದ್ ಜಿಂದಾಬಾದ್

ಕೌಮಿನಾರಾ ವಂದೇ ಮಾತರಂ"

"ಜೈ ಹಿಂದ್" ಎಂಬ ಘೋಷಣೆಗಳು.

ನೇತಾಜಿ ಟ್ರಸ್ಟನ ಸಂಸ್ಥಾಪಕರು

ಪ್ರೊ. ಕೆ.ಆರ್. ಸುಶೀಲೆ ಗೌಡರು ಬಾಲ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣವನ್ನು ಕಬ್ಬತ್ತಿ ಮತ್ತು ಗೊರೂರಿನಲ್ಲಿ ಮುಗಿಸಿದರು. ಆಗ ಅವರು ಕಾಲು ನಡಿಗೆಯಲ್ಲಿ ೫-೬ ಮೈಲಿ ನಡೆದು ಹೋಗಬೇಕಾಗಿತ್ತು. ಮುಂದೆ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಅವರು ತುಮಕೂರು, ಮೈಸೂರುಗಳನ್ನು ಸುತ್ತಿದರು. ಕನ್ನಡ ಪಂಡಿತ, ಹಿಂದ ಪಂಡಿತವನ್ನು ಪಡೆದರು. ಜಿಮ್ನಾಷಿಯಂ ಶಾಲೆ ಶಿಕ್ಷಕರಾಗಿ, ಹಾಸನ ಮತ್ತು ಬೇಲೂರಿನ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿದ್ದಾರೆ. ಅಖಿಲಭಾರತ ಮಟ್ಟದಲ್ಲಿ ಹಾಸನ ಜಿಲ್ಲೆಯ ನೆಹರು ಯುವ ಕೇಂದ್ರದ ಸಮನ್ವಯಾಧಿಕಾರಿಯಾಗಿ ಸೇವೆ ಸಲ್ಲಿಸಿದ್ದಾರೆ. ೧೯೮೫ರಲ್ಲಿ ಉತ್ತಮ ಸಮಾಜ ಸೇವಾ ಕಾರ್ಯಕರ್ತರೆಂದು ಪ್ರಶಂಶೆಗೆ ಪಾತ್ರರಾಗಿದ್ದಾರೆ.

ಶ್ರೀ ಗೌಡರಿಗೆ ಅಸಾಧ್ಯವಾದ ಕೆಲಸವೆಂಬುದಿಲ್ಲ ಮತ್ತು ಇಂತಹದ್ದೇ ಕೆಲಸವೆಂಬುದಿಲ್ಲ ದೇವಸ್ಥಾನದ ನಿರ್ಮಾಣ ಕೆಲಸದಲ್ಲಿ ಸಹಕರಿಸುವಷ್ಟೇ ಶ್ರದ್ಧೆಯಿಂದ ಅಥವಾ ಅದಕ್ಕೂ ಹೆಚ್ಚು ಶ್ರದ್ಧೆಯಿಂದ ಹರಿಜನ ಗಿರಿಜನ ಸೇವಾ ಕಾರ್ಯಗಳಲ್ಲಿ ಪ್ರಾಮಾಣಿಕತೆಯಿಂದ ಸಹಕರಿಸಿ ದುಡಿದಿದ್ದಾರೆ. ಮಂಗಳೂರು ಬಿಟ್ಟು ಬಹುದಿನಗಳಾದರೂ ಮಂಗಳೂರು ಅಲ್ಲಿನ ಹರಿಜನ ಗಿರಿಜನ ಸೇವಾ ಟ್ರಸ್ಟ್‌ನ (ಸ್ವಾಮಿ ಈಶ್ವರಾನಂದ ಸೇವಾ ಟ್ರಸ್ಟ್) ಉಪಾಧ್ಯಕ್ಷರಾಗಿ ಹಾಗೂ ವಿಶ್ವಸ್ಥ ಮಂಡಳಿ ಸದಸ್ಯರಾಗಿ ಮುಂದುವರೆದಿದ್ದು ಉದಾಹರಣೆಯಾಗಿ ಕಾಣಬಹುದು.

ಅಸ್ಪೃಶ್ಯರ ಬಗ್ಗೆ ಗೌಡರಿಗೆ ವಿಶೇಷವಾದ ಅನುಕಂಪ. ಸಮಾಜ ಅವರನ್ನು ನಡೆಸಿಕೊಳ್ಳುವ ರೀತಿ ಗೌಡರನ್ನು ಕೆರಳಿಸಿತ್ತು. ಅವರು ಹರಿಜನರ ಬಗ್ಗೆ ತಮ್ಮ ಮಾನವೀಯ ಕಳಕಳಿಯನ್ನು ಹಲವು ಕಾರ್ಯಕ್ರಮಗಳಲ್ಲಿ ಸಮಸ್ತರಲ್ಲಿ ತೋಡಿಕೊಂಡಿದ್ದಾರೆ. ಹರಿಜನರನ್ನು ಮುಟ್ಟಿದರೆ ಸ್ನಾನ ಮಾಡಬೇಕು, ಅವರ ಜೊತೆಯಲ್ಲಿ ಮಾತನಾಡಿದರೆ ಮೈಲಿಗೆಯಾಗುತ್ತದೆ, ಎನ್ನುವ ಮಟ್ಟಕ್ಕೆ ಸಮಾಜ ಹೋಗುವುದಾದರೆ ಅನಿಷ್ಟ ಪದ್ಧತಿಯನ್ನು ಕಾನೂನು ಬದ್ಧವಾಗಿ ತೊಡೆದು ಹಾಕಬೇಕು ಕೆಳಗೆ ಬಿದ್ದಿರತಕ್ಕವರಿಗೆ, ದೀನದಲಿತರಿಗೆ ವಿಶೇಷವಾದ ವಿದ್ಯಾಭ್ಯಾಸ ಸೌಕರ್ಯವನ್ನು ಒದಗಿಸಿಕೊಡಬೇಕು. ಶಿಕ್ಷಣವಿಲ್ಲದೆ ಸ್ವಾಭಿಮಾನ ಹುಟ್ಟದು, ಗುಲಾಮಗಿರಿ ಭಾವನೆ ತೊಲಗದು, ಸ್ವಾಭಿಮಾನ ಜಾಗೃತವಾಗದು, ಜನ ಜನಾಂಗದಿಂದ ಸಾಮಾಜಿಕ ಆರ್ಥಿಕ ಅನ್ಯಾಯದ ವಿರುದ್ಧ ಬಂಡು ಹೂಡಲು ಸಾಧ್ಯವಿಲ್ಲ, ಮಾನವ ಹಕ್ಕುಗಳನ್ನು ದೊರಕಿಸಿಕೊಳ್ಳುವಲ್ಲಿ ಸಫಲರಾಗಲು ಎಲ್ಲರೂ ಈ ಜಾತಿ ಮತ ಹಾಗೂ ವರ್ಗಗಳ ಕೊಳಚೆಯಿಂದ ಹೊರಬಂದು ಸಮಾನತೆಯ ಸಮಾಜವನ್ನು ಕಟ್ಟಬೇಕು ಎಂಬ ಆಶಯದ

ನೆಲೆಗಟ್ಟಿನ ಮೇಲೆಯೇ ನಿರ್ಮಾಣವಾದದ್ದು ಈ ನೇತಾಜಿ ರೂರಲ್ ಡೆವಲಪ್‌ಮೆಂಟ್ ಟ್ರಸ್ಟ್ (ರಿ).

ದಿನಾಂಕ: ೦೨.೧೦.೧೯೯೭ನೇ ಗುರುವಾರ ಪ್ರಾತಃಕಾಲ ೧೦.೩೦ಕ್ಕೆ ಹಾಸನದ ವಿದ್ಯಾನಗರದಲ್ಲಿ ನೂತನವಾಗಿ ನಿರ್ಮಿಸಿದ ನೇತಾಜಿ ಪಬ್ಲಿಕ್ ಸ್ಕೂಲ್‌ನ ಕಟ್ಟಡದ ಉದ್ಘಾಟನೆಯಾಯಿತು. ಪ್ರೊ. ಕೆ.ಆರ್. ಸುಶೀಲೇಗೌಡರು ಇದರ ಮ್ಯಾನೇಜಿಂಗ ಟ್ರಸ್ಟಿಗಳು.

ಸಮಾಜ ಹಾಗೂ ವಿದ್ಯಾ ಕ್ಷೇತ್ರಕ್ಕೆ ಅಳಿಲು ಸೇವೆಯ ದೃಷ್ಟಿ ಹಂಬಲದಿಂದ ನೇತಾಜಿ ರೂರಲ್ ಡೆವಲಪ್‌ಮೆಂಟ್ ಟ್ರಸ್ಟ್‌ನ್ನು ಸ್ಥಾಪಿಸಿ, ನೋಂದಾಯಿಸಲಾಯಿತು. ಪ್ರೈಮರಿ ತರಗತಿಯಿಂದ ಪ್ರೌಢಶಾಲೆಯವರೆಗೆ ಮಕ್ಕಳಿಗೆ ಉತ್ತಮವಾದ ವಿದ್ಯಾಭ್ಯಾಸ ನೀಡಬೇಕೆಂಬ ಹೆಬ್ಬಯಕೆಯಿಂದ ನೇತಾಜಿ ಪಬ್ಲಿಕ್ ಸ್ಕೂಲ್ ಪ್ರಾರಂಭವಾಯಿತು.

ಈ ಸ್ಕೂಲ್‌ನಲ್ಲಿ ದೀನರಿಗೆ, ದಲಿತರಿಗೆ, ಹೊರ ರಾಜ್ಯಗಳಿಂದ ವರ್ಗವಾಗಿ ಬರುವ ನೌಕರರ ಮಕ್ಕಳಿಗೆ ಅನುಕೂಲವಾಗುವಂತೆ ಕೇಂದ್ರ ಸರ್ಕಾರದ ಎನ್.ಸಿ.ಇ.ಆರ್.ಟಿ. ಪಠ್ಯಕ್ರಮವನ್ನು ಅನುಸರಿಸಿ ಸಿ.ಬಿ.ಎಸ್.ಸಿ.ಗೆ ನಿಯೋಜಿನೆ ಗೊಳಿಸಲಾಗಿದೆ.

ನೇತಾಜಿ ರೂರಲ್ ಡೆವಲಪಮೆಂಟ್ ಟ್ರಸ್ಟ್ (ರಿ) ಇದು ವಿಶಾಲವಾದ ಆವರಣವನ್ನು ಮತ್ತು ವಾತಾವರಣವನ್ನು ಹೊಂದಿದೆ. ಇಲ್ಲಿ ನರ್ಸರಿ, ೧ ರಿಂದ ೭ನೇ ತರಗತಿ, ೮ ರಿಂದ ೧೦ನೇ ತರಗತಿ ಮತ್ತು ತರಬೇತಿ ಕೋರ್ಸ್‌ಗಳಾದ ಐಟಿಐ ಹಾಗೂ ಡಿ.ಇಡಿ.ಗಳು ಇವೆ.

ಅಧ್ಯಾಯ - ಐದು

ಸಮಾರೋಪ

ಸಾಹಿತ್ಯದಲ್ಲಿ ಸಾಹಿತ್ಯದಷ್ಟೇ ಸಾಹಿತ್ಯದ ಸೃಷ್ಟಿಕಾಯ ಜನಪ್ರಿಯ ಅಧ್ಯಾಯನಾಸಕ್ತರಿಗೆ ಸಾಹಿತ್ಯ ಕೃತಿಯಂತೆ ಸಾಹಿತಿಯೂ ಹತ್ತಿರವಾಗಬೇಕು. ಸಾಹಿತ್ಯದ ಜೊತೆಗೆ ಜೊತೆಗೆ ಕವಿಯ (ಲೇಕಖ) ಬದುಕು ಮಿಳಿತಗೊಳ್ಳಬೇಕು. ನುಡಿದಂತೆ ನಡೆದವರು. ಬರೆದಂತೆ ಬದುಕಿದವರು ನಮ್ಮ ಕವಿಗಳು, ಜನಪದರು ಮತ್ತು ಸುಶೀಲೇಗೌಡರು ಆದ್ದರಿಂದ ಇವರುಗಳು ಸಾಹಿತ್ಯ ಕ್ಷೇತ್ರದಲ್ಲಿ ಅಷ್ಟೇ ಮುಖ್ಯವಾಗಿ ಬಿಡುತ್ತಾರೆ. ಕವಿ, ಸಾಹಿತಿ, ಲೇಖಕ ಮುಂತಾದವರ ಬದುಕಿನೊಂದಿಗೆ ಅವರ ಸಾಹಿತ್ಯಾಧ್ಯಯನವು ನಡೆದರೆ ಸಮಗ್ರತೆಗೆ ಇಂಬುಬರುತ್ತದೆ.

ಈ ನಿಟ್ಟಿನಲ್ಲಿ ಜನಪ್ರಿಯ ಸಮಾಜ ಸೇವಕರಾದ ಪ್ರೊ. ಕೆ.ಆರ್. ಸುಶೀಲೇಗೌಡರು ಅವರ ಬದುಕು ಹಾಗೂ ಅವರ ಸಾಹಿತ್ಯ ಸೃಜನ ಕಾರ್ಯಗಳನ್ನು ಅಧ್ಯಯನ ಮಾಡುವುದರೊಂದಿಗೆ ಅದರ ಹಿನ್ನೆಲೆಯಲ್ಲಿ ಅವರು ಹುಟ್ಟಿ ಬೆಳೆದ ಪರಿಸರ ಅವರ ಮನೋಭಾವ, ಶೈಕ್ಷಣಿಕತೆ, ತೊಡಕುಗಳು ಹೀಗೆ ಹಲವಾರು ವೈಪರೀತ್ಯಗಳಿಂದ ಕೂಡಿದ ಬದುಕಿನೊಂದಿಗೆ ಸಾಹಿತ್ಯದ ಉಗಮವನ್ನು ಗುರುತಿಸಲಾಗಿದೆ.

ಪ್ರೊ. ಕೆ.ಆರ್. ಸುಶೀಲೇಗೌಡ ಅವರು 'ಕಬ್ಬತ್ತಿ ರಂಗ' ಕೃತಿ ಸಂಗ್ರಹದೊಂದಿಗೆ ಸಾಹಿತ್ಯ ಲೋಕಕ್ಕೆ ಪಾದಾರ್ಪಣೆ ಮಾಡಿದರು. ಜಾನಪದ ಸಾಹಿತ್ಯ ಸಾಗರದಲ್ಲಿ ತಲೆ ಎತ್ತಿನಿಂತ ದ್ವೀಪಗಳಲ್ಲಿ ಸುಶೀಲೇಗೌಡ ಅವರು ಒಬ್ಬರು. ಅವರ ಕಬ್ಬತ್ತಿ ರಂಗ ಕೃತಿಯನ್ನು ಒರೆಗೆ ಹಚ್ಚಲಾಗಿದೆ. ನಿರಾಡಂಬರತೆ ಇವರ ಬದುಕಿನ ಪ್ರಮುಖ ಅಂಶಗಳಲ್ಲೊಂದು.

ಪ್ರೊ. ಕೆ.ಆರ್. ಸುಶೀಲೇಗೌಡ ಅವರು ಒಬ್ಬ ವಿಶಿಷ್ಟ ವಾಗ್ಮಿಗಳು, ಬರಹಗಾರರು, ಆಗಿ ಕಂಡು ಬರುತ್ತಾರೆ. ವೃತ್ತಿಯಲ್ಲಿ ಶಿಕ್ಷಕರಾದರು ಪ್ರವೃತ್ತಿಯಲಲ್ಲಿ ಸಾಹಿತಿಯಾಗಿ ಅಪೂರ್ವ ವ್ಯಕ್ತಿತ್ವದಿಂದ ಹಾಸನ ಜಿಲ್ಲೆಯ ಸಮಸ್ತರ ಮನಸೂರೆಗೊಂಡವರು. ಇಂತಹ ಅಪ್ರತಿಮ ವ್ಯಕ್ತಿಯಾದ ಪ್ರೊ. ಕೆ.ಆರ್. ಸುಶೀಲೇಗೌಡ ಅವರ ಜೀವನ ಹಾಗೂ ಸಾಧನೆಯ ಕುರಿತಾಗಿ ಬೆಳಕು ಚೆಲ್ಲುವ ದೃಷ್ಟಿಯಿಂದಲೇ ಈ ಸಂಶೋಧನೆ ಕೈಗೊಳ್ಳಲಾಯಿತು. ಅವರ ವೃತ್ತಿ ಪ್ರವೃತ್ತಿ ಮಾತ್ರವಲ್ಲದೆ ಅವರ ವ್ಯಕ್ತಿತ್ವದ ಕಿರುಪರಿಚಯ ಮಾಡಿಕೊಡಲಾಗಿದೆ. ಸಮಾಜದ ಪ್ರತಿಯೊಂದು ಜಡ್ಡಿಗೂ ತಾವೇ ರೋಗಿಯಾಗಿ ಔಷಧಗಳನ್ನು ತಮ್ಮ ಮೇಲೆಯೇ ಪ್ರಯೋಗಿಸಿ ನೋಡುವ ಪ್ರವೃತ್ತಿಯೇ ಇಂದಿಗೂ ನಾವು ಅವರನ್ನು ಹಿಂದಿರುಗಿ ನೋಡುವಂತೆ ಮಾಡಿದೆ.

ಜಾನಪದವನ್ನು ಕುರಿತು ಸುಧೀರ್ಘವಾಗಿ ಅಧಿಕಾರ ವಾಣಿಯಿಂದ ಮಾತನಾಡಬಲ್ಲ ಅಪೂರ್ವ ವಾಗ್ಮಿಗಳು ಇವರು ಈ ಇಳಿಯವಯಸ್ಸಿನಲ್ಲಿಯೂ ಇನ್ನು ಮಾನಸಿಕವಾಗಿ ನಿಜ ಯೌವನದ ಕೆಚ್ಚನ್ನೆ ಇಟ್ಟುಕೊಂಡಿದ್ದಾರೆ. ಅರಿವು ಮರೆವುನಲ್ಲಿದ್ದರೂ ಹಿಡಿದ ಛಲವನ್ನು ಕೈ ಬಿಡದಿರುವುದು ಅವರ ವ್ಯಕ್ತಿತ್ವದ ವೈಶಿಷ್ಟತೆಗೆ ಹಿಡಿದ ಕೈಗನ್ನಡಿ.

ಅಸ್ಪೃಶ್ಯರ ಬಗ್ಗೆ ಗೌಡರಿಗೆ ವಿಶೇಷವಾದ ಅನುಕಂಪ. ಸಮಾಜ ಅವರನ್ನು

ನಡೆಸಿಕೊಳ್ಳುವ ರೀತಿ ಗೌಡರಿಗೆ ಸಹಿಸಲಾಗದು. ಅವರು ಹರಿಜನರ ಬಗ್ಗೆ ತಮ್ಮ ಮಾನವೀಯ ಕಳಕಳಿಯನ್ನು ಹಲವಾರು ಬಾರಿ ಎಷ್ಟೋ ಕಾರ್ಯಕ್ರಮಗಳಲ್ಲಿ ತೋಡಿಕೊಂಡಿದ್ದಾರೆ. ಹರಿಜನರನ್ನು ಮುಟ್ಟಿದರೆ ಸ್ನಾನ ಮಾಡಬೇಕು, ಅವರ ಜೊತೆಯಲ್ಲಿ ಮಾತನಾಡಿದರೆ ಮೈಲಿಗೆಯಾಗುತ್ತದೆ ಎನ್ನುವ ಮಟ್ಟಕ್ಕೆ ಸಮಾಜ ಹೋಗುವುದಾದರೆ ಅನಿಷ್ಟ ಪದ್ಧತಿಯನ್ನು ಕಾನೂನು ಬದ್ಧವಾಗಿ ತೊಡೆದುಹಾಕಬೇಕು. ಕೆಳಗೆ ಬಿದ್ದಿರತಕ್ಕವರಿಗೆ, ದೀನದಲಿತರಿಗೆ ವಿಶೇಷವಾದ ವಿದ್ಯಾಭ್ಯಾಸ ಸೌಕರ್ಯವನ್ನು ಒದಗಿಸಿಕೊಡಬೇಕು. ಶಿಕ್ಷಣವಿಲ್ಲದೆ ಸ್ವಾಭಿಮಾನ ಹುಟ್ಟದು, ಗುಲಾಮಗಿರಿ ಭಾವನೆ ತೊಲಗದು ಎಂಬ ಮನೋಭಾವನೆಯನ್ನು ಉಳ್ಳವರಾಗಿದ್ದಾರೆ ಗೌಡರು.

ಹುಟ್ಟಿನಿಂದಲೂ ಸ್ವಾಭಿಮಾನದ ಸಂಕೇತವಾಗಿ, ಮಾನವತೆಯ ಮೂರ್ತಿಯಾಗಿ ಬದುಕುತ್ತಿರುವ ಗೌಡರ ಬದುಕು ನಿಜಕ್ಕೂ ಆದರ್ಶ ಪ್ರಾಯವೇ ಸರಿ. ಬದುಕಿನುದ್ದಕ್ಕೂ ಸಮಾಜದಲ್ಲಿ ಬೇರೆ ಬೇರೆ ವ್ಯವಸ್ಥೆಗಳಲ್ಲಿ ನಲುಗಿದ ಶೋಷಿತರ ಪರವಾಗಿ ನಿಂತಿರುವವರು. ಒಬ್ಬ ಪ್ರಾಮಾಣಿಕ ಶ್ರೀಮಂತ ಬಡವನಾಗಿ ಉಳಿದಿರುವ, ವ್ಯಕ್ತಿ ಆಂತರಿಕ ಭಾವ ಬದುಕನ್ನು ಪ್ರತಿಬಿಂಬಿಸುವ ಶುಭ್ರವಾದ ಬಿಳಿಯಂತೆ ಅವರ ಮನಸ್ಸು ಅರಿತವರಿಗೆ ಅತ್ಯಂತ ಸಾತ್ವಿಕ ವ್ಯಕ್ತಿ, ಅರಿಯದವರಿಗೆ ಹಮ್ಮು ಬಿಮ್ಮಿನ ಮನುಷ್ಯ, ವಿದ್ಯುತ್ತಿನಿಂದ ಮಾಗಿದ ವಿನಯವಂತಿಕೆ ಗೌಡರದ್ದು.

ವ್ಯಕ್ತಿಯಾಗಿ ಸುಶೀಲೇಗೌಡರ ಜೀವನ ಕ್ರಮವನ್ನು ಅಧ್ಯಯನ ಮಾಡುವುದರ ಮೂಲಕ ಒಂದು ಶಕ್ತಿಯಾಗಿ ಹೊರ ಹೊಮ್ಮಿದ ಸಂಗತಿಗಳನ್ನು ಹಾಗೂ ಅದಕ್ಕೆ ಪುಷ್ಠಿ ನೀಡಿದ ಸಂದರ್ಭಗಳನ್ನು ಈ ಅಧ್ಯಯನದಲ್ಲಿ ಅಣಿಗೊಳಿಸಲಾಗಿದೆ. ಅಂತೆಯೇ ಅವರ ಸಾಧನೆಯನ್ನು ಕೂಡ ಸಂಶೋಧನೆಯ ದೃಷ್ಟಿಯಿಂದ ಅವಲೋಕಿಸಿ ಸಮಗ್ರ ಚಿತ್ರಣವನ್ನು ಕೊಡಲು ಪ್ರಯತ್ನಿಸಿದ್ದೇನೆ. ಅವರ ಜೀವನದ ಸಂದರ್ಭದಲ್ಲಿ ಜನಪದದ ಮಹತ್ವವನ್ನು ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

ಪ್ರಸ್ತುತ ಪ್ರಬಂಧ ಪ್ರೊ. ಕೆ.ಆರ್. ಸುಶೀಲೇಗೌಡ ಅವರ ಬದುಕು ಸಾಧನೆಯ ಬಗ್ಗೆ ಹೇಳುವ ಮೊಟ್ಟ ಮೊದಲಕೃತಿ ಎಂಬುದು ಮಾತ್ರ ನಿಜ. ಆದ್ದರಿಂದ ಆಗಿದ್ದು, ಅಲ್ಪ ಆಗಬೇಕಾದದ್ದು ಅಪಾರ ಎಂದು ಭಾವಿಸಿರುವ ನಾನು ನನ್ನ ಅಧ್ಯಯನದ ಅನುಭವದ ಮಿತಿಯಲ್ಲಿ ನನ್ನ ಸಂಶೋಧನೆಯ ವಿಚಾರಗಳನ್ನಿಲ್ಲಿ ಸಾದರಪಡಿಸಿದ್ದೇನೆ.

ಅನುಬಂಧಗಳು

ಪ್ರಮುಖ ಘಟನೆಗಳು

ಹೆಸರು	:	ಪ್ರೊ. ಕೆ.ಆರ್. ಸುಶೀಲೇಗೌಡ
ವಿಳಾಸ	:	ಮ್ಯಾನೇಜಿಂಗ್ ಟ್ರಸ್ಟಿ ನೇತಾಜಿ ರೂರಲ್ ಡೆವಲಪ್‌ಮೆಂಟ್ ಟ್ರಸ್ಟ್ (ರಿ) ಶ್ರೀ ರಂಗನಾಥ ನಿಲಯ ವಿದ್ಯಾನಗರ – ಹಾಸನ – 573 201
ತಂದೆ ಮತ್ತು ತಾಯಿ	:	ಶ್ರೀ ರಂಗೇಗೌಡ ಮತ್ತು ಶ್ರೀಮತಿ ಪುಟ್ಟಮ್ಮ
ವಿದ್ಯಾರ್ಹತೆ	:	ಎಂ.ಎ., ಬಿ.ಇಡಿ., ಡಿ.ಪಿ.ಇಡಿ., ಸಾಹಿತ್ಯ ರತ್ನ ವಿದ್ವಾನ್, ಕನ್ನಡ ಪಂಡಿತ, ರಾಷ್ಟ್ರಭಾಷಾ ಪ್ರವೀಣ.
ಸೇವೆ	:	ಮಂಗಳೂರಿನಲ್ಲಿ ಭಾರತೀಯ ವಿದ್ಯಾ ಭವನದ ಆಶ್ರಯದಲ್ಲಿ 1977–82ರವರೆಗೆ ಸಂಸ್ಕೃತ ಪಾಠ ಶಾಲೆಯ ಸ್ಥಾಪಕ ಸದಸ್ಯರಾಗಿ. 1972–82ರವರೆಗೆ ಭಾರತೀಯ ವಿದ್ಯಾಭವನದ ಗೀತಾ ಪರೀಕ್ಷೆಗಳ ವ್ಯವಸ್ಥಾಪಕರಾಗಿ 1974–80ರವರೆಗೆ ಮಂಗಳೂರಿನಲ್ಲಿ ಸಂಸ್ಕೃತ ನಾಟಕ ಅಭಿನಯಗಳ ನಿರ್ದೇಶಕರಾಗಿ 1970–82ರವರೆಗೆ ಸಂಸ್ಕೃತ ಪರೀಕ್ಷೆಗಳ ಕೇಂದ್ರ ವ್ಯವಸ್ಥಾಪಕರಾಗಿ. ಮಂಗಳೂರು ವಿಶ್ವವಿದ್ಯಾಲಯದ ಶಿಕ್ಷಣ ಸಮಿತಿ ಮತ್ತು ಅಧ್ಯಯನ ಮಂಡಳಿಯ ಸದಸ್ಯ ಹಾಗೂ ರಾಷ್ಟ್ರೀಯ ಸೇವಾ ಯೋಜನೆಯ ಸಲಹಾ ಸಮಿತಿಯ ಸದಸ್ಯರಾಗಿ. 1978–92ರವರೆಗತೆ ಅಖಿಲ ಭಾರತ ವಯಸ್ಕರ ಶಿಕ್ಷಣ ಸಮಿತಿ ದೆಹಲಿ ಇಲ್ಲಿ ಸಹಕಾರ್ಯದರ್ಶಿಯಾಗಿ ಹಾಗೂ ಕಾರ್ಯ ಕಾರಿ ಸಮಿತಿಯ ಸದಸ್ಯರಾಗಿ. 1986–87ರವರೆಗೆ ಮೈಸೂರು ವಿಶ್ವವಿದ್ಯಾಲಯದ ಸೆನೆಟ್ ಸದಸ್ಯರಾಗಿ 1989–90ರವರೆಗೆ ಶಿಕ್ಷಣ ಸಮಿತಿ ಸದಸ್ಯರಾಗಿ ಹಾಗೂ ಸೆನೆಟ್ ಸಮಿತಿಯ ಸದಸ್ಯರಾಗಿ, ಹಿಂದಿ ಪುಸ್ತಕ ರಚನಾ ಸಮಿತಿಯ ಸದಸ್ಯನಾಗಿ ಹಿಂದಿ ಅಧ್ಯಯನ ಸಮಿತಿಯ ಸದಸ್ಯನಾಗಿ ಹಾಗೂ ಪರೀಕ್ಷೆ ಸಮಿತಿಯ ಅಧ್ಯಕ್ಷನಾಗಿ. ನೆಹರು ಯುವಕ ಕೇಂದ್ರ, ಹಾಸನ ಇಲ್ಲಿ 1984ರಲ್ಲಿ ಯುವ ಸಮನ್ವಯಾಧಿಕಾರಿಯಾಗಿ. ಕರ್ನಾಟಕ ಭಾರತ ಸೇವಾದಳದ ರಾಜ್ಯಮಟ್ಟದ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ 1978–89ರವರೆಗೆ ಶಿಕ್ಷಣ ಸಮಿತಿ ಸದಸ್ಯ ಹಾಗೂ ಅಧ್ಯಕ್ಷರಾಗಿ

		ಸರ್ಕಾರಿ ಪಠ್ಯಪುಸ್ತಕ ರಚನಾ ಸಮಿತಿಯಲ್ಲಿ 1974–75 ರವರೆಗೆ ಅಧ್ಯಕ್ಷರಾಗಿ ಹಾಗೂ 1975–86ರವರೆಗೆ ಸದಸ್ಯರಾಗಿ 1985–88ರವರೆಗೆ ಸರ್ಕಾರಿ ಕಲಾ ಕಾಲೇಜು ಹಾಸನದಲ್ಲಿ ಪ್ರಾಂಶುಪಾಲರಾಗಿ 1988–92ರವರೆಗೆ ಬೇಲೂರಿನ ಪ್ರಥಮ ದರ್ಜೆ ಕಾಲೀಜಿನ ಪ್ರಾಂಶುಪಾಲರಾಗಿ 1992–95ರವರೆಗೆ ಹಾಸನ ವಿಜ್ಞಾನ ಕಾಲೇಜಿನ ಪ್ರಾಂಶುಪಾಲರು 1975–82ರವರೆಗೆ ಮಂಗಳೂರಿನ ಗಾಂಧಿ ಪ್ರತಿಷ್ಠಾನ ಕೇಂದ್ರದ ನಿರ್ದೇಶಕರಾಗಿ 2004 ರಿಂದ ಇಂಡಿಯನ್ ಇನ್‌ಸ್ಟ್ಯೂಟ್ ಆಫ್ ಪಬ್ಲಿಕ್ ಅಡ್ಮಿನಿಸ್ಟ್ರೇಷನ್, ಕರ್ನಾಟಕ ಪ್ರಾಂತೀಯ ಆಡಳಿತ ಮಂಡಳಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ.
ವಿವಾಹ	:	1962ರಲ್ಲಿ ಕಮಲಮ್ಮ ಅವರೊಂದಿಗೆ ವಿವಾಹ
ಪ್ರಕಟನೆಗಳು	:	ಕಬ್ಬತ್ತಿರಂಗ (ಜನಪದ ಹಾಡುಗಳ ಸಂಗ್ರಹ) ಕೆಲವು ಲೇಖನಗಳು, ರಾಜ್ಯಮಟ್ಟದ ದಿನ ಪತ್ರಿಕೆಗಳಲ್ಲಿ ಮತ್ತು ವಾರ್ಷಿಕ ಸಂಚಿಕೆಗಳಲ್ಲಿ ಪ್ರಕಟವಾಗಿದೆ.
ಇತರ ವಿಷಯಗಳು	:	ವಿನೋಬಾಭಾವೆ ಕರ್ನಾಟಕದಲ್ಲಿ ನಡೆಸಿದ ಭೂದಾನ ಚಳವಳಿಯಲ್ಲಿ ಸಕ್ರೀಯ ಪಾತ್ರ.. ನಾಗಲ್ಯಾಂಡಿನ ಮೆಡ್ಮಿ ಫೇಮಾದಲ್ಲಿ ನಡೆದ ರಾಷ್ಟ್ರೀಯ ಭಾವೈಕ್ಯತಾ ಶಿಬಿರ ಮತ್ತು ರಾಜಸ್ಥಾನದ ಬಾಡ್ ಮೀರದಲ್ಲಿ ಭಾಗವಹಿಸಿ ಬಹುಮಾನವನ್ನು ಪಡೆದಿದ್ದಾರೆ. ವಿದ್ಯಾನಗರ ಗೃಹ ನಿರ್ಮಾಣ ಸಹಕಾರ ಸಂಘ ಹಾಸನದ ಸದಸ್ಯ ಮತ್ತು ಅಧ್ಯಕ್ಷರಾಗಿ ನೇತಾಜಿ ರೂರಲ್ ಡೆವಲಪ್‌ಮೆಂಟ್ ಟ್ರಸ್ಟ್ (ರಿ) ಹಾಸನ ಇದರ ಸಂಸ್ಥಾಪಕ ಟ್ರಸ್ಟೀ ನೇತಾಜಿ ಪಬ್ಲಿಕ್ ಸ್ಕೂಲ್ ಹಾಗೂ ನೇತಾಜಿ ಕೈಗಾರಿಕಾ ತರಬೇತಿ ಕೇಂದ್ರ ಹಾಸನ ಮತ್ತು ಮಂಗಳೂರು ಜಿಲ್ಲೆಗಳಲ್ಲಿ ಗ್ರಾಮೀಣಾಭಿವೃದ್ಧಿಗಾಗಿ ನಡೆದ ಶ್ರಮದಾನ ಹಾಗೂ ಸೇವಾ ಶಿಬಿರಗಳಲ್ಲಿ ಅತ್ಯುತ್ತಮವಾದ ಸೇವೆಯನ್ನು ಸಲ್ಲಿಸಿರುವ ಬಗ್ಗೆ ಪ್ರಮಾಣ ಪತ್ರ.
ಮಕ್ಕಳು	:	1963ರಲ್ಲಿ ಪುತ್ರಿ ಕೆ.ಎಸ್. ಲೀಲಾವತಿಯವರ ಜನನ 1965ರಲ್ಲಿ ಪುತ್ರ ಕೆ.ಎಸ್. ನಟೇಶ ಅವರ ಜನನ (ಈಗ ಇವರು ಅರ್ಮಿಭೂಸೇನಾ ವಿಭಾಗದಲ್ಲಿ ಕರ್ನಲ್ ಆಗಿ ಕಾರ್ಯ ನಿರ್ವಹಿಸುತ್ತಿದ್ದಾರೆ) 1967ರಲ್ಲಿ ಕೆ.ಎಸ್. ಹರೀಶ್ ಅವರ ಜನನ (ಈಗ ಇವರು ನೇತಾಜಿ ಕೈಗಾರಿಕಾ ತರಬೇತಿ ಕೇಂದ್ರದ ಪ್ರಾಂಶುಪಾಲರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ)

ಪ್ರಶಸ್ತಿ ಮತ್ತು ಪುರಸ್ಕಾರಗಳು

- 1969ರಲ್ಲಿ ತುಮಕೂರಿನಲ್ಲಿ ಜರುಗಿದ ರಾಜ್ಯಮಟ್ಟದ ಹಿಂದಿ ಕಾರ್ಯಕರ್ತರ ಸಮ್ಮೇಳನದಲ್ಲಿ ಸನ್ಮಾನ
- 1978ರಲ್ಲಿ ಧಾರವಾಡದಲ್ಲಿ ಜರುಗಿದ ಅಖಿಲ ಭಾರತ ಸೇವಾದಳ ಯುವ ಜನೋತ್ಸವದಲ್ಲಿ ಉತ್ತಮ ಕಾರ್ಯಕರ್ತನೆಂದು ಸನ್ಮಾನ (ಶಾಲೆ/ ಪದಕದೊಂದಿಗೆ)
- 1984ರಲ್ಲಿ ಒರಿಸ್ಸಾ ರಾಜ್ಯದಿಂದ ಭಾರತದಲ್ಲಿ ನೆಹರು ಯುವಕ ಕೇಂದ್ರಗಳಲ್ಲಿ ಉತ್ತಮ ಸಮನ್ವಯಾಧಿಕಾರಿಯೆಂದು ಸನ್ಮಾನ
- 1987ರಲ್ಲಿ ಸಂಸ್ಕೃತ ಪ್ರಚಾರ ಹಾಗೂ ಪಾಂಡಿತ್ಯಕ್ಕಾಗಿ ರಾಜ್ಯ ಸರ್ಕಾರದಿಂದ ಸನ್ಮಾನ.
- 2004ರಲ್ಲಿ ಸಮಾಜ ಸೇವೆ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ್ದಕ್ಕಾಗಿ ಸ್ಮರಿಸಿ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಹಾಗೂ ಸನ್ಮಾನ, ಕರ್ನಾಟಕ ಸರ್ಕಾರ, ಜಿಲ್ಲಾ ಆಡಳಿತ – ಹಾಸನ.
- 2004ರಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಹಾಸನ, ಹಾಸನ ಜಿಲ್ಲೆ 8ನೇ ಸಾಹಿತ್ಯ ಸಮ್ಮೇಳನ
- 2004, ಅರಕಲಗೂಡು ಹಾಸನ ಜಿಲ್ಲೆ ಸನ್ಮಾನ ಫಲಕ.
- 2004ರಲ್ಲಿ ಭಾರತೀಯ ಪರಿಷತ್ತು ಪ್ರಯಾಗ ಉತ್ತರ ಪ್ರದೇಶ, ಹಿಂದಿ ಮಾರ್ತಾಂಡ ಮತ್ತು ಸರಸ್ವತಿ ಸುಶುಮ ಪಂಡಿತ ಎಂಬ ಬಿರುದು ಹಾಗೂ ಸನ್ಮಾನ.
- ನಾಗಾಲ್ಯಾಂಡಿನ ಮೆಡ್ಜಿ ಫೇಮಾದಲ್ಲಿ ನಡೆದ ರಾಷ್ಟ್ರೀಯ ಭಾವೈಕ್ಯತಾ ಶಿಬಿರ ಮತ್ತು ರಾಜಸ್ಥಾನದ ಬಾಡ್ ಮೀರದಲ್ಲಿ ಭಾಗವಹಿಸಿ ಪಡೆದ ಬಹುಮಾನ.
- ತುಮಕೂರು, ಚಿತ್ರದುರ್ಗ, ಹಾಸನ ಮತ್ತು ಮಂಗಳೂರು ಜಿಲ್ಲೆಗಳಲ್ಲಿ ಗ್ರಾಮೀಣಾಭಿವೃದ್ಧಿಗಾಗಿ ನಡೆದ ಶ್ರಮದಾನ ಹಾಗೂ ಶಿಬಿರಗಳಲ್ಲಿ ಅತ್ಯುತ್ತಮವಾದ ಸೇವೆಯನ್ನು ಸಲ್ಲಿಸಿರುವ ಬಗ್ಗೆ ಪ್ರಮಾಣ ಪತ್ರ.
- ಸುವರ್ಣ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ 2006.
- 2004ರಲ್ಲಿ ಕನ್ನಡ ರಾಜ್ಯೋತ್ಸವ ಸಮಿತಿ ಹಾಸನಜಿಲ್ಲೆ, ಹಾಸನ, ಕರ್ನಾಟಕ ಸರ್ಕಾರದಿಂದ ಸನ್ಮಾನ.
- 2005ರಲ್ಲಿ ಮಡೆನೂರು ಗ್ರಾಮಸ್ಥರು, ಶಾಂತಿಗ್ರಾಮ ಹೋಬಳಿ ಹಾಸನ ತಾಲ್ಲೋಕು ಇವರಿಂದ ಶಿಕ್ಷಣ ತಜ್ಞ ಮತ್ತು ಸಮಾಜ ಸೇವಾಕರ್ತರಿಂದ ಸನ್ಮಾನ.

ಗೌಡರ ಕುರಿತ ಸ್ವರಚಿತ ಕವನಗಳು

ಸುಶೀಲೇಗೌಡರು

ಬೇಲೂರು ಪದವಿ ಕಾಲೇಜು ನೋಡ
ಬೆಡಗಿಂದ ಮೆರಸಿಹರು ಸುಶೀಲೇಗೌಡ
ಶಿಸ್ತಿನ ಸಿಪಾಯಿ ಆಗಿಹರವರು
ನಿಷ್ಠೆಯಿಂದ ಕಾರ್ಯನಿರತರಾಗಿರುವರು

ಶಾರದೆಯ ತಮ್ಮೊಡನೆ ಕರ ಹಿಡಿದು ತಂದು
ನೆಸಿಹರು ಕಾಲೇಜು ಗುಡಿಯಲಿಂದು
ಶಾರದೆಯ ಒಲವಿಂದ ತಾ ಮುಂದೆ ಬಂದು
ವಿದ್ಯಾರ್ಥಿಗಳ ಪ್ರಗತಿಗೆ ದುಡಿಯುತಿಹರು ಇಂದು

ಸ್ಫೂರ್ತಿ ಚಿಲುಮೆ ಕ್ರಿಯಾಶೀಲರಿವರೆಂದೂ
ಆಗಿಹರು ಆದರ್ಶ ಯುಕವರಿಗೆಂದೆಂದೂ
ಹೆಜ್ಜೆ ಹೆಜ್ಜೆ ಮುಂದೆ ಬಂದು
ದುಡಿಯುತ್ತಿರುವರು ಕರ್ತವ್ಯವೇ ದೇವರೆಂದು

ವಿದ್ಯಾರ್ಥಿಗಳುನ್ನತಿಗೆ ಕೊಡುವರು ಜೀವವಾ
ಪೋಲಿ ಪುಂಡರ ಮುರಿದವರು ಸೊಂಟವ
ಜ್ಞಾನ ದಾಹವಿದ್ದವರಿಗೆ ಆಗುವರು ದೈವಾ
ಕುಚೇಷ್ಟೆ ಕುಟಿಲತನಗಳಿಗೆ ಆಗಿಹರು ದಾನವ

ದಾದಾಗಿರಿ ಗುಂಡಾಗಿರಿ ನಡೆಯಲಾರದಿಲ್ಲಿ
ಹೇಳುವರು ಅಂತವರಿಗೆ ಜಾಗವಿಲ್ಲ ಇಲ್ಲಿ
ದಿನೆ ದಿನೆ ಬೆಳಗಿಹುದು ಅವರ ಹೆಸರು
ವಿದ್ಯಾ ಸಂಸ್ಥೆಯ ಉನ್ನತಿ ಆಗಿಹುದು ಅವರುಸಿರು

ಬರುವುದು ನೂರಕ್ಕೆ ನೂರು ಫಲಿತಾಂಶ
ಇಡೀ ರಾಜ್ಯವೇ ಗಮನಿಸಬೇಕು ಈ ಅಂಶ
ಗೌಡರ ಶ್ರಮದ ಸಂಕೇತವಿದು
ವಿದ್ಯಾರ್ಥಿಗಳ ಒಳಿತೇ ಗೌಡರು ಬಯಸುವುದು.

ಬಿ.ಎಂ. ಶಿವಕುಮಾರ್,
ದ್ವಿತೀಯ ಬಿ.ಎ., (ಎಚ್.ಇ.ಎಸ್.)

ಸಾರ್ಥಕ ಬದುಕು

ಬಿಟ್ಟ ಹೂವೆಲ್ಲಾ
ಹಿಚಾಗಿ ಕಾಯಾಗಿ ಹಣ್ಣಾಗುವುದಿಲ್ಲ,
ಹುಟ್ಟಿದವರೆಲ್ಲಾ
ಪಟ್ಟಕ್ಕೇರಲಾಗುವುದಿಲ್ಲ.
ಕಟ್ಟಬಯಸುವವರಿಗೆಲ್ಲಾ
ಕಟ್ಟಲಾಗುವುದಿಲ್ಲ,
ಕಟ್ಟಲೆಂದೇ ಹುಟ್ಟಿದವರಲ್ಲಿ
ನೇತಾಜಿ ಗ್ರಾಮಾಭಿವೃದ್ಧಿ
ಟ್ರಸ್ಟಿನ ಆಡಳಿತ ಮಂಡಳಿಯ
ರಾಜ್ಯಪ್ರಶಸ್ತಿ ವಿಜೇತ ಶ್ರೀ ಕೆ.ಆರ್. ಸುಶೀಲೇಗೌಡ
ರಂತಹವರು ಬಹಳಿಲ್ಲ,
ಬೆಳೆದು ಬೆಳಕಾಗಲಿ
ಜಗಕ್ಕೆಲ್ಲ ಈ ಸಂಸ್ಥೆ
ಚಿರಕಾಲ ಚಿರಯಾವಾಗಲಿ

ಹಾರೈಕೆಯೊಂದಿಗೆ,
ಚೌಡುವಳ್ಳಿ ಪುಟ್ಟರಾಜು, ಹಾಸನ

ಸಮನ್ವಯಾಧಿಕಾರಿ

ಆದರು ಗೌಡರು ಸಮನ್ವಯ ಅಧಿಕಾರಿ
ಮಾಡಿದರು ಜನತೆಗೆ ಉಪಕಾರಿ
ಹಾರಿಸಿದರು ಗೌಡರು ನೆ.ಯು.ಕೆ.ಯ ಪತಾಕೆ
ಮೆಚ್ಚಿತು ಜನತೆಯು ದೇಶದ ಅಭಿಮಾನಕ್ಕೆ

ನಡೆಸಿದರು ಯುವ ಮುಂದಾಳತ್ವ ಶಿಬಿರ
ಅರಿತರು ಯುವತಿಯರು ಶಿಬಿರದ ಗಂಭೀರ
ಮಾಡಿಸಿದರು ಹಲವು ರೀತಿಯ ಪ್ರವರ
ತಿಳಿದರು ಯುವತಿಯರು ಅದರ ಸಾರ

ಅವರ ಕೋಪ ಕೆಂಡದಂತೆ ಕಠೋರ
ಆದರೆ ಅವರ ಮನಸ್ಸು ಜೇನಿನಂತೆ ಮಧುರ
ಯಾವುದು ಇಲ್ಲ ಅವರು ತಿಳಿಯದ ವಿಚಾರ
ಸ್ವಯಂಸೇವಕರಾಗಿ ಸಲ್ಲಿಸಿದರು ಸೇವೆ ಅಪಾರ

ಸು – ಸಂಸ್ಕೃತರಾದ
ಶೀ – ಲವಂತರಾದ
ಲೇ – ಖಕರಾದ
ಗೌ – ರವಾನ್ವಿತರಾದ
ಡ – ಗೌಡರೇ, ಸುಶೀಲೇಗೌಡರು

(ಸಂಗ್ರಹ) ಬಿ.ಎಸ್. ಕೃಷ್ಣಪ್ರಸಾದ್ ದ್ವಿತೀಯ ಬಿ.ಎ.

ಸುಶೀಲೇಗೌಡರು

ಹುಟ್ಟಿದ್ದು ಹಳ್ಳಿಯಲ್ಲಿ, ಬೆಳೆದದ್ದು ಹಳ್ಳಿಯಲ್ಲಿ
ಆದರೆ

ಕಂಗೊಳಿಸುತ್ತಿರುವದು ಪಟ್ಟಣದ
ಮನೆ ಮಂದಿಯಲ್ಲಿ

ಹಾಸನದ ಕಲಾ ಮತ್ತು ವಾಣಿಜ್ಯ ಕಾಲೇಜಿಗೆ
ಬುನಾದಿ ಹಾಕಿ, ಬೆಳಕ ಚೆಲ್ಲಿ

ಮುಂದೆ ಸಾಗಿ, ಹೊಯ್ಸಳ ರಾಜ್ಯ ಬೇಲೂರಿನಲ್ಲಿ
ಪ್ರಖ್ಯಾತಿ ಪಡೆದು, ಮತ್ತೆ

ಹಾಸನದ ವಿಜ್ಞಾನ ಕಾಲೇಜು ಮಾದರಿ ಮಾಡಿ
ಬಿರುಗಾಳಿ ಎಬ್ಬಿಸಿ

ಕಂಗೊಳಿಸುತ್ತಿರುವರು ಯಾರು?
ಅವರೇ

ನಮ್ಮ ಪ್ರಾಂಶುಪಾಲರಾದ ಸುಶೀಲೇಗೌಡರು

ನಮ್ಮ ಪ್ರಾಂಶುಪಾಲರು

ಮಿತ್ರ ಮಂಡಲಿ ಎಂಬ ಕಾಲೇಜಿನಲ್ಲಿ
ರತ್ನ ಖಚಿತವಾದ ಪೆನ್ನ ಹಿಡಿದು
ಸಿಂಹಾಸನದ ಸೋಪಾನದ ಮಧ್ಯದಲ್ಲಿ
ಅಮರ ಜೀವಿಯಂತೆ ಕಂಗೊಳಿಸುವ
ನಮ್ಮೊಲವಿನ ಪ್ರಾಂಶುಪಾಲರು ಸುಶೀಲೇಗೌಡರು

ಸಿ.ಆರ್. ಜಗದೀಶ್, ಚೌಡುವಳ್ಳಿ
ದ್ವಿತೀಯ ಬಿ.ಎಸ್‌ಸಿ., (ಸಿಬಿಎಸ್.)

ನಮ್ಮ ಪ್ರಾಂಶುಪಾಲರು

ನಮ್ಮ ಪ್ರಾಂಶುಪಾಲರು
ಎಷ್ಟೊಂದು ವಿಷಯ ಬಲ್ಲರು
ಕಂಚಿನ ಕಂಠವುಳ್ಳವರು
ರಾಜ್ಯ ಪ್ರಶಸ್ತಿಯ ಗೆದ್ದವರು
ತಪ್ಪು ಮಾಡಿದರೆ
ಎರಡೇಟು ಗುದ್ದುವರು
ಯುದ್ಧ ಮಾಡುವವರ
ಸದ್ದಡಗಿಸುವರು
ಇವರೇ ನಮ್ಮ ಸುಶೀಲೇಗೌಡರು

ತಂತ್ರ

ಓ ನನ್ನ ಮಿತ್ರ
ಬರೆಯುತ್ತಿರುವೆ ನಿನಗೊಂದು ಪತ್ರ
ನಮ್ಮ ಪದವಿ ಕಾಲೇಜಕಿನ ಹತ್ರ
ನೀನೊಮ್ಮೆ ಬಂದು ನಿಂತ್ರೆ
ಗೋಚರಿಸುವುದು
ಒಗ್ಗಟ್ಟಿನ ಮಂತ್ರ
ನಿನಗೂ ತಿಳಿಸಲೇನು ಆ ಮಂತ್ರ
ಅದೇ ನಮ್ಮ ಪ್ರಾಂಶುಪಾಲರಾದ
ಸುಶೀಲೇಗೌಡರ ಎದೆಗಾರಿಕೆಯ ತಂತ್ರ

ಕಾಲೇಜು – ಹುಡುಗರು

ನಮ್ಮ ಪದವಿಯ ಕಾಲೇಜು
ಬೇಲೂರಿನ ಇತಿಹಾಸದ
ಸುವರ್ಣ ಮಾಲೆ
ಎಷ್ಟು ಚಂದ ಉಪನ್ಯಾಸಕರು
ಪಾಠ ಮಾಡುವ ಕಲೆ
ಆದರೂ ಸುಮ್ಮನಿರುವುದಿಲ್ಲ
ನಮ್ಮ ಹುಡುಗರ ತಲೆ
ಮಾಡುವರು ಸಾಕಷ್ಟು ತರಲೆ
ಏನು ಹೇಳಲಿ ನಮ್ಮ
ಹುಡುಗರ ಲೀಲೆ.

ಕಾಲೇಜು

ನಮ್ಮ ಪದವಿಯ ಕಾಲೇಜು
ಅಲ್ಲಿಯವರೆಲ್ಲರೂ
ಹೆಚ್ಚು ಕಡಿಮೆ ಟೀನೇಜು
ನಮ್ಮ ಸುಶೀಲೇಗೌಡರು
ಇಲ್ಲದಿದ್ದರೆ
ಅದಾಗುತ್ತಿತ್ತು ಗ್ಯಾರೇಜು.

ಎಂ.ಜೆ. ಅನಂತಮೂರ್ತಿ,
ಪ್ರಥಮ ಬಿ.ಎ. (ಎಚ್.ಇ.ಪಿ.)

ಕಬ್ಬತ್ತಿಯ ಕಲ್ಪದ್ರುಮ

ಪ್ರೊ. ಕೆ.ಆರ್. ಸುಶೀಲೇಗೌಡರ
ವಿದ್ಯಾ ಸೇವಾಸ್ತವನ

ತರುವಾದಿರೈ ಮಹಾ ಪ್ರಾಧ್ಯಾಪಕೋತ್ತಮರೆ,
ಹಿರಿತನದ ಹಾದಿಯಲಿ ಮೇರುಸಾಧನೆಗೈದು
ಗುರುತನಕೆ ಗೌರವವ ತಂದುಕೊಟ್ಟವರಲವೆ
ಮರುಧರೆಗೆ ಮಳೆಯಂತೆ ವಿದ್ಯೆ ನೀಡಿ.

ಶಿಕ್ಷಕರ ನುದ್ಧರಿಸುವಾತ್ಮಸ್ಥೈರ್ಯವ ತುಂಬಿ
ರಕ್ಷಣಾಶೀರ್ವಾದದಾತ್ಮಾಭಿಮಾನವನು
ಶಿಕ್ಷಣವೆ ಪರಮ ಸಂಸ್ಕಾರ ಸಂಸ್ಕೃತಿ ಮಂತ್ರ
ಲಕ್ಷಣವನುಸಿರಿನೊಳು ತುಂಬಿಕೊಂಡೆ

ದಾತಾರದರ್ಶನೋತ್ಸವದುತ್ಸವದಲ್ಲಿ
ನೇತಾರನಾಗಿ ಸಂಪರ್ಕ ಸೇವೆಯ ನೀಡಿ
ನೇತಾಜಿಯಂತರಂಗದ ಶಿಸ್ತು ಸಂಭ್ರಮದ
ಪ್ರೀತಿ ಪಾತ್ರಾಶ್ರಯವ ತುಂಬಿಕೊಂಡೆ

ಕಬ್ಬತ್ತಿಯಂಗಳದ ಭಾವಪೂರ್ಣಿಮೆಯಲ್ಲಿ
ಹಬ್ಬಿರುವ ಸೌಶೀಲ್ಯದಂತರಂಗದ ಬಳ್ಳಿ
ಕಬ್ಬಗಳ ತಳಿರುಟ್ಟು ಚೈತನ್ಯವೀಯುವೋಲು
ಹಬ್ಬಗಳನಾಚರಿಸುತಿರಲಿ ಸತತಂ

ಮಕ್ಕಳೆಡೆಗೊಲವಿನಕ್ಷಯಪಾತ್ರೆ ತುಂಬಿರಲಿ
ನಕ್ಕುನಲಿದಾಡುವಂತಿರುವ ಸಾನ್ನಿಧ್ಯದೊಳು
ಮುಕ್ಕಾಗದಂತಿರಲಿ ಮೈತ್ರಿಮಾರ್ಗೋಲ್ಲಾಸ
ಹಕ್ಕಿಗೂಡಾಗಿರಲಿ ವಿದ್ಯೆಧಾಮ.

(ಜಿ. ಮೋಹನ್‌ಕುಮಾರ್)

(ನೇತಾಜಿ ಪಬ್ಲಿಕ್ ಶಾಲೆಯ ಮುಖ್ಯಸ್ಥರಾದ ಪ್ರೊ. ಕೆ.ಆರ್. ಸುಶೀಲೇಗೌಡರ ಸೌಜನ್ಯಶೀಲ
ವ್ಯಕ್ತಿತ್ವ ಸತ್ಸಂಗವನ್ನು ಕೃತಜ್ಞತೆಯಿಂದ ಸ್ಮರಿಸಿ ಅವರೆದುರೇ ರಚಿಸಿದ
(೨೦-೦೩-೨೦೦೮ ಗುರುವಾರ ಸಂಜೆ ೫ ಗಂಟೆ ಆಶುಕವಿತೆ)

ಪರಾಮರ್ಶನ ಗ್ರಂಥಗಳು

೦೧ ಕರೀಂಖಾನ್ ಎಸ್.ಕೆ. ೧೯೮೮. ಜಾನಪದ ಗಂಗೋತ್ರಿ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

೦೨ ಡಾ. ಹೆಬ್ಬಾಲೆ ಕೆ. ನಾಗೇಶ ಅವರ ಬದುಕು ಬರಹ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ – ೨೦೦೯ (ಎಂ.ಫಿಲ್. ಸಂಶೋಧನಾ ಪ್ರಬಂಧ).

೦೩ ಅನಿತ ಕೆ.ಕೆ., ಶಾಂತವೇರಿ ಗೋಪಾಲಗೌಡರ ಸಾಂಪ್ರದಾಯಿಕ ಮತ್ತು ರಾಜಕೀಯ ಜೀವನ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ. (ಎಂ.ಫಿಲ್. ಸಂಶೋಧನಾ ಪ್ರಬಂಧ).

೦೪ ವೀರಣ್ಣ ದಂಡೆ, ಶ್ರೀಪಾದ ಶೆಟ್ಟಿ, ಸುವರ್ಣ ಜಾನಪದ ಲೇಖನಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ೨೦೦೬.

೦೫ ಬಸವರಾಜ ನೆಲ್ಲಿಸರ, ಶಿವಕುಮಾರ ಸ್ವಾಮಿ ಸಿ.ಎನ್. ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ

೦೬ ಸಿದ್ದಲಿಂಗಯ್ಯ, ಊರುಕೇರಿ, ಅಂಕಿತ ಪುಸ್ತಕ, ಬೆಂಗಳೂರು.

೦೭ ತುಂಬಾಡಿ ರಾಮಯ್ಯ, ಮಣೆಗಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ೨೦೦೬.

೦೮ ನಾ. ಪ್ರಭಾಕರ್, ತ.ರಾ.ಸು. ಕುರಿತು, ತ.ರಾ.ಸು. ಪ್ರತಿಷ್ಠಾನ, ಮೈಸೂರು, ೧೯೯೭.

೦೯ ಸುಶೀಲೇಗೌಡ ಕೆ.ಆರ್. ಕಬ್ಬತ್ತಿರಂಗ, ದೇವಪ್ಪ ಸ್ಮಾರಕ ಪ್ರಕಾಶನ, ಚನ್ನಪಟ್ಟಣ.

೧೦ ನೇತಾಜಿ ಸುಭಾಷ್ ಚಂದ್ರಭೋಸ್ ಹಾರುವ ಹುಲಿ, ಸಾಧನಾ ಪ್ರಕಾಶನ, ೨೦೦೮.

೧೧ ಗಂಗೇಗೌಡ ಕೆ., ಪ್ರತಿನಿಧಿ ಪತ್ರಿಕೆ ವರದಿ, ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿ, ಹಾಸನ.

೧೨ ನಾಗರಾಜ ಟಿ.ಎಸ್. ಒಂದು ಜಾನಪದ ಕವನ ಸಂಗ್ರಹ (ಕಬ್ಬತ್ತಿ ರಂಗ).

೧೩ ಪ್ರತಿನಿದಿ ಪತ್ರಿಕೆ ವರದಿ: ಉತ್ತಮ ಸಮಾಜ ಸೇವಾ ಕಾರ್ಯಕರ್ತ ಪ್ರಶಸ್ತಿ ವಿಜೇತ ಕೆ.ಆರ್. ಸುಶೀಲೇಗೌಡ.

೧೪ ಮಹಾಸಂದ ಶಿವಶರಣಪ್ಪ, ವೀರೇಂದ್ರ ಸಿಂಪಿ ಅವರ ಬದುಕು ಬರಹ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ ೨೦೦೬.

೧೫ ನಾರಾಯಣರಾವ್ ವಿ.ಎಸ್. ಪಂಡಿತ, ಗೋವಿಂದ ವಲ್ಲಭ ಪಂಡಿತ್ ಜೀವನ ಮತ್ತು ಸಾಧನೆ, ಕನ್ನಡ ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೧೬ ಗುರುಲಿಂಗ ಕಾಪಾಸೆ, ಸಿಂಪಿ ಲಿಂಗಣ್ಣ ಅಪ್ಪಟ ಜಾನಪದ ಪ್ರತಿಭೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ೨೦೦೪.

೧೭ ಶಂಕರನಾರಾಯಣ ತೀ.ನಂ., ಜನಪದ ನಡೆ ನುಡಿ, ಕನ್ನಡ ಭಾರತಿ, ೨೦೦೪.

೧೮ ಬೋರಲಿಂಗಯ್ಯ ಹಿ.ಚಿ., ವೈ.ಕೆ. ರಾಮಯ್ಯ ಜೀವನ ಸಾಧನೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ ೨೦೦೬.

೧೯ ಲಕ್ಕಪ್ಪ ಗೌಡ ಎಚ್.ಜೆ., ದಲಿತ ಸೂರ್ಯ, ವಿದ್ಯಾನಿಧಿ ಪ್ರಕಾಶನ, ಗದಗ, ೯ನೇ ಮುದ್ರಣ ೨೦೦೪.

೨೦ ರಾಮಯ್ಯ ಪಿ.ಆರ್., ದಯಾಸಾಗರ ಎಂ. ವೆಂಕಟಕೃಷ್ಣಯ್ಯ ಜೀವನ ಸಾಧನೆ, ಗೀತಾ ಬುಕ್ ಹೌಸ್, ಮೈಸೂರು ೧೯೬೯.

೨೧ ನೆಲಲಾಣಿ ಮಹಂತೇಶ, ಬಸಪ್ಪ ಮಾರೆಪ್ಪ ಚೆನ್ನದಾಸರ ಜೀವನ ಮತ್ತು ಸಾಧನೆ (ತತ್ವಪದಕಾರ), ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೨೨ ಚಂದ್ರಶೇಖರ ಕಂಬಾರ, ೧೯೮೫, ಜಾನಪದ ವಿಶ್ವಕೋಶ ಭಾಗ ೧ ಹಾಗೂ ೨, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೨೩ ಇಮ್ರಾಪೂರ ಸೋಮಶೇಖರ, ೧೯೭೯, ಜಾನಪದ ವಿಜ್ಞಾನ, ಸಮಾಜ ಪುಸ್ತಕಾಲಯ, ಧಾರವಾಡ.

೨೪ ಜವರೇಗೌಡ ದೇ, ೧೯೯೧, ಜಾನಪದ ಅಧ್ಯಯನ, ಚೇತನ ಬುಕ್ ಹೌಸ್, ಮೈಸೂರು.

೨೫ ಜವರೇಗೌಡ ದೇ, ೧೯೮೬, ಜಾನಪದ ವಾಹಿನಿ, ಡಿ.ವಿ.ಕೆ. ಮೂರ್ತಿ, ಮೈಸೂರು.

೨೬ ನಾಗೇಗೌಡ ಎಲ್.ಎಲ್., ೧೯೮೬, ಜಾನಪದ ಗಂಗೋತ್ರಿ, ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿ, ಬೆಂಗಳೂರು.

೨೭ ಬಿರಾದಾರ ಮ.ಗು, ೧೯೮೧, ಜಾನಪದ ಸಮಾಲೋಕನ, ಚಿತ್ಕಳಾ ಪ್ರಕಾಶನ, ಗುಲಬರ್ಗಾ.

೨೮ ಬಿರಾದಾರ ಮ.ಗು., ೧೯೮೭, ಜಾನಪದ ಜೀವಾಳ ಪುಸ್ತಕ ಅಕಾಡೆಮಿ, ಗುಲಬರ್ಗಾ.

೨೯ ಮಾಲಗತ್ತಿ ಅರವಿಂದ, ೧೯೮೫, ಜಾನಪದ ವ್ಯಾಸಂಗ, ಶೈಲಜ ಪ್ರಕಾಶನ, ನೇತಾಜಿ ಗಲ್ಲಿ, ಮುದ್ದೇಬಿಹಾಳ.

೩೦ ಹಿರಿಯಣ್ಣ ಅಂಬಳಿಕ, ೧೯೮೬, ಜಾನಪದ ವೀನಕ್ಷಣೆ, ಪ್ರಜ್ವಲ ಪ್ರಕಾಶನ, ಮೈಸೂರು.

೩೧ ಹಿರಿಯಣ್ಣ ಅಂಬಳಿಕ, ೧೯೮೫, ಜಾನಪದ ಸಂಶೋಧನೆ, ಪ್ರಜ್ವಲ ಪ್ರಕಾಶನ, ಮೈಸೂರು.

೩೨ ಹಿರಿಯಣ್ಣ ಅಂಬಳಿಕ, ೧೯೮೮, ಜಾನಪದ ವೀಕ್ಷಣೆ, ಪ್ರಜ್ವಲ ಪ್ರಕಾಶನ, ಮೈಸೂರು.

೩೩ ಹಿರಿಯಣ್ಣ ಅಂಬಳಿಕ, ೧೯೯೦, ಸೈದ್ಧಾಂತಿಕ ಜಾನಪದ, ಪ್ರಜ್ವಲ ಪ್ರಕಾಶನ, ಮೈಸೂರು.


೩೪ ಹಿರೇಮಠ ಆರ್.ಸಿ., ೧೯೭೯, ಜಾನಪದ ಸಾಹಿತ್ಯ, ದರ್ಶನ, ಭಾಗ-೧, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೩೫ ಎಸ್.ಜೆ.ಸಿ.ಸಿ.ಎ.ಪೈ., ೧೯೭೮, ಜಾನಪದ ವೈಜ್ಞಾನಿಕ ಕ್ಷೇತ್ರಕಾರ್ಯ, ಕರ್ನಾಟಕ ವಿ.ವಿ., ಧಾರವಾಡ.

ವಕ್ತೃ ವಿವರಗಳು

ಕ್ರ ಸಂ.	ಹೆಸರು	ವಯಸ್ಸು	ವೃತ್ತಿ	ಜಾತಿ	ಊರು
೦೧	ಚಂದ್ರೇಗೌಡ ಕೆ.ಬಿ.	೪೮	ಗ್ರಾ.ಪಂ. ಸದಸ್ಯರು ಚನ್ನಂಗಿಹಳ್ಳಿ	ಒಕ್ಕಲಿಗ	ಕಬ್ಬತ್ತಿ
೦೨	ಧರಣೇಂದ್ರ	೩೭	ವ್ಯವಸಾಯ	ಒಕ್ಕಲಿಗ	ಕಬ್ಬತ್ತಿ
೦೩	ನಾಗಣ್ಣ	೫೮	ರೇಷ್ಮೆ ಬೆಳೆಗಾರು	ಒಕ್ಕಲಿಗ	ಕಬ್ಬತ್ತಿ
೦೪	ಯಶೋಧ	೪೫	ಗೃಹಿಣಿ	ಒಕ್ಕಲಿಗ	ಕಬ್ಬತ್ತಿ
೦೫	ಅಮರೇಶ	೩೦	ವಿದ್ಯಾರ್ಥಿ		ಕಬ್ಬತ್ತಿ
೦೬	ಜಯಪ್ರಭು	೨೫	ನೌಕರಸ್ಥ	ಒಕ್ಕಲಿಗ	ಕಬ್ಬತ್ತಿ
೦೭	ಬೀರಲಿಂಗಯ್ಯ	೫೦	ಕೂಲಿ		ಕಬ್ಬತ್ತಿ
೦೮	ಕೆ.ಎಸ್. ಹರೀಶ್		ಪ್ರಾಂಶುಪಾಲರು		ಹಾಸನ
೦೯	ಶ್ರೀಮತಿ ಶಶಿಕಲಾ		ಶಿಕ್ಷಕಿ		ಹಾಸನ
೧೦	ಕೆ.ಎಸ್. ನಟೇಶ್		ಕರ್ನಲ್		
೧೧	ಶ್ರೀಮತಿ ನಿರೂಪಮ		ಶಿಕ್ಷಕಿ		
೧೨	ಮಲ್ಲಿಕಾರ್ಜುನ	೨೫	ವಿದ್ಯಾರ್ಥಿ		ಹಾಸನ
೧೩	ಮಲ್ಲಪ್ಪ	೨೨	ವಿದ್ಯಾರ್ಥಿ		ಹಾಸನ
೧೪	ಶರಣಪ್ಪ	೩೦	ವಕೀಲರು		ಹಾಸನ
೧೫	ಶಾಮಲ	೨೧	ವಿದ್ಯಾರ್ಥಿ		ಹಾಸನ
೧೬	ಬಸಪ್ಪ	೨೫	ವಿದ್ಯಾರ್ಥಿ		ಹಾಸನ
೧೭	ಚಂದ್ರಪ್ಪ	೩೦	ವಿದ್ಯಾರ್ಥಿ		ಹಾಸನ
೧೮	ರಂಗಪ್ಪ	೨೯	ವಿದ್ಯಾರ್ಥಿ		ಹಾಸನ
೧೯	ನಾಗರಾಜ	೩೦	ವಿದ್ಯಾರ್ಥಿ		ಹಾಸನ
೨೦	ಜ್ಯೋತಿ	೨೬	ವಿದ್ಯಾರ್ಥಿ		ಹಾಸನ
೨೧	ನಿರ್ಮಲ	೨೭	ವಿದ್ಯಾರ್ಥಿ		ಹಾಸನ
೨೨	ಕಮಲಮ್ಮ	೫೬	ಗೃಹಿಣಿ		ಕಬ್ಬತ್ತಿ
೨೩	ತಿಮ್ಮಕ್ಕ	೫೯	ಗೃಹಿಣಿ		ಕಬ್ಬತ್ತಿ
೨೪	ರಾಜಲಕ್ಷ್ಮಿ	೪೯	ಗೃಹಿಣಿ		ಕಬ್ಬತ್ತಿ

ವಂಶವೃಕ್ಷ



ಶ್ರೀ ನರಸೇಗೌಡರು
ಶ್ರೀ ರಂಗೇಗೌಡ
ಶ್ರೀಮತಿ ಪುಟ್ಟಮ್ಮ
ಶ್ರೀ ನಿಂಗೇಗೌಡ
ಶ್ರೀ ಕೆಂಪೇಗೌಡ
ಶ್ರೀ ಸುಶೀಲೇಗೌಡ
ಶ್ರೀಮತಿ ಕಮಲಮ್ಮ
ಶ್ರೀಮತಿ ಕೆ.ಎಸ್. ಲೀಲಾವತಿ
ಶ್ರೀ ಎ.ಆರ್. ಕುಮಾರಸ್ವಾಮಿ
ಶ್ರೀ ಕೆ.ಎಸ್. ನಟೇಶ್
ಶ್ರೀಮತಿ ನಿರೂಪಮ
ಶ್ರೀ ಕೆ.ಎಸ್. ಹರೀಶ್
ಶ್ರೀಮತಿ ಶಶಿಕಲಾ
ಪ್ರಗತಿ
ಪ್ರತೀಕ
ಕೆ.ಎಸ್. ಲೋಹಿತ
ಕೆ.ಎಸ್. ಪುನೀತ
ಕೆ.ಎಚ್. ಹರೀಶ್

MAP SHOWING PUBLIC HEALTH FACILITY
HASSAN DISTRICT



INDEX

- HassanPHCselt
- HassanDHselt
- HassanCHCselt
- HassanSDHselt
- HassanTLHselt
- HassanTalukBoundary
- HassanCHC2
- HassanPHC1



ಪ್ರಶಸ್ತಿ ಪತ್ರಗಳು



केशरीनाथ त्रिपाठी

अभिनन्दन ग्रन्थ

समर्पण समारोह में समुपस्थित सम्मान्य अतिथि
सारस्वती सुषमा मंडित

प्रो० के. आर. सुशील गौड़

की भारती परिषद्, प्रयाग द्वारा सादर-सश्रद्ध

सारस्वती-समभ्यर्चना

श्रीधर शास्त्री, महामंत्री
२१ नवम्बर, २००४



NATIONAL & INTERNATIONAL COMPENDIUM

NIC

NEW DELHI

LIFE TIME ACHIEVEMENT AWARD

Presented to

PROF. K.R. SUSHEELE GOWDA

for outstanding achievements in chosen field of activity

Issued this ......21st............... day of ....August..........2006

National & International Compendium, 804, Rohit House, 3, Tolstoy Marg, Con. Place, New Delhi

Dr. N. S. N. Babu, Ph.D.

Executive Director

भारती परिषद्, प्रयाग

राष्ट्र तथा राष्ट्रभाषा की आराधना ही
जिनके जीवन का लक्ष्य बन गया है-ऐसे
राष्ट्रभाषा प्रचार सत्र के सोमयाजी ऋत्विक्

प्रो० के. आर. सुशीले गौड़

को

भारती परिषद्, प्रयाग

हिन्दी मार्तण्ड

की मानद उपाधि से समलङ्कृत करता है।
एतदर्थ यह उपाधि-पत्र सहर्ष प्रदान करता है।

लखनऊ
२० नवम्बर २००[illegible]

श्रीधर शास्त्री
महामंत्री

JAI HIND Phone : 23993

BHARATH SEVA DALA

(REGD.)

President : Padmashri Dr. M. C. MODI
Vice-President : Deenabandhu V. R. NAIDU

General Secretary :
K. T. Channabasava Gowda

Treasurer :
S. R. Aswath

Head Office
KUMARA KRUPA ROAD,
BANGALORE - 1

No. 2554/67-68

Date 4th March 1968.

CERTIFICATE

This is to certify that Shri.K.R.Susheele Gowda, Kendra Nayak of Bharath Seva Dal and Kannada Pandit, Chitradurga has been rendering honarary service as a staunch Bharath Seva Dala Worker ever since 1950. He has worked in various capacities as Camp Chief and Secretary in many Seva Dal Training Camps and Social Service Programmes.

He is training the Volunteers even to this day for Prathama Training and extra curricular activities.

He bears a good conduct and character.

K. T. Channabasava Gowda

General Secretary.

ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

ವೇದವಾಙ್ಮಯದಲ್ಲಿ / ಶಾಸ್ತ್ರವಾಙ್ಮಯದಲ್ಲಿ ದೀರ್ಘಕಾಲ ಸಲ್ಲಿಸಿದ

ಗಣನೀಯ ಸೇವೆಗಾಗಿ

ಶ್ರೀ ಕೆ. ಆರ್. ಸುಕೇಲೇಗೌಡ,

ಹಾಸನ.

ಇವರಿಗೆ ಈ ರಾಜ್ಯ ಪ್ರಶಸ್ತಿಯನ್ನು ಕೊಡಲಾಗಿದೆ.

ನಿರ್ದೇಶಕರು
ಸಾರ್ವಜನಿಕ ಶಿಕ್ಷಣ ಇಲಾಖೆ

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

ಬೆಂಗಳೂರು,

ದಿನಾಂಕ: 27.6.1987

GOVERNOR
KARNATAKA

RAJ BHAVAN
BANGALORE

No.GS/PS/AWD/06 November 1, 2006

Dear Shri K.R. Sushile Gowda,

I am happy to learn that the Government of Karnataka, in recognition and appreciation of the people of the State for the valuable services rendered by your Trust in its chosen field, has decided to honour it with the Rajyotsava Award for the year 2006. It is a well-deserved award in the light of the work that the Trust has done throughout and continue to do so for public good.

I send you my greetings and felicitations. I wish the Trust every success in all that it has been endeavouring to do.


With kind regards,

Yours sincerely,

T. N. Chaturvedi

(T.N. CHATURVEDI)

Shri K.R. Sushile Gowda
Managing Trustee,
Netaji Rudel Development Trust (R)
Shri Ranganatha Nilaya
Vidyanagar.
HASSAN - 573201.



ಭಾರತ ಸೇವಾದಳ

ಸನ್ಮಾನ ಪತ್ರ

ಶ್ರೀಮತಿ / ಶ್ರೀ ಸುಶೀಲಗೌಡ, ಕೆ. ಆರ್.

ಮಂಗಳೂರು

ಭಾರತ ಸೇವಾದಲದಲ್ಲಿ

ನಿಷ್ಕಾಮಯುತ ಸೇವೆ ಸಲ್ಲಿಸಿರುವುದನ್ನು ಸ್ಮರಿಸಲು

ಸಂತೋಷಿಸುತ್ತೇವೆ.

ಮುಖ್ಯ ಅತಿಥಿಗಳು — ಅಧ್ಯಕ್ಷರು

ತಾ॥ 31.12.78.

भारत सेवा दल

सेवाहि परमो धर्मः

NATIONAL INSTITUTE OF COMMUNITY HEALTH

(Incorporated under the Indian Societies Act XXI, 1860 for promotion of Psycho-Physical Health)

BHUBANESWAR-751002

Certified that Shree K. R. Susheela Gowda

of ______________ ~~affiliated under~~ the Nehru Yuvak Kendra Hassan is declared as the best community volunteer for the year 1984 rendering valuable humanitarian services to the society in the field of Community welfare & devoted to the cause of "the charity to others".

In testimony to his/her noble gesture this **CERTIFICATE OF HONOUR** *is hereby awarded.* at the State level.

Given under the common seal of the Institute this day of Jan 1985

NONICH/ 685 / 19 85

BHUBANESWAR

NICH
SANTARAPUR
PLOT NO.-931
BBSR-751002

PRESIDENT / CHAIRMAN.

EXECUTIVE SECRETARY 1.1.85

NEHRU YUVA KENDRA MYSORE.

(N Y K SANGATHAN, NEW DELHI)

U S S R FESTIVAL IN INDIA

Mr/~~Miss~~ ......K.R. SUSHEELE GOWDA.......................................

representing Nehru Yuva Kendra......HASSAN.....................................

has participated in the Inter-State Youth Festival of Folk Art and Culture organised by Nehru Yuva Kendra, Mysore, Karnataka, from December 20-24 1987 in Connection with the visit of the U S S R Youth delegation to Karnataka.

(K. S. NAGARAJ)	**(V. P. BALIGAR, I.A.S.)**
Youth Co-ordinator	Deputy Commissioner
Nehru Yuva Kendra, Mysore.	Mysore District, Mysore.



ಕರ್ನಾಟಕ ಸರ್ಕಾರ

ಜಿಲ್ಲಾ ಆಡಳಿತ-ಹಾಸನ

ಕನ್ನಡ ರಾಜ್ಯೋತ್ಸವ ಸಮಿತಿ-2004

ಹಾಸನ ಜಿಲ್ಲೆ, ಹಾಸನ

ಅಭಿನಂದನಾ ಪತ್ರ

ಶ್ರೀ ಸುಶೀಲೇಗೌಡ ನಿವೃತ್ತ ಪ್ರಾಂಶುಪಾಲರು, ಹಾಸನ

2004 ನೇ ಕನ್ನಡ ರಾಜ್ಯೋತ್ಸವ ದಿನಾಚರಣೆಯಂದು ....ಸಮಾಜ ಸೇವೆ..................ಕ್ಷೇತ್ರದಲ್ಲಿ

ಗಣನೀಯ ಸೇವೆ ಸಲ್ಲಿಸಿದ್ದಕ್ಕಾಗಿ ಸ್ಮರಿಸಿ ಇವರನ್ನು ಸನ್ಮಾನಿಸಿ ಅಭಿನಂದಿಸಲಾಗಿದೆ.

ಜಿಲ್ಲಾಧಿಕಾರಿಗಳು ಮತ್ತು
ಅಧ್ಯಕ್ಷರು, ಕನ್ನಡ ರಾಜ್ಯೋತ್ಸವ ಸಮಿತಿ
ಹಾಸನ ಜಿಲ್ಲೆ, ಹಾಸನ

ಜಿಲ್ಲಾ ಉಸ್ತುವಾರಿ ಸಚಿವರು
ಹಾಸನ ಜಿಲ್ಲೆ

ಛಾಯ ಚಿತ್ರಗಳು



ಪ್ರೊ. ಕೆ.ಆರ್. ಸುಶೀಲೇಗೌಡ, ಶ್ರೀಮತಿ ಕಮಲಮ್ಮ ದಂಪತಿಗಳು











೧೯೭೬ ರಲ್ಲಿ ಕಬ್ಬತ್ತಿ ಗ್ರಾಮದಲ್ಲಿ ನಡೆದ ಜಾನಪದ ಕಲಾಮೇಳದಲ್ಲಿ
ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ್, ಧರ್ಮಸ್ಥಳದ ಧರ್ಮಾಧಿಕಾರಿ
ಡಾ॥ ವೀರೇಂದ್ರ ಹೆಗ್ಗಡೆಯವರು ಹಾಗೂ ಪ್ರೊ॥ ಎಚ್.ಸಿ. ಲಕ್ಕಪ್ಪಗೌಡ ಅವರೊಂದಿಗೆ



೧೯೮೪ ರಲ್ಲಿ ಕಬ್ಬತ್ತಿ ಗ್ರಾಮದಲ್ಲಿ ನಡೆದ ಜಾನಪದ ವಿವಿಧ ಕಲೆಗಳಾದ ಕೋಲಾಟ,
ಸೋಬಾನೆಪದ, ಜಾನಪದ ಗೀತೆಗಳ ಸಮಾರೋಪ ಸಮಾರಂಭದಲ್ಲಿ
ಆಗಿನ ವಿದ್ಯಾಮಂತ್ರಿ ಶ್ರೀ ಬಿ. ರಾಚಯ್ಯ ಮತ್ತು ಲೋಕೋಪಯೋಗಿ ಸಚಿವರಾಗಿದ್ದ
ಶ್ರೀ ಹೆಚ್.ಡಿ. ದೇವೇಗೌಡ ಅವರೊಂದಿಗೆ







ವಿವಿಧ ಸಂಘ ಸಂಸ್ಥೆಗಳಿಂದ ಪ್ರೊ॥ ಕೆ.ಆರ್. ಸುಶೀಲೇಗೌಡರವರಿಗೆ
ಸಂದ ಪ್ರಶಸ್ತಿ ಹಾಗೂ ಅಭಿನಂದನಾ ಪುರಸ್ಕಾರಗಳು



೧೯೯೮ರಲ್ಲಿ ಬೇಲೂರಿನಲ್ಲಿ ನಡೆದ ಜಾನಪದ ಕಲಾಮೇಳದಲ್ಲಿ ಹೆಸರಾಂತ
ನೇತ್ರ ತಜ್ಞರಾದ ಡಾ. ಎಂ.ಸಿ. ಮೋದಿ ಅವರೊಡನೆ



ರಾಷ್ಟ್ರೀಯ ಸೇವಾ ಯೋಜನೆ ಶಿಬಿರಾರ್ಥಿಗಳೊಂದಿಗೆ
ಪ್ರೊ.ಕೆ.ಆರ್. ಸುಶೀಲೇಗೌಡರು



ನೆಹರು ಯುವ ಸಪ್ತಾಹ ಆಚರಣ ಕಾರ್ಯಕ್ರಮದಲ್ಲಿ
ಪ್ರೊ. ಕೆ. ಆರ್ ಸುಶೀಲೇಗೌಡರು ಮಾತನಾಡುತ್ತಿರುವುದು








ಚಿತ್ರದುರ್ಗದಲ್ಲಿ ನಡೆದ ಜಿಮ್ನಾಶಿಂ ಸ್ಪರ್ಧೆಯಲ್ಲಿ ವಿಜೇತರಾದ ತಂಡದೊಂದಿಗೆ



ರಾಜ್‌ಕುಮಾರ್ ನೈಟ್ ಕಾರ್ಯಕ್ರಮದಲ್ಲಿ ರಾಜ್ ಕುಮಾರ್‌ರವರೊಂದಿಗೆ







ಮನೆ ದೇವರು ಶ್ರೀ ಕಬ್ಬತ್ತಿ ರಂಗನಾಥಸ್ವಾಮಿ



ಕಬ್ಬತ್ತಿ : ಕೂರ್ಮಾವತಾರದಲ್ಲಿರುವ ರಾಗಿ ಗುಡ್ಡ ದೃಶ್ಯ








ವಕ್ತೃಗಳೊಂದಿಗೆ ಸಂದರ್ಶನ



ವಕ್ತೃಗಳೊಂದಿಗೆ ಸಂದರ್ಶನ







ರಾಷ್ಟ್ರೀಯ ಸೇವಾ ಯೋಜನಾ ಘಟಕದಲ್ಲಿ
ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡುತ್ತಿರುವುದು



ಕರ್ನಾಟಕ ಸರ್ಕಾರದ ವತಿಯಿಂದ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ
ಮಂಗಳೂರಿನಲ್ಲಿ ಸಂಸ್ಕೃತ ಉಚಿತ ಶಿಕ್ಷಣ ೨೫ ವರ್ಷಗಳ ಕಾಲ
ಗಣನೀಯ ಸೇವೆ ಸಲ್ಲಿಸಿದ ಸುಶೀಲೇಗೌಡರಿಗೆ ಆಗಿನ ವಿದ್ಯಾ ಮಂತ್ರಿಗಳಾದ
ಸೋಮಶೇಖರ್ ಸನ್ಮಾನಿಸುತ್ತಿರುವುದು







ಜಿಲ್ಲಾಧಿಕಾರಿಗಳಾದ ರಾಜು ಪ್ರೇಮಕುಮಾರ್, ಕನ್ನಡ ಮತ್ತು
ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ
ಶ್ರೀ ಶಂಕರಪ್ಪ ಅವರೊಂದಿಗೆ ಸುಶೀಲೇಗೌಡರು



ಹಾಸನದಲ್ಲಿ ಸೋಮವಾರ ಕನ್ನಡ ರಾಜ್ಯೋತ್ಸವದ ಅಂಗವಾಗಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಸಮಾಜ ಸೇವಾ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ ಪ್ರೊ. ಸುಶೀಲೇಗೌಡ ಅವರಿಗೆ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಡಿ. ರೇವಣ್ಣ ಪ್ರಶಸ್ತಿ ನೀಡಿ ಸನ್ಮಾನಿಸಿದರು. ಉಪ ಆಯುಕ್ತರಾದ ಡಾ. ಮಂಜುಳಾ, ಜಿಲ್ಲಾಧಿಕಾರಿ ಕೆ.ಎಚ್. ಅಶ್ವಥನಾರಾಯಣಗೌಡ, ಶಾಸಕ ಎಸ್.ಎಂ. ಆನಂದ್, ಮಾಜಿ ಸಂಸದ ಎಚ್.ಕೆ. ಜವರೇಗೌಡ, ಶಾಸಕ ಎಚ್.ಎಸ್. ಪ್ರಕಾಶ್ ಚಿತ್ರದಲ್ಲಿದ್ದಾರೆ.








ಎಸ್.ಕೆ. ಕರೀಂ ಖಾನ್ ರವರೊಂದಿಗೆ ಸುಶೀಲೇಗೌಡರು



ಕರ್ನಾಟಕ ರಾಜ್ಯ ಉಚ್ಛ ನ್ಯಾಯಾಲಯದ ನಿವೃತ್ತ ಮುಖ್ಯ ನ್ಯಾಯಾಧೀಶರಾದ
ನಿಟ್ಟೂರು ಶ್ರೀನಿವಾಸ ಅಯ್ಯಂಗಾರ್ ಅವರೊಂದಿಗೆ ಸುಶೀಲೇಗೌಡರು







ಅರಳಿ ಮತ್ತು ಬೇವಿನ ವೃಕ್ಷ-ವಿವರಗಳಿಗೆ ಪುಟ-೧೩ ನೋಡಿ



ಕಬ್ಬತ್ತಿ: ಸುಶೀಲೇಗೌಡರ ಮೂಲ ನಿವಾಸದ ಅವಶೇಷ







ನೇತಾಜಿ ಸುಭಾಷ್ ಚಂದ್ರಬೋಸರ ಜನ್ಮ ದಿನಾಚರಣೆ
ಸಂದರ್ಭದಲ್ಲಿ ಮಾತನಾಡುತ್ತಿರುವುದು



ಪ್ರೊ. ಕೆ. ಅರ್ ಸುಶೀಲೇಗೌಡರೊಂದಿಗೆ ಸಂದರ್ಶನ







ಕಬ್ಬತ್ತಿಯಲ್ಲಿ ಸುಶೀಲೇಗೌಡರ ಮುಂದಾಳತ್ವದಲ್ಲಿ
ನಿರ್ಮಾಣವಾಗುತ್ತಿರುವ ದೇವಾಲಯ



ನೇತಾಜಿ ಪಬ್ಲಿಕ್ ಸ್ಕೂಲ್ ಆವರಣ